ದತ್ತಿ ಉಪನ್ಯಾಸಮಾಲೆ—೨

ದತ್ತಿ ಉಪನ್ಯಾಸಗಳು

೧೯೮೪

'ಶ್ರೀ' ಅವರ ಇಂಗ್ಲಿಷ್ ಗೀತಗಳು

ಪ್ರೊ॥ ಜಿ. ವೆಂಕಟಸುಬ್ಬಯ್ಯ

★

'ಅಶ್ವತ್ಥಾಮನ್' ಮತ್ತು 'ಆಗ್ರಹ'

ಪ್ರೊ॥ ಎಲ್. ಎಸ್. ಶೇಷಗಿರಿರಾವ್

★

ಮೈಲಾರ ದೇವರು

ಡಾ॥ ಸೂರ್ಯನಾಥ ಕಾಮತ್

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು-೧೯

ಬೆಲೆ: ರೂ. ೧೦-೦೦

ಮೂರು ದತ್ತಿ ಉಪನ್ಯಾಸಗಳು—೧೯೮೮

'ಶ್ರೀ' ಅವರ ಇಂಗ್ಲಿಷ್ ಗೀತಗಳು

ಪ್ರೊ॥ ಜಿ. ವೆಂಕಟಸುಬ್ಬಯ್ಯ

★

'ಅಶ್ವತ್ಥಾಮನ್' ಮತ್ತು 'ಆಗ್ರಹ'

ಪ್ರೊ॥ ಎಲ್. ಎಸ್. ಶೇಷಗಿರಿರಾವ್

★

ಮೈಲಾರ ದೇವರು

ಡಾ॥ ಸೂರ್ಯನಾಥ ಕಾಮತ್

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ

54, 3ನೆಯ ಅಡ್ಡಬೀದಿ, ಗವಿಪುರಂ ವಿಸ್ತರಣ

ಬೆಂಗಳೂರು–19

ಬೆಲೆ: ರೂ. ೧೦–೦೦

THREE MEMORIAL LECTURES 1984: By Prof. G Venkatasubbiah on 'English Geethagalu of B. M. Sri'; Prof. L S. Seshagiri Rao on 'Aswatthaman' of B M Sri & 'Aagraha' of V. Si.; and Dr. Suryanatha Kamath on 'Maylaara Devaru', respectively. Published by B M Sri Memorial Foundation, 54, Gavipuram Extension, Bangalore-560019. Demy 8 vo. pp. 50; 1985.

Price: Rs. 10-00

PRINTED AT SRI LAKSHMI PRINTERS, BEHIND SUBRAMANYA OIL MILL, NEAR KATHARAGUPPA, BANASHANKARI 3rd STAGE, BANGALORE-560 085

ಮುನ್ನುಡಿ

ಈ ಪುಸ್ತಕದಲ್ಲಿ ಬೆಳಕು ಕಾಣುತ್ತಿರುವ ಮೂವರು ಮಹನೀಯರೂ ಪ್ರಥಿತ ಯಶಸ್ಕರಾದ ಶ್ರೇಷ್ಠ ವಿದ್ವಾಂಸರು. ಕರ್ನಾಟಕದ ವಿದ್ವತ್‌ಪ್ರಪಂಚಕ್ಕೆ ಅವರ ವಿದ್ವತ್ತನ್ನಾಗಲಿ ವಿವಿಧ ಕ್ಷೇತ್ರಗಳಲ್ಲಿ, ವಿವಿಧ ರೀತಿಗಳಲ್ಲಿ ಅವರು ಕನ್ನಡ ಭಾಷೆ ಸಾಹಿತ್ಯಗಳಿಗೆ ಸಲ್ಲಿಸಿರುವ, ಸಲ್ಲಿಸುತ್ತಿರುವ ಸೇವೆಯನ್ನು ಕುರಿತು ಹೊಸದಾಗಿ ಪರಿಚಯಮಾಡಿಕೊಡುವ ಅಗತ್ಯವಿಲ್ಲ. ಯಾವುದೇ ಸಂಸ್ಥೆಯಲ್ಲಿ ಏರ್ಪಾಡಾಗುವ ದತ್ತಿ ಉಪನ್ಯಾಸಗಳು ಪ್ರಾಯಿಕವಾಗಿ ವೈದುಷ್ಯಪೂರ್ಣವೂ ವಿಚಾರಪ್ರಚೋದಕವೂ, ಕೆಲವು ಸಂದರ್ಭಗಳಲ್ಲಿ ಸಂಶೋಧನಾತ್ಮಕವೂ ಆಗಿಯೇ ಇರುತ್ತವೆ. ಇಂಥ ಉಪನ್ಯಾಸಗಳನ್ನು ತಾವು ಗುರುತುಹಾಕಿಕೊಂಡ ಟಿಪ್ಪಣಿಗಳ ಆಧಾರದ ಮೇಲೆ ಮಾಡಿ, ತರುವಾಯ ಬರಹರೂಪಕ್ಕೆ ಇಳಿಸಿಕೊಡದಿರುವ ಸಂದರ್ಭಗಳೂ ಉಂಟು ; ಬರೆದುಕೊಟ್ಟ ಉಪನ್ಯಾಸಗಳು ಕತ್ತಲೆಯ ಮೂಲೆಯನ್ನು ಸೇರಿದ್ದರೆ, ಅವು ನಮ್ಮ ಗಮನಕ್ಕೆ ಬಂದಿಲ್ಲ. ಅಚ್ಚಾಗದೆ ಇರುವ ಅಂಥ ಸಂದರ್ಭಗಳೂ ಇದ್ದಾವು. ಅದು ಹೇಗಾದರೂ ಇರಲಿ. ಪ್ರಕೃತದಲ್ಲಿ ಪ್ರತಿಷ್ಠಾನದಲ್ಲಿ ನಾಲ್ಕು ಉಪನ್ಯಾಸ ದತ್ತಿ ನಿಧಿಗಳು ಏರ್ಪಟ್ಟಿವೆ. ಎರಡು ದತ್ತಿ ನಿಧಿಗಳು 10,000 ರೂಪಾಯಿಗಳ ಮೌಲ್ಯದ್ದಾಗಿದ್ದು, ಆ ನಿಧಿಗಳ ಉಪನ್ಯಾಸಗಳನ್ನು ಚಿಕ್ಕ ಪುಸ್ತಿಕೆಯ ರೂಪದಲ್ಲಿ ಪ್ರಕಟಿಸುವುದು ಸಾಧ್ಯ. ಉಳಿದ ಎರಡು ದತ್ತಿಗಳ ಮೊತ್ತ ಮುದ್ರಣಕಾರ್ಯಕ್ಕೆ ಒದಗಿಬರುವಷ್ಟು ಪ್ರಮಾಣದ್ದಲ್ಲ. ಪ್ರತಿಷ್ಠಾನವು "ಲೋಚನ" ಎಂಬ ವಿದ್ವತ್‌ಪತ್ರಿಕೆಯನ್ನು ಪ್ರಾರಂಭ ಮಾಡಿರುವುದರಿಂದ, ಅಂಥ ಉಪನ್ಯಾಸಗಳನ್ನು ಆ ಪತ್ರಿಕೆಯಲ್ಲೂ ಪ್ರಕಟಮಾಡಲು ಸಾಧ್ಯ ಆಗಬಹುದು. ಎಲ್ಲ ದತ್ತಿ ದಾನಿಗಳೂ ಭಾರಿ ಮೊತ್ತದ ನಿಧಿಯನ್ನು ನೀಡಲು ಸಾಧ್ಯ ಆಗದೆ ಇರಬಹುದು. ಎಲ್ಲ ಮುದ್ರಣಸಾಮಗ್ರಿಗಳ ಬೆಲೆಗಳೂ ಏರುತ್ತಿರುವ ಇಂದಿನ ದಿನಗಳಲ್ಲಿ ಘನ ವಿದ್ವಾಂಸರುಗಳಿಂದ ದತ್ತಿ ಉಪನ್ಯಾಸಗಳನ್ನು ಏರ್ಪಡಿಸಬೇಕಾದರೆ, ಕನಿಷ್ಠಪಕ್ಷ 3,000 ರೂಪಾಯಿಗಳನ್ನಾದರೂ ದಾನಮಾಡಿದರೆ ಒಳಿತು ; 5,000 ರೂಪಾಯಿಗಳನ್ನು ನೀಡಿದರೆ ಮೇಲು, ಎಂದು ವಿನಮ್ರತೆಯಿಂದ ಸೂಚಿಸಿ, ಪ್ರತಿಷ್ಠಾನದಲ್ಲಿ ದತ್ತಿ ಉಪನ್ಯಾಸಗಳ ಸಂಖ್ಯೆ ಹೆಚ್ಚುವಂತೆ ದಾನಿಗಳು ಮುಂದೆ ಬರಲಿ ಎಂದು ಆಶಿಸುತ್ತೇನೆ.

ಇನ್ನುಮುಂದೆ ಪ್ರತಿವರ್ಷ ನಡೆಯುವ ಉಪನ್ಯಾಸಗಳು ಅಚ್ಚಾಗುವಂತೆ ಏರ್ಪಡಿಸಲು ಪ್ರಯತ್ನಿಸುತ್ತೇವೆ. ಇದಕ್ಕೆ ವಿದ್ವದಭಿಮಾನಿಗಳ ಕ್ರಿಯಾಶೀಲ ಉತ್ತೇಜನ ಪ್ರತಿಷ್ಠಾನಕ್ಕೆ ಅಗತ್ಯವಾಗಿದೆ.

ಬೆಂಗಳೂರು–೧೯
೧೫–೨–೧೯೮೫

ನಿಟ್ಟೂರು ಶ್ರೀನಿವಾಸ ರಾವ್
ಅಧ್ಯಕ್ಷ

ಬಿನ್ನಹ

ಈಗ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಲ್ಲಿ ನಾಲ್ಕು ದತ್ತಿ ನಿಧಿಗಳು ಸ್ಥಾಪಿತವಾಗಿವೆ : ಬಿ.ಎಂ.ಶ್ರೀ. ಅವರ ಹೆಸರಿನಲ್ಲಿ ಅವರ ಮೊಮ್ಮಕ್ಕಳಾದ ಡಾ॥ ಎಸ್. ಜಿ. ಶ್ರೀಕಂಠಯ್ಯನವರು ನೀಡಿರುವ ದತ್ತಿ : ಡಾ॥ ಬಿ. ಸಿ. ರಾಮಚಂದ್ರಶರ್ಮ ಅವರು ತಮ್ಮ ತಂದೆ ಬಿ. ಚಂದ್ರಶೇಖರ ಶರ್ಮ ಅವರ ಹೆಸರಿನಲ್ಲಿ ನೀಡಿರುವ ದತ್ತಿ : ದಿವಂಗತ ಎಸ್. ಶ್ರೀಕಂಠಯ್ಯನವರ ನೆನಪಿಗಾಗಿ ಅವರ ಮಕ್ಕಳಾದ ಶ್ರೀ ಎಸ್. ರಾಮಚಂದ್ರ ಅವರು ಸ್ಥಾಪಿಸಿರುವ ದತ್ತಿ : ಡಾ॥ ಶಂ. ಬಾ. ಜೋಶಿ ಅವರ ಗೌರವಾರ್ಥ ಶಂ. ಬಾ. ಜೋಶಿ ಸನ್ಮಾನ ಸಮಿತಿ ಹಾಗೂ ಅವರ ಮಕ್ಕಳಾದ ಡಾ॥ ಮಧುಸೂದನ ಜೋಶಿ ಅವರು ಸ್ಥಾಪಿಸಿರುವ ದತ್ತಿ. ಬಿ.ಎಂ.ಶ್ರೀ. ಜನ್ಮಶತಮಾನೋತ್ಸವದ ಅಂಗವಾಗಿ ಮೇಲ್ಕಂಡ ದತ್ತಿ ನಿಧಿಗಳ ಉಪನ್ಯಾಸಗಳನ್ನು 1984 ಆಗಸ್ಟ್ 8, 9, 10 ಮತ್ತು 11 ದಿನಾಂಕಗಳಂದು ನಡಸಲಾಯಿತು. ಬಿ.ಎಂ.ಶ್ರೀ. ಸ್ಮಾರಕೋಪನ್ಯಾಸವನ್ನು ("ಇಂಗ್ಲಿಷ್ ಗೀತಗಳು") ಪ್ರೊ॥ ಜಿ. ವೆಂಕಟಸುಬ್ಬಯ್ಯನವರೂ ಬಿ. ಚಂದ್ರಶೇಖರ ಸ್ಮಾರಕೋಪನ್ಯಾಸವನ್ನು ("ಶ್ರೀ ಅವರ 'ಅಶ್ವತ್ಥಾಮನ್' ಮತ್ತು ವಿ. ಸೀ. ಅವರ 'ಆಗ್ರಹ') ಪ್ರೊ॥ ಎಲ್. ಎಸ್. ಶೇಷಗಿರಿರಾಯರೂ ಎಸ್. ಶ್ರೀಕಂಠಯ್ಯ ಸ್ಮಾರಕೋಪನ್ಯಾಸವನ್ನು ("ಮೈಲಾರ ದೇವರು") ಡಾ॥ ಸೂರ್ಯನಾಥ ಕಾಮತ್ ಅವರೂ ನೀಡಿದರು.* ಡಾ॥ ಶಂ. ಬಾ. ಜೋಶಿ ಅವರ ಗೌರವಾರ್ಥ ದತ್ತಿ ಉಪನ್ಯಾಸವನ್ನು ಪ್ರೊ॥ ಎಸ್. ಕೆ. ರಾಮಚಂದ್ರರಾವ್ ಅವರು ನೀಡಿದರು. ಈ ಉಪನ್ಯಾಸ ಡಾ॥ ವಿ. ಕೆ. ಆರ್. ವಿ. ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಎಲ್ಲ ಉಪನ್ಯಾಸಗಳನ್ನೂ ಬಿ.ಎಂ.ಶ್ರೀ. ಜನ್ಮಶತಮಾನೋತ್ಸವದ ಅಂಗವಾಗಿ ನಡಸಲಾಯಿತು : ಉಪನ್ಯಾಸಗಳನ್ನು ಬೆಂಗಳೂರಿನಲ್ಲಿ ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆಯ ಸಭಾಂಗಣದಲ್ಲಿ ವ್ಯವಸ್ಥೆಮಾಡಿತ್ತು. ಸಾಧ್ಯವಾದರೆ ಮುಂದಿನ ವರ್ಷದಿಂದ ಒಂದು ಉಪನ್ಯಾಸವನ್ನು ಬೆಂಗಳೂರಿನ ಹೊರಗೂ, ಒಂದೆರಡು ಉಪನ್ಯಾಸಗಳನ್ನು ನಗರದ ಇತರ ಕಡೆಗಳಲ್ಲೂ ನಡಸುವ ಆಲೋಚನೆ ಇದೆ. ಇದರಿಂದ ಪ್ರತಿಷ್ಠಾನದ ಪರಿಚಯ ಇತರ ಕಡೆಗೂ ಹರಡಿ, ದತ್ತಿ ಉಪನ್ಯಾಸಗಳ ಪ್ರಯೋಜನ ಬೇರೆ ಬೇರೆ ಕಡೆಯವರಿಗೂ ದೊರಕುವಂತಾಗುವುದು.

ಇಲ್ಲಿನ ಮೂರು ಉಪನ್ಯಾಸಗಳ ಪೈಕಿ ಮೊದಲನೆಯ ಉಪನ್ಯಾಸ 'ಇಂಗ್ಲಿಷ್ ಗೀತಗಳು', ಈ ಗ್ರಂಥವನ್ನು ಕುರಿತು ಈವರೆಗೆ ಪ್ರಕಟವಾಗಿರುವ ಎಲ್ಲ ವಿಮರ್ಶೆ

---

* ಪುಸ್ತಕದ ಒಳಗೆ ಮೂರೂ ಉಪನ್ಯಾಸಗಳ ಶೀರ್ಷಿಕೆಯ ಅಡಿಯಲ್ಲಿ 'ಬಿ.ಎಂ.ಶ್ರೀ. ಸ್ಮಾರಕೋಪನ್ಯಾಸ' ಎಂದು ತಪ್ಪಾಗಿ ಕಾಣಿಸಿದೆ. 'ಇಂಗ್ಲಿಷ್ ಗೀತಗಳು' ಒಂದೇ ಬಿ.ಎಂ.ಶ್ರೀ. ಸ್ಮಾರಕೋಪನ್ಯಾಸ.

ಗಳಿಗಿಂತ ಭಿನ್ನವಾದುದು. ಉಪನ್ಯಾಸಕರಾದ ಪ್ರೊ॥ ಜಿ. ವೆಂಕಟಸುಬ್ಬಯ್ಯನವರು 'ಶ್ರೀ' ಅವರನ್ನೂ, ಅವರ ಬದುಕಿನ ಪರಿಳಿತಗಳನ್ನೂ ಅವರ ಸಾರಸ್ವತ ತಪಸ್ಸೆಯನ್ನೂ ಅವರ ಧೀರಗಂಭೀರ ವ್ಯಕ್ತಿತ್ವವನ್ನೂ ಬಲ್ಲವರಾಗಿದ್ದರು. "ಬಿ.ಎಂ.ಶ್ರೀ. ಜನ್ಮಶತಮಾನೋತ್ಸವದ ಪರಿಣಾಮವಾಗಿ ಶ್ರೀಯವರ ಎಲ್ಲ ಗ್ರಂಥಗಳ ಪುನರ್ ವಿಮರ್ಶೆ ನಡೆದು ವಿದ್ವಾಂಸರು ಹೊಸ ಹೊಸ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಅಂಥವುಗಳಲ್ಲಿ 'ಇಂಗ್ಲಿಷ್ ಗೀತಗಳ'ನ್ನು ಕುರಿತ ಅಭಿಪ್ರಾಯಗಳನ್ನು ತೂಗಿ ನೋಡುವ ಒಂದು ಪ್ರಯತ್ನವನ್ನು"–ಒಂದು ಸಾರ್ಥಕ ಪ್ರಯತ್ನವನ್ನು, 'ಇಂಗ್ಲಿಷ್ ಗೀತಗಳ'ನ್ನೂ ಅವುಗಳ ಮೂಲ ಇಂಗ್ಲಿಷ್ ಕವನಗಳನ್ನೂ ಆಳವಾಗಿ ಅಭ್ಯಾಸಮಾಡಿರುವ ಶ್ರೀಯುತರು ಅತ್ಯಂತ ಶ್ರದ್ಧೆಯಿಂದ ಮಾಡಿದ್ದಾರೆ. 'ಮೂಲವನ್ನು **ಪ್ರತಿಬಿಂಬಿಸುವ ಕರ್ತವ್ಯ**ವನ್ನೇ ಮುಂದಿಟ್ಟುಕೊಂಡು ಕೆಲಸಮಾಡಿದ್ದೇನೆ' ಎಂಬ 'ಶ್ರೀ'ಯವರ ಪ್ರತಿಜ್ಞಾವಾಕ್ಯವನ್ನು ಸ್ಥಾಲೀಪುಲಾಕ ನ್ಯಾಯದಿಂದ ಶ್ರೀ ವೆಂಕಟಸುಬ್ಬಯ್ಯನವರು ನಿಷ್ಪಕ್ಷಪಾತವಾದ ಹೊಸ ದೃಷ್ಟಿಯ ವಿಚಾರವಿಮರ್ಶೆಗೆ ಒಳಪಡಿಸಿದ್ದಾರೆ. ಶ್ರೀಯುತರು ಕಂಡುಕೊಂಡ ಇನ್ನೊಂದು 'ಒಳನೋಟ' ಎಂದರೆ, "ಇಂಗ್ಲಿಷ್ ಗೀತಗಳ ಕವನಗಳಲ್ಲಿ ಕನ್ನಡ ಕವಿಗಳಿಗೆ ಮಾರ್ಗದರ್ಶಕಗಳಾದ ಕವನಗಳನ್ನು ಆರಿಸಿರುವುದು ನಿಜವಾದರೂ ತಮ್ಮ ಬಾಳಿಗೆ ಮಾರ್ಗದರ್ಶಕವಾದ ಕೆಲವು ತತ್ವಗಳನ್ನೂ ಶ್ರೀಯವರು ಈ ಅನುವಾದಸಮಯದಲ್ಲಿಯೇ ಕಂಡುಕೊಂಡರು" ಎನ್ನುವ ಸಂಗತಿಯನ್ನು ಸೋದಾಹರಣವಾಗಿ ವಿಶ್ಲೇಷಿಸಿರುವುದು. ಬೇರೆಯ ಮಾತುಗಳಲ್ಲಿ ಹೇಳುವುದಾದರೆ, ಶ್ರೀಯವರ ಸ್ವಂತ ಆಸೆ ಆಕಾಂಕ್ಷೆಗಳೇ, ನಂಬಿಕೆಗಳೇ, ದುಃಖಾನುಭವಗಳಿಂದ ಉಂಟಾದ ಚಿತ್ತಸ್ಥೈರ್ಯವೇ ಮೂಲಕವನಗಳ ಕವಿಗಳ ಮನೋಧರ್ಮಕ್ಕೆ ತಾಳೆಯಾಗಿ ಹೇಗೆ ಅನುವಾದಕ್ರಿಯೆಗೆ ಒಂದು ಪುನಸ್ಸೃಷ್ಟಿಯ ಮೌಲ್ಯವನ್ನು ತಂದುಕೊಟ್ಟಿವೆ ಎಂಬ ಹೊಸ ದೃಷ್ಟಿಕೋನದ ಪರಾಮರ್ಶೆ ವೆಂಕಟಸುಬ್ಬಯ್ಯನವರ ಬರಹದಲ್ಲಿ ಪರಿಣಾಮಕಾರಿಯಾಗಿ ಬಂದಿದೆ.

ಗ್ರೀಕ್ ರುದ್ರನಾಟಕದ ಹಿನ್ನೆಲೆಯಲ್ಲಿ ಬಿ.ಎಂ.ಶ್ರೀ. ಅವರ 'ಅಶ್ವತ್ಥಾಮನ್' ಮತ್ತು ವಿ. ಸೀ. ಅವರ 'ಆಗ್ರಹ'ಗಳನ್ನು ಸಮರ್ಥವಾಗಿ ವಿವೇಚಿಸಿರುವವರು ಖ್ಯಾತ ವಿಮರ್ಶಕರಾದ ಪ್ರೊ॥ ಎಲ್. ಎಸ್. ಶೇಷಗಿರಿರಾಯರು. ತಾವು ವಿಮರ್ಶೆಗೆ ತೆಗೆದುಕೊಂಡ ಕೃತಿಗೆ ಅಪಚಾರ. ಅನ್ಯಾಯ ಆಗದಂತೆ, ನಿಷ್ಪಕ್ಷಪಾತವಾಗಿ ಸಮತೂಕವಾಗಿ ವಿಮರ್ಶೆ ಮಾಡಬಲ್ಲ ವಿರಳ ಸಂಖ್ಯೆಯ ವಿಮರ್ಶಕರಲ್ಲಿ ಪ್ರೊ॥ ಶೇಷಗಿರಿರಾಯರು ಅಗ್ರಗಣ್ಯರ ಪಂಕ್ತಿಯಲ್ಲಿ ನಿಲ್ಲುತ್ತಾರೆ. ಯಾವುದೇ ಕೃತಿಯನ್ನು ಕೃತಿಕಾರನ ಉದ್ದೇಶದ ಚೌಕಟ್ಟಿನಲ್ಲಿ ಇಟ್ಟು ತಮ್ಮ ಆಳವಾದ ವಿದ್ವತ್ತಿನ ಹಿನ್ನೆಲೆಯಲ್ಲಿ ಕೃತಿಯ ಮೌಲ್ಯಮಾಪನ ಮಾಡುತ್ತಾರೆ. ಅವರ ದೃಷ್ಟಿಯಲ್ಲಿ, 'ಗದಾಯುದ್ಧ' ನಾಟಕದಲ್ಲಿ ರುದ್ರನಾಟಕದ ಗುಣಲಕ್ಷಣ ಕಂಡುಬರುವುದಿಲ್ಲ. ಆದ್ದರಿಂದ ಅದರ ವಿಸ್ತಾರವಾದ ವಿವೇಚನೆಯನ್ನು ನಡಸಿಲ್ಲ. 'ಆಗ್ರಹ' ನಾಟಕ

ಮೂಲ ಮಹಾಭಾರತದ ವಸ್ತುವನ್ನು ಬಲುಮಟ್ಟಿಗೆ ಯಥಾವತ್ತಾಗಿ ಪರಿಚಯ ಮಾಡಿಕೊಡುವ ನಾಟಕ. ಮೂಲವಸ್ತುವನ್ನು ಬಿ. ಎಂ. ಶ್ರೀ. ಯವರು ಹೇಗೆ ಬಳಸಿಕೊಂಡಿದ್ದಾರೆ ಎನ್ನುವುದಕ್ಕೆ ಈ ನಾಟಕದ ಅಧ್ಯಯನ ಫಲಕಾರಿ. 'ಅಶ್ವತ್ಥಾಮನ್' ನಾಟಕದಲ್ಲಿ ಶ್ರೀಯವರು ಮಾರ್ಪಾಡುಗಳನ್ನು ಮಾಡಿಕೊಂಡರೂ ಸಾಫೋಕ್ಲೀಸನ ನಾಟಕವನ್ನು ಹೇಗೆ ಸಮೀಪವರ್ತಿಯಾಗಿ ಅನುಸರಿಸಿದ್ದಾರೆ ಎಂಬುದನ್ನು ವಿಮರ್ಶಕರು ಉಚಿತ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. 'ಅಶ್ವತ್ಥಾಮನ್' ನಾಟಕದ ಮಹತ್ವವನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ.

'ಮೈಲಾರ ದೇವರು' ಎಂಬ ವಿಷಯ ಮೇಲುನೋಟಕ್ಕೆ ಅಪ್ರಸ್ತುತ ಎಂದು ತೋರಬಹುದು. ಬೆಳ್ಳೂರು ಮೈಲಾರ ಶ್ರೀಕಂಠಯ್ಯ ಎಂಬ ಬಿ.ಎಂ.ಶ್ರೀ.ಯವರ ಪೂರ್ಣನಾಮವನ್ನು ಗಮನಿಸಿದಾಗ ಅವರ ಕುಲದೈವ ಮೈಲಾರಲಿಂಗ ಎನ್ನುವುದು ಗೊತ್ತಾಗುತ್ತದೆ. ಅಲ್ಲದೆ ಅವರ ಪೂರ್ವಿಕರ ಸ್ಥಳವಾದ ಬೆಳ್ಳೂರು ಮೈಲಾರ ದೇವರ ನೆಲೆವೀಡೂ ಆಗಿದೆ. ಮೈಲಾರದೇವರ ಭಕ್ತರು ಕರ್ನಾಟಕದಲ್ಲಿ ಮಾತ್ರ ವಲ್ಲದೆ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಲ್ಲಿಯೂ ಹರಡಿಕೊಂಡಿದ್ದಾರೆ. ಮೈಸೂರು ಕರ್ನಾಟಕದಲ್ಲಿ 'ಮೈಲಾರ' ಹೆಸರು ಹೇಗೆ ಅಂಕಿತನಾಮವಾಗಿ ಬಳಕೆಯಲ್ಲಿ ದೆಯೋ ಹಾಗೆಯೇ ಉತ್ತರ ಕರ್ನಾಟಕದಲ್ಲಿ ಮಲ್ಲಾರಿ ಎಂಬ ಹೆಸರು ಅಷ್ಟೇ ಬಳಕೆ ಯಲ್ಲಿದೆ. 'ಮಲ್ಲಾರಿ' ಪದದ ನಿಷ್ಪತ್ತಿಯು ಕುತೂಹಲಜನಕ. ಲೇಖಕರು ಪುರಾಣದ ಉಕ್ತಿಯನ್ನು ಅವಲಂಬಿಸಿ ಮಲ್ಲನನ್ನು ಕೊಂದದ್ದರಿಂದ ಮಲ್ಲಾರಿ ಆಗಿದ್ದಾನೆ ಎಂದಿರುವುದು ಒಂದು ಊಹೆ. ಶೃಂಗೇರಿಯಲ್ಲಿ "ಮಲಹಾನಿಕಾರಿಕೇಶ್ವರ" ದೇವಾ ಲಯವೂ ಇದೆ. ಆದ್ದರಿಂದ 'ಮೈಲಾರಿ' ಪದದ ನಿಷ್ಪತ್ತಿ—ಮಲಹಾರಿ>ಮೈಲಾರಿ ಎಂದು ಆಗಿರುವ ಸಾಧ್ಯತೆಯೂ ಉಂಟು.

ಒಟ್ಟಿನಲ್ಲಿ ಮೂರು ಉಪನ್ಯಾಸಗಳೂ ಬಹಳ ಬೆಲೆಯುಳ್ಳವಾಗಿವೆ. ಉಪನ್ಯಾಸಗಳನ್ನು ನೀಡಿ ಬರೆದುಕೊಟ್ಟ ವಿದ್ವಾಂಸರಿಗೆ ಪ್ರತಿಷ್ಠಾನ ಕೃತಜ್ಞವಾಗಿದೆ.

ನಾವು ಕೊಟ್ಟ ಶ್ರಮವನ್ನೆಲ್ಲಾ ಸಹಿಸಿಕೊಂಡು 'ಲೋಚನ'ದಲ್ಲಿ ಬೆಳಕು ಕಂಡ ಲೇಖನಗಳನ್ನು ಪುಸ್ತಕರೂಪದಲ್ಲಿ ಒದಗಿಸಿಕೊಟ್ಟ 'ಶ್ರೀ ಲಕ್ಷ್ಮೀ ಪ್ರಿಂಟರ್ಸ್' ನವರಿಗೂ ಪ್ರತಿಷ್ಠಾನದ ವಂದನೆಗಳು.

೧೬–೨–೧೯೮೫ **ಎಂ. ವಿ. ಸೀತಾರಾಮಯ್ಯ**
ಬೆಂಗಳೂರು–೧೯. ಅಧ್ಯಯನ ನಿರ್ದೇಶಕ

ಪರಿವಿಡಿ

ದತ್ತಿ ಉಪನ್ಯಾಸಗಳು–೧೯೮೪

'ಶ್ರೀ' ಅವರ ಇಂಗ್ಲಿಷ್ ಗೀತಗಳು

(ಬಿ.ಎಂ.ಶ್ರೀ. ಸ್ಮಾರಕೋಪನ್ಯಾಸ)

ಉಪನ್ಯಾಸಕರು : **ಪ್ರೊ|| ಜಿ. ವೆಂಕಟಸುಬ್ಬಯ್ಯ**

'ಶ್ರೀ'ಯವರ ಬೋಧನಾಮೃತವರ್ಷದಲ್ಲಿ ಮಿಂದವರಿಗೆ ಆ ಅನುಭವ ಅವಿಸ್ಮರಣೀಯವಾದುದು. ಅವರ ವಾಗ್ವಿಲಾಸವನ್ನೂ ವಿಷಯಸಮಗ್ರತೆಯನ್ನೂ ನಿರೂಪಣಾ ಕೌಶಲವನ್ನೂ ಶ್ರೋತೃಗಳಮೇಲೆ ಉಂಟಾಗುತ್ತಿದ್ದ ಪರಿಣಾಮಸೌಭಾಗ್ಯವನ್ನೂ ಅನೇಕರು ಅನೇಕ ರೀತಿಯಲ್ಲಿ ಬೇರೆ ಬೇರೆ ಕಡೆಗಳಲ್ಲಿ ಚಿತ್ರಿಸಿದ್ದಾರೆ. ಅವರ ಶಿಷ್ಯಕೋಟಿಯಲ್ಲಿ ಒಬ್ಬನಾಗಿರುವ ಪುಣ್ಯವೇ ದೈವದತ್ತವಾದುದೆಂಬ ನಂಬಿಕೆ ಅನೇಕರ ಅಂತರಂಗದಲ್ಲಿ ಅಚ್ಚೊತ್ತಿದೆ. (ಅಂಥ ಶಿಷ್ಯರಲ್ಲಿ ಅತಿ ಕನಿಷ್ಠನಾದ ನನಗೆ ಅವರ ಜನ್ಮಶತಮಾನೋತ್ಸವ ಸಮಯದಲ್ಲಿ ಈ ಉಪನ್ಯಾಸ ಮಾಡುವ ಅವಕಾಶ ಸಿಕ್ಕಿದ್ದು ನನ್ನ ಸೌಭಾಗ್ಯವೆಂದು ನಂಬಿದ್ದೇನೆ.)

'ಶ್ರೀ'ಯವರ ವ್ಯಕ್ತಿತ್ವದಲ್ಲಿ ಒಂದು ಅಪೂರ್ವವಾದ ಸುವರ್ಣರೇಖೆಯಿತ್ತು. ಹಳತನ್ನು ಮರೆಯದ, ಹೊಸತನ್ನು ಕಾಣುವ–ಸಾಧ್ಯವಾದರೆ ಎರಡರ ಸಮೀಕರಣವನ್ನು ಸಾಧಿಸುವ ಅವರ ದೂರದೃಷ್ಟಿಯಿಂದ ನಾವು ಸಂಸ್ಕೃತದ ಸಂಕೋಲೆಯನ್ನು ಮುರಿದು, ಇಂಗ್ಲಿಷಿಗೆ ಸಂಪೂರ್ಣವಾಗಿ ದಾಸರಾಗದೆ ನಮ್ಮ ಸ್ವಂತಿಕೆಯನ್ನು ರೂಪಿಸಿಕೊಳ್ಳಲು ಶಕ್ತರಾದೆವು. ಹಳಗನ್ನಡದ ಸತ್ವವೆಲ್ಲಿದೆ ಎಂಬುದನ್ನು ಅವರು ಗುರುತಿಸಿದಷ್ಟು ನಿರ್ದುಷ್ಟವಾಗಿ ಮತ್ತಾರೂ ಅಲ್ಲಿಯವರೆಗೆ ಮಾಡಿರಲಿಲ್ಲ. ಕನ್ನಡ ಭಾಷೆಯ ಸತ್ವವನ್ನು ಜಾನಪದದಲ್ಲಿ ಗುರುತಿಸಿ ಅದಕ್ಕೆ ಶಿಷ್ಟತೆಯನ್ನು ಸಂಪಾದಿಸಬೇಕೆಂದು ಅವರು ಬೋಧಿಸಿದರು. "ಕನ್ನಡ ಬದುಕಿದೆ, ಬೆಳೆಯುತ್ತಿದೆ. ಅದು ಇಂದಿನ ಅವಶ್ಯಕತೆಗಳಿಗೆಲ್ಲ ಒದಗಿ, ಕನ್ನಡಿಗರ ಜೀವಾಳವಾಗಬೇಕು. ಅವರ ಆತ್ಮವಿಕಾಸಕ್ಕೆ ಆಧಾರವಾಗಬೇಕು. ಕ್ರಾಂತಿಯಾಗಬೇಕು. ಹಳೆಯ ನುಡಿ ಹೊಸದಾಗಬೇಕು. ಗ್ರಾಮ್ಯವಾಗಿಯೇ ನಿಲ್ಲದೆ, ವ್ಯಾಕರಣನಿಯಮಕ್ಕೊಳಪಟ್ಟು, ಸಾಹಿತ್ಯ ಸಂಸ್ಕೃತಿಗಳ ಮಟ್ಟಕ್ಕೇರಿ, ಸಾವಿರಾರು ವರ್ಷಗಳಿಂದ ಬೆಳೆದು ಬಂದು, ಇನ್ನು ಬೆಳೆಯುವ ಸ್ವಾತಂತ್ರ್ಯವನ್ನುಳ್ಳವೆಲ್ಲಾ 'ಸಂಸ್ಕೃತ'ಗಳೇ. ಅವು ಜನತೆಗಾಗಿ ಹಬ್ಬಿ (ಪಂಡಿತರಿಗೇ ಅಲ್ಲ) ಬ್ರಹ್ಮಾನುಭವಕ್ಕೆ ಒದಗಬೇಕೆಂಬುದೇ ನನ್ನ ಬಯಕೆ. ಕನ್ನಡ ಹೀಗೆ ಏಳಿಗೆ ಹೊಂದಬೇಕೆಂಬುದೇ ನನ್ನ ದೀಕ್ಷೆ". ಹೀಗೆ ಜೀವನಮಂತ್ರವನ್ನು ಸಾರಿದ ಶ್ರೀಯವರಿಂದ ಕನ್ನಡ ಬದುಕಿತು.

ಬಿ.ಎಂ.ಶ್ರೀ. ಪ್ರತಿಷ್ಠಾನದ ದೂರದೃಷ್ಟಿಯ ಕಾರ್ಯಕ್ರಮವಾದ ಈ ಜನ್ಮಶತಮಾನೋತ್ಸವದ ಪರಿಣಾಮವಾಗಿ ಶ್ರೀಯವರ ಎಲ್ಲ ಗ್ರಂಥಗಳ ಪುನರ್ವಿಮರ್ಶೆ

ನಡೆದು ವಿದ್ವಾಂಸರು ಹೊಸಹೊಸ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಅಂಥವು ಗಳಲ್ಲಿ 'ಇಂಗ್ಲಿಷ್ ಗೀತಗಳ'ನ್ನು ಕುರಿತ ಅಭಿಪ್ರಾಯಗಳನ್ನು ತೂಗಿನೋಡುವ ಒಂದು ಪ್ರಯತ್ನವನ್ನು ನಾನಿಲ್ಲಿ ಮಾಡುತ್ತಿದ್ದೇನೆ.

ಸುಮಾರು ಅರುವತ್ತು ವರ್ಷಗಳ ಹಿಂದೆ ಮೊದಲ ಸಲ ಒಂದು ಗ್ರಂಥರೂಪ ದಲ್ಲಿ ಪ್ರಕಟವಾದ ಈ ಪುಸ್ತಕ ಆರು ಸಲ ಪುನರ್ಮುದ್ರಣಗೊಂಡಿದೆ. ಆದರೂ 1952ರಲ್ಲಿ 'ತೀನಂಶ್ರೀ' ಅವರು ಆ ವರ್ಷದ ಮುದ್ರಣಕ್ಕೆ ಬರೆದ ಪ್ರಸ್ತಾವನೆಗಿಂತ ಹೆಚ್ಚು ವಿಷಯಗಳನ್ನೊಳಗೊಂಡ ಯಾವ ಲೇಖನವೂ ಪ್ರಕಟವಾಗಿಲ್ಲ, ಇಂದಿಗೂ. ಅಲ್ಲಲ್ಲಿ ಈ ಜನ್ಮಶತಮಾನೋತ್ಸವ ವರ್ಷದಲ್ಲಿ ಕೆಲವು ಚಿಕ್ಕ ಚಿಕ್ಕ ಲೇಖನಗಳು ಪ್ರಕಟಗೊಂಡಿವೆ. ಈ ಎಲ್ಲ ಲೇಖನಗಳಲ್ಲಿ ಬಿ.ಎಂ.ಶ್ರೀ.ಯವರ ಅನುವಾದಶಕ್ತಿ ಯನ್ನು ಕುರಿತ ಕೆಲವು ಹೇಳಿಕೆಗಳು ಪ್ರಕಟವಾಗಿವೆ. ಇಂಗ್ಲಿಷ್ ಗೀತಗಳ ಪ್ರಕಟನೆಯ ಹಿಂದಿದ್ದ ಉದ್ದೇಶವನ್ನು ಸಂಪೂರ್ಣವಾಗಿ ಮರೆತು ವ್ಯಕ್ತಪಡಿಸಿರುವ ಅಭಿಪ್ರಾಯ ಗಳಾಗಿವೆ ಇವು.

ಮೊದಲು 'ಶ್ರೀ'ಯವರು ಹೇಳಿರುವ ಮಾತುಗಳನ್ನು ಮತ್ತೊಮ್ಮೆ ನೆನಪಿಗೆ ತಂದುಕೊಳ್ಳೋಣ. ಆ ಮಾತುಗಳು ಹೀಗಿವೆ:

"ಇಂಗ್ಲಿಷ್ ಕಾವ್ಯಮಾರ್ಗವನ್ನು ಕನ್ನಡಿಗರು ಈ ಸಣ್ಣ ಗ್ರಂಥದಿಂದ ಸ್ವಲ್ಪ ಮಟ್ಟಿಗೆ ತಿಳಿಯಬಹುದಾಗಿದೆ. 'ಭಾಷಾಂತರಕಾರರು ಕೊಲೆಗಾರರು' ಎಂದು ಪಾಶ್ಚಾತ್ಯರಲ್ಲಿ ಒಂದು ಗಾದೆಯುಂಟು. ಆ ಅಪವಾದವನ್ನು ತಪ್ಪಿಸಿಕೊಂಡಿರುವೆ ನೆಂದು ನಾನು ತಿಳಿದುಕೊಂಡಿಲ್ಲ. ಆದರೆ, ನನ್ನ ಬುದ್ಧಿಬಲವಿರುವವುಟ್ಟಿಗೂ ಮೂಲವನ್ನು **ಪ್ರತಿಬಿಂಬಿಸುವ** ಕರ್ತವ್ಯವನ್ನೇ ಮುಂದಿಟ್ಟುಕೊಂಡು ಕೆಲಸಮಾಡಿ ದ್ದೇನೆ. ಕೆಲವು ಕಡೆ ಹೆಸರು, ಭಾವ ಮುಂತಾದುವು ಕನ್ನಡ ಜನಕ್ಕೆ ಹೊಂದಿಕೆಯಾಗು ವಂತೆ ಮಾರ್ಪಾಡಾಗಿದ್ದರೂ, ಸಾಮಾನ್ಯವಾಗಿ ಪದಪ್ರಯೋಗ, ಶೈಲಿ, ಛಂದಸ್ಸು, ಭಾವ, ರಸ—ಇವೆಲ್ಲವೂ ಮೂಲಕವಿಯ ವ್ಯಕ್ತಿತ್ವವನ್ನೆ ಅನುಸರಿಸಿವೆ. ಕನ್ನಡದ ಜಾಯಮಾನವನ್ನು ಮೀರದೆ ಎಷ್ಟುಮಟ್ಟಿಗೆ ಛಂದಸ್ಸು ಇಂಗ್ಲಿಷ್ ಛಂದಸ್ಸುಗಳನ್ನು ಹೋಲಬಹುದೋ ಅಷ್ಟುಮಟ್ಟಿಗೂ ಆ ಪದ್ಯಗಳನ್ನು ಕನ್ನಡಕ್ಕೆ ಇಳಿಸುವುದಕ್ಕೆ ಪ್ರಯತ್ನಪಟ್ಟಿರುತ್ತೇನೆ. ಇಂಗ್ಲಿಷ್ ಬಲ್ಲವರು ಇದನ್ನು ತಿಳಿಯುವರು: ಅಚ್ಚ ಕನ್ನಡಿಗರು–ಈ ಭಾಗದಲ್ಲಿ ಅಸಮಾಧಾನಪಡಬಾರದೆಂದು ನನ್ನ ಪ್ರಾರ್ಥನೆ. ಮುಖ್ಯ,

> ಪೇಳಿದ್ದೆ ಪೇಳುವರು, ಕೇಳಿದ್ದೆ ಕೇಳುವರು,
> ಕೇಳಿದ್ದೆ ಕೇಳಿ ಸುಖಿಸುವರು—ಗುರುಗಳ
> ಪೇಳಿಕೆಯಿಂ ಬೇರೆ ಸರ್ವಜ್ಞ.

ಎಂಬ ವಚನದಂತೆ, ಸಂಪ್ರದಾಯಮಾರ್ಗವನ್ನೇ ಛಲ ಹಿಡಿಯುವೆ. ವಿಶ್ವಕವಿತಾ ವಿಷಯಗಳಾದ ಯುದ್ಧ, ಪ್ರೇಮ, ಮರಣ, ದೇಶಭಕ್ತಿ, ದೈವಭಕ್ತಿ, ಪ್ರಕೃತಿ

ಸೌಂದರ್ಯ, ಮಾನವಜನ್ಮದ ಸುಖದುಃಖಗಳು, ರಾಗದ್ವೇಷಗಳು, ಪುರುಷಾರ್ಥಗಳು, ಜನ್ಮಾಂತರ ದರ್ಶನಗಳು ಮುಂತಾದ ಕಾವ್ಯವಸ್ತುಗಳನ್ನು ಇತರ ದೇಶದ ಕವಿಗಳು ಯಾವ ರೀತಿಯಲ್ಲಿ ಪುಷ್ಟಿಗೊಳಿಸಿ ಸಹಜಭಾಷೆಯಲ್ಲಿ ಸೌಂದರ್ಯರಚನೆಯನ್ನು ಮಾಡಿರುವರೋ ಅದನ್ನೆಲ್ಲ ಶ್ರದ್ಧೆಯಿಂದ ಪರಾಮರ್ಶಿಸಿ, ಧೈರ್ಯವನ್ನೂ ಶಿಕ್ಷಣಬದ್ಧವಾದ ಸ್ವಾತಂತ್ರ್ಯವನ್ನೂ ವಹಿಸಿ ಕನ್ನಡ ಕವಿಗಳು ಹಿಂದಕ್ಕಿಂತಲೂ ಮುಂದೆ ಇನ್ನೂ ಶ್ರೇಯಸ್ಸನ್ನು ತಾಳಲಿ ಎನ್ನುವುದೇ ನಮ್ಮೆಲ್ಲರ ಹಾರೈಕೆಯಾಗಿರತಕ್ಕದ್ದಾಗಿದೆ."

ಇಲ್ಲಿರುವ ಮಾತುಗಳಲ್ಲಿನ ಸತ್ವವನ್ನು ಈ ಬಗೆಯಾಗಿ ಸಂಗ್ರಹಿಸಬಹುದು: ೧. ಮೂಲವನ್ನು ಪ್ರತಿಬಿಂಬಿಸುವುದು; ೨. ಕನ್ನಡ ಜನಕ್ಕೆ ಹೊಂದಿಕೆಯಾಗುವಂತೆ ಮಾರ್ಪಾಟು ಮಾಡಿದ್ದರೂ ಮೂಲಕವಿಯ ವ್ಯಕ್ತಿತ್ವವನ್ನು ಅನುಸರಿಸುವುದು; ೩. ಕನ್ನಡದ ಜಾಯಮಾನವನ್ನು ಮೀರದೆ ಛಂದಸ್ಸನ್ನು ಕನ್ನಡಕ್ಕೆ ಇಳಿಸುವುದು; ೪. ಕವಿತಾವಿಷಯಗಳಲ್ಲಿ ವೈವಿಧ್ಯವನ್ನು ಸಾಧಿಸಿ ಶಿಕ್ಷಣಬದ್ಧವಾದ ಸ್ವಾತಂತ್ರ್ಯವನ್ನೂ ಧೈರ್ಯವನ್ನೂ ಪ್ರದರ್ಶಿಸಲು ಕವಿಗಳಿಗೆ ಸಹಾಯಕವಾಗಿರುವುದು. ಈ ನಾಲ್ಕನ್ನು ಶ್ರೀಯವರು ಎಷ್ಟರಮಟ್ಟಿಗೆ ಸಾಧಿಸಿ ಯಶಸ್ವಿಗಳಾಗಿದ್ದಾರೆನ್ನುವುದು ಅಭ್ಯಾಸಯೋಗ್ಯವಾಗಿದೆ.

ಇವುಗಳಲ್ಲಿ ಮೂಲವನ್ನು ಶ್ರೀಯವರು ಎಷ್ಟರಮಟ್ಟಿಗೆ ಪ್ರತಿಬಿಂಬಿಸಿದ್ದಾರೆ ಎನ್ನುವ ಬಗ್ಗೆಯೇ ಹೆಚ್ಚು ವಿಚಾರವಿಮರ್ಶೆ ನಡೆದಿದೆ. ಈ ಬಗ್ಗೆ ಒಂದೆರಡು ಸಮಾಲೋಚನೆಗಳನ್ನು ವಿವರಿಸಲು ಇಲ್ಲಿ ಪ್ರಯತ್ನಮಾಡಿದ್ದೇನೆ.

ಶ್ರೀಯವರು ಕವನಗಳನ್ನು ಅನುವಾದಿಸಲು ಅಥವಾ ಬರೆಯಲು ಪ್ರಾರಂಭಿಸಿದುದು ಯಾವಾಗ ಎಂಬ ಬಗ್ಗೆ ಯಾವ ತಾರೀಖನ್ನೂ ಹೇಳುವುದು ಸಾಧ್ಯವಿಲ್ಲವೆನ್ನುವುದು ನಿಜ. ಅವರು 'ಭರತಮಾತೆಯ ವಾಕ್ಯ'ವೆಂಬ ಸ್ವಂತ ಕವನವನ್ನು ರಚಿಸಿದ್ದು 1914 ಎಂದು ಅವರೇ ಗುರುತಿಸಿದ್ದಾರೆ. ಆದರೆ ಅದಕ್ಕೆ ಮುಂಚೆಯೇ ಅವರು ಅನುವಾದಗಳನ್ನು ಮಾಡಿರಬೇಕೆನ್ನುವುದಕ್ಕೆ ಸಾಕಷ್ಟು ಆಧಾರಗಳಿವೆ. 1915 ರಲ್ಲಿ ಅವರ ಪತ್ನಿ ತೀರ ಚಿಕ್ಕವಯಸ್ಸಿನಲ್ಲಿ ತೀರಿಕೊಂಡಾಗ ಅವರು ಇಂಗ್ಲಿಷಿನಲ್ಲಿ ರಚಿಸಿದ ಒಂದು ಕವನವು ಈಚೆಗೆ 'ಕನ್ನಡ ನುಡಿ'ಯಲ್ಲಿ (ಜೂನ್ ೧, ೧೯೮೩) ಅಚ್ಚಾಗಿದೆ. ಅದನ್ನು ಕನ್ನಡಿಗರು ಗಮನಿಸಿರಬಹುದು. ಅದು ಹೀಗಿದೆ:

Dhanushkoti, 1915

Dead, dead, dead,
Dead is the life of my life
O gone from my eyes that darling head
Gone, my love, my wife.

Twelve years since, I wedded thee,
O my darling. my joy, my wife!
And hardly six years you lived with me,
Six summers you sweetened my life.

A quiet and happy life was mine
And I trust I was good to thee,
So soft, so sweet, so still was thine,
So good, so kind to me.

And children came, and grief and care,
Our only boy was blind.
We prayed to God for strength to bear,
And He gave us a meek mind.

So shyly the path of life we trod,
Too mild his spite to stir,
Yet, suddenly, soon, how soon, O God!
Death laid his hand on her!

We will burn her, take her up.
Her task in the home is done.
No more can I drink of her rich love-cup
Beneath or above the sun.

You will make me a home with a wife again?
You will bring to the bruised heart balm?
I am broken, you think, and wild with pain?
—No, no, I can lose and be calm.

Quite calm—Ah, God, how calm I am!
Did I love her, heart and soul?
Not a sob, not a sigh, not a tear will come—
Do I trust she will come back whole?

Don't tell me she is dead; no, no, not dead—
She lives within my heart.
Now to my soul her soul is wed—
Will death come, try and part?

Here, in sight of this heaving sea,
And that sinking broad, red Sun,
I Vow my love's deep loyalty
To her, till my race is run.

And listen, my Angel, the rest of my way–
Thy ministry now is mine :
No longer to pine for the flesh, but to pray
And follow the quick devine.

The motherless ones you have left, sweet wife,
My fatherless brothers you cherished,
For them will I crush the wine of my life,
For them shall my life be nourished.

Loving the Muses, teaching the boys
And planning a song or two
In my own sweet tongue - O these are my joys.
These are my pledges to you.

I dare not hope to be sinless quite
Or never be shamed by wrong,
But will you not dwell in my heart, O Light
Of my life and my love and my song?

Some day, some one may bless my name,
And make me rejoice I lived on
Kindled in soul by thy glowing flame,
Till I, too, die and am gone.

(ಸಂಸಾರದಲ್ಲಿ ಉಂಟಾದ ಅಪಘಾತಗಳಿಂದ ನೊಂದ ಕವಿಹೃದಯ ತನ್ನ ಮುಂದಿನ ಬಾಳಿಗೆ ಮಾರ್ಗವನ್ನು ನಿರ್ಧರಿಸಿಕೊಂಡ ಈ ಸಂದರ್ಭದ ರಚನೆ ಕುತೂಹಲ ಜನಕವಾಗಿದೆ. ಕವಿಯ ಹೃದಯದ ತೊಳಲಾಟದ ಚಿತ್ರ ಮನಮುಟ್ಟುತ್ತದೆ. ಕಾವ್ಯ ವಾಗಿ ಇದು ಹಿರಿಮೆಯನ್ನು ಸಾಧಿಸದಿದ್ದರೂ, ಇಲ್ಲಿ ಉದಾತ್ತಚಿತ್ತದ ದುರ್ಧರ ದುಃಖದ ಪರಿಣಾಮ ನಿಷ್ಕೃಷ್ಟವಾಗಿದೆ. ಇದು ಕನ್ನಡದಲ್ಲಿ ರಚಿತವಾಗದಿದ್ದುದು ಆಶ್ಚರ್ಯಕರವಾಗಿದೆ.*)

ಈ ಕವನದ ಎರಡನೆಯ ಪದ್ಯದಲ್ಲಿ ಶ್ರೀಯವರು ಸಂಸಾರ ಹೂಡಿದ್ದು 1909 ಎಂಬ ಸೂಚನೆಯಿದೆ. ಈ ಘಟನೆಗೆ ಸಂಬಂಧಿಸಿದಂತೆ 'ಇಂಗ್ಲಿಷ್ ಗೀತಗಳು' ಸಂಕಲನಕ್ಕೆ ಬರೆದ ಅರಿಕೆಯಲ್ಲಿ ಶ್ರೀಯವರೇ ಈ ಮಾತುಗಳನ್ನೂ ಬರೆದಿದ್ದಾರೆ: 'ಯಾರ ಸಂತೋಷಕ್ಕಾಗಿ ಮೊದಲು ನಾನು ಈ ಗೀತಗಳನ್ನು ಬರೆದೆನೋ ಆ ಕಣ್ಣು ಗಳು ಬೇಗ ಮುಚ್ಚಿಹೋಗಿ, ಕೆಲವು ವರ್ಷ ಗ್ರಂಥ ನನ್ನಲ್ಲಿಯೇ ಉಳಿದುಕೊಂಡಿತು.' ಆ ಘಟನೆಯನ್ನೂ ಈ ವಾಕ್ಯವನ್ನೂ ಜೊತೆಗಿಟ್ಟು ಯೋಚಿಸಿದರೆ ಶ್ರೀಯವರು 1911ರಲ್ಲಿ 'ಕನ್ನಡ ಮಾತು ತಲೆಯೆತ್ತುವ ಬಗೆ' ಎಂಬ ಉಪನ್ಯಾಸವನ್ನು ಮಾಡುವ ಸಮಯದ ಹಿಂದೆ ಮುಂದೆ ಕನ್ನಡದಲ್ಲಿ ಅನುವಾದ ಕಾರ್ಯವನ್ನು ಕೈಗೊಂಡಿರ ಬೇಕೆನ್ನಿಸುತ್ತದೆ. 'ಇಂಗ್ಲಿಷ್ ಕವಿಗಳು ಶೃಂಗಾರರಸವನ್ನು ಹೇಗೆ ಗಂಭೀರವಾಗಿಯೂ, ಸೂಕ್ಷ್ಮವಾಗಿಯೂ, ಸ್ವಾಭಾವಿಕವಾಗಿಯೂ ತೋರಿಸುವರೆಂಬುದನ್ನು ತಿಳಿಸುವುದ ಕ್ಕಾಗಿ ಆ ಬಗೆಯ ಗೀತಗಳು ಕೊಂಚ ಹೆಚ್ಚಾಗಿ ಬಂದಿವೆ' ಎಂಬ ಮತ್ತೊಂದು ವಾಕ್ಯದ ಆಧಾರದಿಂದ ಈ ಪ್ರೇಮಕವನಗಳಲ್ಲಿ ಆತ್ಮವಿಷಯಕವಾದ ನಿರೂಪಣೆಯಿದೆ ಯೆಂದು ಹೇಳುವುದು ಅಷ್ಟೇನೂ ತಪ್ಪಾಗುವುದಿಲ್ಲ. ಆ ಇಂಗ್ಲಿಷ್ ಕವನದಲ್ಲಿ ಆರು ವರ್ಷಗಳ ಸುಖ ಸಾಂಸಾರಿಕ ಜೀವನದ ಉಲ್ಲೇಖವಿರುವುದರಿಂದ 1910ರ ವೇಳೆ ಗಾಗಲೇ ಇಂಥ ಬರವಣಿಗೆ ಪ್ರಾರಂಭವಾಗಿರಬೇಕು. ಅವು ಇಂಗ್ಲಿಷ್ ಗೀತಗಳಲ್ಲಿರುವ ಪ್ರೇಮಕವನಗಳ ಅನುವಾದಗಳಾಗಿರಬಹುದು. 'ನನ್ನ ಪ್ರೇಮದ ಹುಡುಗಿ', 'ಸುಂದರಿ ಕಮಲೆ', 'ಪ್ರೇಮ ರಹಸ್ಯ', 'ವಸಂತಕಾಲದೊಲುಮೆ', 'ಒಂದು ಮಾತನು ಲೋಕ ಹೊಲೆಗೆಡಿಸಿಕೊಂಡಿಹುದು', 'ನಿನ್ನೊಳೆನಗೊಲವಿಲ್ಲ', ಮುಂತಾದ ಕವನ ಗಳಲ್ಲಿ ಕೆಲವನ್ನಾದರೂ ಈ ಸಮಯದಲ್ಲಿ ಬರೆದಿರಬೇಕು.

1915ರ ಬಳಿಕ ಬರೆದವೆಂದು ಖಂಡಿತವಾಗಿ ನಿರ್ದೇಶಿಸಬಹುದಾದ ಕವನಗಳು ಇವು: 'ಪದುಮ', 'ದುಃಖಸಮಯ', 'ಹಳೆಯಹಳಕೆಯ ಮುಖಗಳು', 'ಎರಡು ಮನಸ್ಸು'.

---

* ಶ್ರೀ ಬಿ. ಸಿ. ರಾಮಚಂದ್ರಶರ್ಮರು ಈಚೆಗೆ ಈ ಕವನವನ್ನು ಕನ್ನಡಿಸಿದ್ದಾರೆ. 'ಶ್ರೀ' ಯವರ ಮೊಮ್ಮಗಳು ಶ್ರೀಮತಿ ವಿಶಾಲಾಕ್ಷಿ ವಿಶ್ವೇಶ್ವರಯ್ಯ ಅವರು 'ಶ್ರೀ' ನೆನಪಿಗಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಕಡೆಯಿಂದ ಪ್ರಕಟಿಸಿರುವ ಸಂಪುಟದಲ್ಲಿ ಈ ಕನ್ನಡ ಅನುವಾದ ಅಚ್ಚಾಗಿದೆ.

W. S. ಲಾಂಡರನ ಕವನ "Rose Aylmer" ಹೀಗಿದೆ:

Ah! What avails the sceptred race!
Ah. what the form devine!
What every Virtue, every grace!
Rose Aylmer, all were thine.

Rose Aylmer, whom these wakeful eyes
May weep, but never see,
A night of memories and sighs
I conseerate to thee.

ಕನ್ನಡದ ಅನುವಾದ ಹೀಗಿದೆ:

ಅರಸಿನ ಕುಲವೋ, ಏನಿದ್ದೇನು!
ಸುರವಧುರೂಪೋ, ಏನಿದ್ದೇನು!
ಗುಣವೋ, ಸೊಬಗೋ, ಏನಿದ್ದೇನು!
ಪದುಮಾ, ಇದ್ದುವು ನಿನಗೆಲ್ಲಾ.

ಪದುಮಾ ಎಚ್ಚತ್ತಳುವುದೆ ಅಲ್ಲದೆ
ಕಣ್ಣಿವು ನಿನ್ನನು ಕಾಣುವುವೆ?
ನೆನಸಿಕೊಳುವೆ, ಬಿಸುಸುಯ್ಯುವೆ, ಇರುಳನು
ನಿನಗೆಯೆ ಮೀಸಲು ತೆಗೆದಿಡುವೆ.

ಶೋಕದಲ್ಲಿ ಅದ್ದಿ ತೆಗೆದಿರುವ, ಭಾವನಿರ್ಭರವಾದ ಈ ಅನುವಾದದ ಅಚ್ಚುಕಟ್ಟು, ಇದು ಸ್ವಂತದ್ದೆನ್ನುವಂತೆ ಮಾಡುವ ಆರ್ದ್ರತೆ, ಅನುವಾದವಲ್ಲವೆನ್ನಿಸುವ ಕನ್ನಡ ಭಾಷೆಯ ಸೊಗಡು, ಸಂಗ್ರಹಗುಣ—ಇವುಗಳನ್ನು ಮೆಚ್ಚದಿರಲು ಯಾರಿಗೂ ಸಾಧ್ಯವಿಲ್ಲ. ಆದರೆ ಒಬ್ಬ ಲೇಖಕರು ಹೀಗೆ ಬರೆದಿದ್ದಾರೆ: "ಕನ್ನಡಿಸಿದಾಗ ನೆನೆಯುವ ಮತ್ತು ಬಿಸುಸುಯ್ಯುವ ಕ್ರಿಯೆಗಳಿಗೂ ಇರುಳಿಗೂ ಇರುವ ಮೂಲದ ಅವಿನಾಭಾವ ಸಂಬಂಧ ಮರೆಯಾಗುತ್ತದೆ. ಹೀಗಾಗಿ ಮೂಲದ ಭಾವವೇ ವ್ಯತ್ಯಸ್ತಗೊಳ್ಳುತ್ತಿದೆ." ಈ ವ್ಯತ್ಯಾಸ ಹೇಗೆ. ಎಲ್ಲಿ ಎಂಬ ವಿವರ ಮಾತ್ರ ಆ ಲೇಖನದಲ್ಲಿ ಸಿಗುವುದಿಲ್ಲ. ನನ್ನೊಡನೆ ಒಮ್ಮೆ ಮಾತನಾಡುತ್ತ, ಮಾನ್ಯ ಮಾಸ್ತಿಯವರು 'ಈ ಕವನದ ಅನುವಾದವು ಬಿ.ಎಂ.ಶ್ರೀ.ಯವರು ತಮ್ಮ ಪತ್ನಿಯನ್ನು ಕಳಕೊಂಡ ತರುಣದಲ್ಲಿ ರಚಿತವಾದದ್ದು ಎನ್ನುವುದು ಅನೇಕ ಜನರಿಗೆ ತಿಳಿದಿಲ್ಲ' ಎಂದು ಹೇಳಿದುದು ನನಗೆ ನೆನಪಿದೆ.

ಹೀಗೆಯೇ ಚಾರಲ್ಸ್ ಲ್ಯಾಂಬ್ ಕವಿಯ All, all are gone, the old familiar faces ಎಂಬ ಕವನವೂ ಟೀಕೆಗೆ ಗುರಿಯಾಗಿದೆ.

ಮೂಲ ಕವನ ಹೀಗಿದೆ :

I have had playmates, I have had companions,
In my days of childhood, in my joyful school-days ;
    All, all are gone, the old familiar faces.

I have been laughing, I have been carousing,
Drinking late, sitting late, with my bosom cronies ;
    All, all are gone, the old familiar faces.

I loved a love once, fairest among women :
Closed are her doors on me, I must not see her–
    All, all are gone, the old familiar faces.

I have a friend, a kinder friend has no man :
Like an ingrate, I left my friend abruptly ;
    Left him to muse on the old familiar faces.

Ghost-like I paced round the haunts of my childhood,
Earth seem'd a desert I was found to traverse,
    Seeking to find the old familiar faces.

Friend of my bosom, thou more than a brother,
Why wert not thou born in my father's dwelling ?
    So might we talk of the old familiar faces,

How some they have died, and some they have left me,
And some are taken from me, all are departed ;
    All are gone, the old familiar faces.

ಈ ಕವನದ ಅತ್ಯಂತ ಸುಂದರವೂ ಸ್ವಸಂಪೂರ್ಣವೂ ಆದ ಕನ್ನಡ ಅನುವಾದ :

ಹಳೆಯ ಪಳಕೆಯ ಮುಖಗಳು

ಕಂದ ಬಿದ್ದೆಯ ಎಂದು ಮುದ್ದಿಸಿ ನನಗೆ ಮರುಗುವರಿದ್ದರು ;
ಅಂದಿನೋದಿನ ಸುಖದ ದಿನದಲಿ ಜತೆಗೆ ಕುಣಿಯುವರಿದ್ದರು :
ಎಲ್ಲ, ಎಲ್ಲಾ ಮಾಯವಾದುವು ಹಳೆಯ ಪಳಕೆಯ ಮುಖಗಳು.

ಪರಿಸೆ ನೋಟವೊ, ಪೋಳಿಯ ಊಟವೊ, ಬಯಲಿನಾಟವೊ, ಪಾಟವೋ,
ಇರುಳು ಮುಸುಕಿಯು ಮನೆಯ ನೆನೆಯದ ನಮ್ಮ ಲಗ್ಗೆಯ ಕೂಟವೋ.
ಎಲ್ಲ, ಎಲ್ಲಾ ಮಾಯವಾದುವು ಹಳೆಯ ಪಳಕೆಯ ಮುಖಗಳು.

ಪರಸಿ ಪಡೆದೆನು ಹೆಣ್ಣನೊಂದನು ಹೇಳಲರಿಯೆನು ಹಿತವನು ;
ಉರಿದುಹೋದಳು, ಬೂದಿಯಾದಳು, ಹಿಡಿವುದಿನ್ನೆಲ್ಲವಳನು ;
ಎಲ್ಲ, ಎಲ್ಲಾ ಮಾಯವಾದುವು ಹಳೆಯ ಪಳಕೆಯ ಮುಖಗಳು.

ಕೆಳೆಯನಿರುವನು—ಯಾರಿಗಿರುವರೊ ಅತನಕ್ಕರೆಯಾಪ್ತರು ?
ಕಳೆದುಕೊಂಡೆನು ; ಮೇಲೆ ನಗುವುದೆ ಒಳಗೆ ಕಲ್ಲೆದೆಯಾದನು.
ಎಲ್ಲಿ ಹೋದುವು. ಎಲ್ಲಿ ಹೋದುವು ಹಳೆಯ ಪಳಕೆಯ ಮುಖಗಳು.

ಗಾಳಿಕೂಟವೆ ನಾನು ; ಸುಳಿವೆನು ಹಸುಳೆ ಸುಳಿದೆಡೆಯೆಡೆಯೊಳು.
ಹಾಳು ಹಾಳಿನ ಮರಳುಕಾಡಿನೊಳರಸಿ ಹಿಂದಿನ ನಿಧಿಯನು !
ಎಂದೊ ಹೋದುವು, ಎಂದೊ ಹೋದುವು ಹಳೆಯ ಪಳಕೆಯ ಮುಖಗಳು.

ನನ್ನ ಕೆಳೆಯನೆ. ಒಂದೆ ಕರುಳಿನ ಮಮತೆ ಮೀರಿದ ಕೆಳೆಯನೆ.
ನನ್ನ ತಂದೆಯ ಮನೆಯಲೇತಕೆ ಹುಟ್ಟಿ ಬೆಳೆಯೆಯೊ, ಕೆಳೆಯನೆ?
ಹೋಗವಲ್ಲವೆ ಆಗ, ಎಲ್ಲಾ ಹಳೆಯ ಪಳಕೆಯ ಮುಖಗಳು !

ಕೆಲವರಳಿದರು, ಕೆಲವರುಳಿದರು, ಕೆಲವರೊಗ್ಗದೆ ಮುಳಿದರು.
ಕೆಲವರೆನ್ನನು ದೂರಿ ಹಳಿದರು, ಹೊರಗೆ ಹಾಕಿದರೆಲ್ಲರೂ !
ಎಲ್ಲ, ಎಲ್ಲಾ ಮಾಯವಾದುವು ಹಳೆಯ ಪಳಕೆಯ ಮುಖಗಳು.

ಈ ಕವನದ 'ಕಂದ ಬಿದ್ದೆಯ ಎಂದು ಮುದ್ದಿಸಿ ನನಗೆ ಮರುಗುವರಿದ್ದರು' ಎಂಬ ಸಾಲೂ, 'ಪರಸಿ ಪಡೆದನು ಹೆಣ್ಣನೊಂದನು—ಹೇಳಲರಿಯೆನು ಹಿತವನು. ಉರಿದುಹೋದಳು, ಬೂದಿಯಾದಳು, ಹಿಡಿವುದಿನ್ನೆಲ್ಲವಳನು' ಎಂಬ ಸಾಲುಗಳೂ ಟೀಕೆಗೆ ಗುರಿಯಾಗಿವೆ. ಟೀಕೆ...'ಎಂಬ ಚಿತ್ರವನ್ನು ಕೊಟ್ಟರೆ ಹೇಗೆ ?' ಕನ್ನಡದ ಜಾಯಮಾನವನ್ನು ಮರೆಯುವ. ಕವಿಯ ಆತ್ಮವೃತ್ತಕ್ಕೆ ಹತ್ತಿರವಾಗುವುದರಿಂದ ಅಲ್ಲಿನ ಭಾವವನ್ನು ತೀವ್ರಗೊಳಿಸುವ, ಒಟ್ಟು ಕವನದ ಸತ್ವಕ್ಕೆ ಯಾವ ವಿಧವಾದ ಅಪಚಾರವನ್ನೂ ಮಾಡದ ಇಂಥ ಅನುವಾದ ಕನ್ನಡದ ಪುಣ್ಯವೆನ್ನಬೇಕು. ಕವಿಯ ಕಥೆ ಗೊತ್ತಿರುವವರಿಗೂ ಇಲ್ಲದವರಿಗೂ ಈ ಎರಡು ಸಾಲುಗಳು ಅನುಭವ ಸಾಂದ್ರತೆಯನ್ನುಂಟುಮಾಡಿ ಕವನಕ್ಕೆ ಹಿರಿಮೆಯನ್ನು ತರುತ್ತವೆ.

ಇನ್ನೊಂದು ಕವನದಲ್ಲಿಯೂ ಹೀಗೆಯೇ ಕವಿಯ ಆತ್ಮವೃತ್ತ ಪ್ರಾಸಂಗಿಕವಾಗಿ ಬರುತ್ತದೆ. ಈ ಕವನದ ಮೂಲ ಇಂಗ್ಲಿಷ್ ರೂಪ ನನಗೆ ಎಷ್ಟು ಹುಡುಕಿದರೂ ದೊರೆತಿಲ್ಲ. ಇದು Golden Treasuryಯಲ್ಲಿ ಇಲ್ಲದ್ದು ; ಅನಾಮಿಕನಾದ

ಕವಿಯಿಂದ ರಚಿತವಾದುದು. ಅದರ ಹೆಸರು 'Two Moods' ಎಂದು ಬಿ.ಎಂ.ಶ್ರೀ.ಯವರು ತಿಳಿಸಿದ್ದಾರೆ.* ಅದರ ಅನುವಾದ ಹೀಗಿದೆ :

ಎರಡು ಮನಸ್ಸು

೧

ಹೋಗಬಾರದೆ ಸಾವು—
ಅವನು ನಾನು !
ಆಗ ಜಗದಲಿ ದುಃಖ
ಸವೆಯಬಹುದು.

ಕಣ್ಣಿಲ್ಲದವನವನು,
ತಿಳಿಯದವನು.
ನನ್ನ ಮನೆ ಮನೆಯಾಯ್ತೆ ?
ಕೆಳೆ ಕೆಳೆಯರೆ ?

ಬಾಳ ಬಂಡೆಗೆ ಬಡಿದು,
ಅಲೆ ಹೊಡೆದು ಹೊಡೆದು,
ಆಳದಲಿ ನೋತಿಹೆವು,
ನಿಲುವು—ಸಾವು !

೨

ಕ್ಷಮಿಸು, ಧೀರರ ದೇವ,
ಹೇಡಿಯಿದೆಯ ;
ನೊಂದು ನೊಕ್ಕಿದ ಮನುಜ
ಕೀಳು ಬಗೆಯ ;

ಊದು ಉಸಿರನು ; ತುಂಬು
ನಂಬುಗೆಯನು.
ಜೀವ, ಕಾಳಗ ಕಾದು,
ಮಿಸು, ಗೆಲ್ಲು.

ಈ ಅನುವಾದದಲ್ಲಿರುವ 'ಕಣ್ಣಿಲ್ಲದವನವನು. ತಿಳಿಯದವನು' ಎಂಬುದೂ 'ನನ್ನ ಮನೆ ಮನೆಯಾಯ್ತೆ?' ಎಂಬುದೂ, ಶ್ರೀಯವರು ಸಂಸಾರದಲ್ಲಿ ಅನುಭವಿಸಿದ ಅತ್ಯಂತ ಘೋರವಾದ ಯಾತನೆಯನ್ನು ಅಭಿವ್ಯಕ್ತಿಸುತ್ತವೆ. ಹೀಗಿದ್ದೂ ಒಂದು ಚೇತನ ದುಃಖದಲ್ಲಿ ಮುಳುಗಿ, ಅದನ್ನು ಅದುಮಿ ಮೇಲೇಳುವ ನಿರ್ಧಾರವನ್ನು ಹೇಗೆ ಕೈಗೊಂಡು ಬಾಳನ್ನು ಸಾರ್ಥಕಗೊಳಿಸಿತು ಎಂಬುದು ನಮ್ಮ ಚಿತ್ತಕ್ಕೆ ವೇದ್ಯವಾಗದೆ ಇರದು—ಈ ಅನುವಾದದ ದೆಸೆಯಿಂದ.

ಕೆಲವರು ವಿಮರ್ಶಕರು ಒಂದೊಂದು ಪದವನ್ನೂ ಆರಿಸಿ ತೆಗೆದು ಅದು ಕನ್ನಡದಲ್ಲಿ ಸರಿಯಾಗಿ ಅನುವಾದಗೊಂಡಿಲ್ಲ ಎಂದು ಎತ್ತಿ ತೋರಿಸುತ್ತಾರೆ. 'ಅಡವಿ ಮರದಡಿಯಲ್ಲಿ' ಎಂಬ ಕವನದ ಮೂಲದಲ್ಲಿನ Seeking the food he eats ಎನ್ನುವುದು 'ಉಣ್ಣುವೂಟವ ಕಂಡು' ಎಂದಿದ್ದರೆ 'Seeking'ಗೆ 'ಕಂಡು' ಸರಿಯಾದ ಪದವಲ್ಲ ಎನ್ನುತ್ತಾರೆ. ಹಾಗೆ ನೋಡಿದರೆ 'ಕಂಡು' ಎಂಬುದೇ ಸರಿಯಾದ

---

* ಈ Two Moods ಮೂಲ ಕವನವೂ 'ಶ್ರೀ'ಯವರದೇ ಎಂದು ಈಚೆಗೆ ತಿಳಿದು ಬಂದಿದೆ.

ಪದ. ‘ನನ್ನ ಪ್ರೇಮದ ಹುಡುಗಿ’ಯಲ್ಲಿ ‘ಬೆಳೆಬೆಳೆಯುತೆಷ್ಟೆಷ್ಟು ಬಿನ್ನಾಣ ಎಲೆ ಚೆಲುವೆ’ ಎಂಬ ಸಾಲಿನಲ್ಲಿ ‘Bonny lass’ ಎಂಬುದರ ಆತ್ಮೀಯತೆ ‘ಎಲೆ ಚೆಲುವೆ’ಯಲ್ಲಿ ಹಾರಿಹೋಗುತ್ತದೆ ಎನ್ನುತ್ತಾರೆ. ಇಂಗ್ಲಿಷ್‌ನಲ್ಲಿ Bonny ಎಂಬುದಕ್ಕೆ Pretty ಎಂಬುದೇ ಅರ್ಥ. ‘ಮಳೆಬಿಲ್ಲು’ ಎಂಬ ಕವನದ ಬಗ್ಗೆ “ಇಡೀ ಕವನವೇ ಅನುವಾದ ಕಲೆಯ ಪರಿಣತಿಯ ಫಲ” ಎಂದು ಒಬ್ಬರು ಹೇಳಿದರೆ ಆ ಕವನದ

“ಮನುಜನಿಗೆ ಮಗು ತಂದೆ–ನಾನದನು ಬಗೆದು
ಹೊಂದಿಸಲು ಬಯಸುವೆನು ದಿನಗಳನು ತೆಗೆದು
ಒಂದಕೊಂದನು ಪ್ರಕೃತಿಭಕ್ತಿಯಲಿ ಬಿಗಿದು.”

ಎಂಬುದಕ್ಕೆ “ಮೂಲದಲ್ಲಿ ಅವಕಾಶವೇ ಇಲ್ಲ” ಎನ್ನುತ್ತಾರೆ ಮತ್ತೊಬ್ಬರು.

ಈ ಬಗೆಯ ಭಿನ್ನಾಭಿಪ್ರಾಯಗಳು ಬೆಳೆಯಲು ಇರುವ ಕಾರಣ ಒಂದೇ! ಮೂಲವನ್ನು ಎದುರಿಗೆ ಇಟ್ಟುಕೊಂಡು ಪ್ರತಿ ಸಾಲನ್ನೂ ಪರೀಕ್ಷಿಸಿ ಯಾವ ಪದದ ಅರ್ಥ ತಪ್ಪಿದೆ, ಎಲ್ಲಿ ಯಾವುದು ಮೂಡಿಲ್ಲ, ಯಾವುದು ಹೆಚ್ಚು ಎಂದು ಗುರುತಿಸುವ ವ್ಯರ್ಥವಾದ ಕಾಲಕ್ಷೇಪ. ‘ಇಂಗ್ಲಿಷ್ ಗೀತ’ಗಳು ಈಗ ಈ ಬಗೆಯ ಪರೀಕ್ಷೆಗೆ ಒಳಪಡಬೇಕಾಗಿಲ್ಲ. ಆ ಗ್ರಂಥದ ಪ್ರಭಾವ ಬೇರು ಯಾವುದನ್ನು ಅದು ಸಾಧಿಸಬೇಕಾಗಿತ್ತೋ ಅದನ್ನು ಸಾಧಿಸಿ ಆಗಿದೆ. ಬೇಕಾದವರು ಅದರಲ್ಲಿನ ಒಂದೆರಡು ಕವನಗಳನ್ನು ಮತ್ತೆ ಅನುವಾದ ಮಾಡಲು ಪ್ರಯತ್ನಿಸಿ ಹೆಚ್ಚು ಫಲವನ್ನು ಕಾಣಲಿ. ನಾವೂ ಮೆಚ್ಚಿಕೊಳ್ಳೋಣ.

‘ಬಾನಾಡಿ’ Sky Lark ಕವನ ತುಂಬ ಸುಂದರವಾದ ಅನುವಾದ. ಅದರಲ್ಲಿಯೂ ಲೋಪವನ್ನು ಗುರುತಿಸಿದ್ದಾರೆ. ಒಂದು ದೃಷ್ಟಾಂತವನ್ನು ಕೊಡುತ್ತೇನೆ :

Hail to thee, blithe spirit !
    Bird thou never wert,
That from heaven, or near it,
    Pourest thy full heart
In profuse strains of unpremeditated art.

ಇದು ಆ ಕವನದ ಮೊದಲ ಪದ್ಯ. ಇದನ್ನು ಕುರಿತು ಒಬ್ಬರ ವಿಮರ್ಶೆ ಹೀಗಿದೆ :

“ಇಲ್ಲಿ blithe spirit-‘ಹರುಷಮೂರುತಿ’ಯಾಗಿರುವುದಕ್ಕಾಗಲೀ, heaven or near it ಎಂಬುದು ಕೇವಲ ‘ದಿವಿಜರು ಸುಳಿವ ಬಳಿ’ಯಾಗಿರುವುದಕ್ಕಾಗಲೀ

ನಾವು ಆಕ್ಷೇಪಿಸದಿದ್ದರೂ "Hail to thee, blithe spirit!" ಎಂಬಲ್ಲಿನ ಆಶ್ಚರ್ಯಸೂಚಕ ಚಿಹ್ನೆ "ಆರು ನೀನೆಲೆ ಹರುಷ ಮೂರುತಿ?" ಎಂದು ಪ್ರಶ್ನಾರ್ಥಕ ಚಿಹ್ನೆಯಾಗಿ ಮಾರ್ಪಟ್ಟಿರುವುದು ತುಂಬ ಅತೃಪ್ತಿಯನ್ನುಂಟುಮಾಡುತ್ತದೆ. ಬಾಗಿಲು ತಟ್ಟಿದ ಬಂಧುವನ್ನೋ ಗೆಳೆಯನನ್ನೋ "ಹಾ! ನೀವಾ ಬನ್ನಿ. ಬನ್ನಿ!" ಎಂದು ಆಶ್ಚರ್ಯ, ಸಂತೋಷಗಳೊಡನೆ ಸ್ವಾಗತಿಸುವುದಕ್ಕೆ ಬದಲಾಗಿ "ಯಾರು ನೀವು? ಯಾರು ಬೇಕು?" ಎಂದು ಕೇಳಿದಾಗ ಬಂದ ಆಗಂತುಕನ ಮನಸ್ಸಿನಲ್ಲಾಗಲೀ, ಮನೆಯೊಡೆಯನಲ್ಲಾಗಲೀ ಇರುವಂಥ ಅಸಂತೃಪ್ತ ಹಾಗೂ ಅಸಂಪೃಕ್ತ ಭಾವನೆಯೇ ಇಲ್ಲಿಯೂ ಉಂಟಾಗುತ್ತದೆ. 'Bird thou never wert' ಎಂಬುದರಲ್ಲಿನ ವಿಚಿತ್ರ ನಿಷೇಧಾತ್ಮಕ ಭಾವ ಅನುವಾದದಲ್ಲಿ ಮರೆಯಾಗಿ 'ಹಕ್ಕಿಯೆಂಬರೆ ನಿನ್ನನು!" ಎಂಬಲ್ಲಿನ ಆಶ್ಚರ್ಯಸೂಚಕ ಭಾವವೂ ಅಸಮರ್ಥಿತವಾಗಿ ಬಿಡುವಂಥ ಸನ್ನಿವೇಶ ಒದಗುತ್ತದೆ.

"ಸೊಗಯಿಸ್ಸೆ ಸುಖಿಜೀವಿ!
ನೆಗೆವಕ್ಕಿ ನೀನಲ್ಲ;
ಗಗನದಿಂದಲೊ ಗಗನದರುಗಿಂದಲೊ
ಮೊಗೆವೆ ತುಂಬಿದೆಯ ಮುಂ
ಬಗೆದಿಲ್ಲದಿಹ ಬಿನ್ನಣಿಗೆಯಾಗುವುದಾರಗಾಯನದ ಝರಿಯಿಂ"

ಎಂಬ ಗೋವಿಂದ ಪೈಗಳ ಇದೇ ಪಂಕ್ತಿಗಳ ಅನುವಾದವನ್ನು ನೋಡಿದಾಗ, ಮೂಲದ ಮೊದಲ ಮೂರು ಪಂಕ್ತಿಗಳು ಅನುವಾದದಲ್ಲಿ ಕಾಣಿಸಿಕೊಳ್ಳಬೇಕಾಗಿದ್ದ ರೀತಿ ಯಾವುದೆಂಬುದು ಸ್ಪಷ್ಟವಾಗುತ್ತದೆ......ಕೊನೆಯ ಎರಡು ಪಂಕ್ತಿಗಳೇನೋ ಶ್ರೀಯವರಲ್ಲಿ ಸುಂದರವಾಗಿಯೇ ಕಾಣಿಸಿಕೊಂಡಿವೆ."

ಹಾಗೆ ಪರಿಶೀಲಿಸಿದರೆ ಪೈಯವರ 'ನೆಗೆವಕ್ಕಿ' ಎಂಬ ಪದದಲ್ಲಿರುವ 'ನೆಗೆ' ಎಂಬುದಕ್ಕೆ ಮೂಲದಲ್ಲಿ ಯಾವ ಆಧಾರವಿದೆ? ಎಂದು ಪ್ರಶ್ನಿಸಬೇಕಾಗುತ್ತದೆ.

ಮತ್ತೊಬ್ಬರು ಈ ಕವನದಲ್ಲಿರುವ 'Spirit' ಶಬ್ದದ ಪ್ರಾಧಾನ್ಯವನ್ನು ಎತ್ತಿಹಿಡಿಯುತ್ತಾರೆ. "ಕವನದುದ್ದಕ್ಕೂ ಒತ್ತು ಬೀಳುವುದು ಈ Spirit ಎನ್ನುವ ಭಾವದ ಮೇಲೆ. ಆಕಾಶವನ್ನು ತುಂಬಿದ 'unbodied joy' ಮೇಲೆ. ...... ಇವರ (ಅನುವಾದದ) ಧ್ವನಿ ಇಡೀ ಕವನದ ಕಲ್ಪನೆಗೆ ವಿರುದ್ಧವಾಗಿದೆ" ಎನ್ನುತ್ತಾರೆ. ಈ ಆಕ್ಷೇಪಣೆಯಲ್ಲಿ ಸತ್ಯಾಂಶವಿಲ್ಲದಿಲ್ಲ. ಆದರೆ 'ಹರ್ಷಮೂರುತಿ' ಎಂಬ ಕಲ್ಪನೆಯನ್ನು ರೂಪಿಸಿದಮೇಲೆ ಮಿಕ್ಕೆಲ್ಲ ವ್ಯತ್ಯಾಸಗಳೂ ಹೊಂದಿಕೆಯಾಗಿವೆ ತಾನೇ ಎಂಬುದು ಉತ್ತರ. ಈ ಟೀಕೆಗಳನ್ನು ವಾಸ್ಯಮಾಡಿ ಉತ್ತರಿಸಬೇಕಾದ ಅಗತ್ಯ ಈಗ ಕಾಣುವುದಿಲ್ಲ. ಶ್ರೀಯವರ ಉದ್ದೇಶ ಸ್ಪಷ್ಟ, ಸಾರ್ಥಕ.

ಈ ಭಾಗ ಹೇಗಾದರೂ ಇರಲಿ. ಇಂಗ್ಲಿಷ್ ಗೀತಗಳಲ್ಲಿರುವ ಪ್ರೇಮಕವನಗಳ ಬಗ್ಗೆ ಒಂದೆರಡು ವಿವರಣೆಗಳನ್ನು ನೀಡುವುದು ಈ ಅನುವಾದ ಸಮಸ್ಯೆಗೆ ಸಾಕಷ್ಟು

ನಿರ್ಧಾರವನ್ನು ನೀಡುತ್ತದೆ ಎಂದು ನನಗೆ ಅನ್ನಿಸುತ್ತಿದೆ. ಈ ಗ್ರಂಥದಲ್ಲಿ ಪ್ರೇಮದ ವಿವಿಧ ಮುಖಗಳನ್ನು ಕುರಿತ 22 ಕವನಗಳಿವೆ. ಪ್ರಾಚೀನ ಸಂಸ್ಕೃತ ಮತ್ತು ಕನ್ನಡ ಕಾವ್ಯಪ್ರಪಂಚದಲ್ಲಿ ಶೃಂಗಾರವು ರಸನಿರೂಪಣೆಯೆಂಬ ಹೆಸರಿನಲ್ಲಿ ಸಾಕಷ್ಟು ವಿಸ್ತಾರವಾಗಿ ಚಿತ್ರಿತವಾಗಿದೆ. ವಾಲ್ಮೀಕಿ ವ್ಯಾಸಾದಿಗಳಲ್ಲಿಯೂ ಬಾಣ ಕಾಳಿದಾಸಾದಿ ಉದಾತ್ತ ಕವಿಗಳಲ್ಲಿಯೂ ಉತ್ತಮವಾದ ಶೃಂಗಾರ ನಿರೂಪಣೆಯಿರುವುದನ್ನು ನಾವು ಕಾಣುತ್ತೇವೆ. ಶೃಂಗಾರ ರಸದ ನಿರೂಪಣೆಗಾಗಿಯೇ ಸ್ವರ್ಗಲೋಕದ ಅಪ್ಸರಸ್ತ್ರೀಯರನ್ನು ಕವಿಗಳು ಸೃಷ್ಟಿಸಿದರೋ ಏನೋ! ಆದರೆ ಬರುಬರುತ್ತಾ ರಾಜನ ಆಸ್ಥಾನ ವರ್ಣನೆಯಿಂದ ಹಿಡಿದು ವಸಂತಮಾಸ, ಕೌಮುದಿ. ಕ್ರೀಡಾಶೈಲ, ಜಲಕ್ರೀಡೆ. ಮಧುಪಾನ, ವನವಿಹಾರ. ಪುಷ್ಪಾಪಚಯ ಮುಂತಾದವುಗಳ ವರ್ಣನೆಗಳಲ್ಲಿಯೂ ಭರ್ತೃಹರಿ, ಅಮರು. ಜಗನ್ನಾಥ ಇವರ ಶತಕಗಳಲ್ಲಿಯೂ ಶೃಂಗಾರದ ಗಾಂಭೀರ್ಯವು ಸತ್ವವನ್ನು ಕಳೆದುಕೊಂಡು ಕವಿಸಮಯದ ಅತಾರ್ಕಿಕವಾದ ಮೂಟೆಯಾಗಿ, ಕಸದ ರಾಶಿಯಾಯಿತು. ವೇಶ್ಯಾವಾಟದ ವರ್ಣನೆಯು ಕಾವ್ಯದ ಪರಮ ಮುಖ್ಯವಾದ ಅಂಗವಾದಮೇಲೆ ಸ್ತ್ರೀವರ್ಣನೆಗೆ ಶಾಸ್ತ್ರೀಯವಾದ ಒಂದು ಕಟ್ಟು ಬಂದಿತು. ಸ್ತ್ರೀಯರನ್ನು ಸ್ವೀಯೆ. ಅನ್ಯೆ, ವೇಶ್ಯೆ ಎಂದು ವಿಭಾಗಮಾಡಿ ಈ ಮೂರು ಗುಂಪುಗಳಿಗೂ ಸಂಬಂಧಿಸಿದಂತೆ ವಿರಹದ ದಶಾವಸ್ಥೆಗಳನ್ನು ಚಿತ್ರಿಸಿ ಒಂದು ನೂತನ ಲೋಕವನ್ನೇ ಸೃಷ್ಟಿ ಮಾಡಿದೆವೆಂದು ನಮ್ಮವರು ಸಂತೃಪ್ತಿ ಹೊಂದಿದರು. ಇನ್ನೊಂದು ಬಗೆಯಾಗಿ ಸ್ತ್ರೀಯರನ್ನು ಚಿತ್ತಿನಿ. ಹಸ್ತಿನಿ. ಶಂಖಿನಿ. ಪದ್ಮಿನಿ ಎಂದು ಗುಂಪು ಮಾಡಿ, ಎಂಟು ವಿಧವಾದ ಶೃಂಗಾರ ನಾಯಿಕೆಯರಾದ ಸ್ವಾಧೀನಪತಿಕೆ, ವಾಸಕಸಜ್ಜಿಕೆ. ಪ್ರೋಷಿತಭರ್ತೃಕೆ, ಉತ್ಕೆ. ವಿಪ್ರಲಬ್ಧೆ. ಕಲಹಾಂತರಿಕೆ. ಖಂಡಿತೆ, ಅಭಿಸಾರಿಕೆ ಎಂಬುವರನ್ನು ವಿಸ್ತಾರವಾಗಿ ವರ್ಣನೆಮಾಡಿ ಕಾವ್ಯವೆಂದರೆ ಇದೇ ಎಂಬ ಭ್ರಮೆಯನ್ನು ಉಂಟುಮಾಡಿಬಿಟ್ಟರು.

ಇದೂ ಅಲ್ಲದೆ ಹೆಣ್ಣು ಮುಗ್ಧೆ. ಪ್ರೌಢೆ. ಪ್ರಗಲ್ಭೆ ಎಂಬ ಬೇರೆ ಬೇರೆಯ ತಿಳಿವಳಿಕೆಯುಳ್ಳವಳಾಗಿಯೂ ಚಿತ್ರಗೊಂಡಳು. ಈ ಮೂರೂ ಅನುರಾಗದಲ್ಲಿ ಸ್ತ್ರೀಯು ತೋರಿಸುವ ಲಜ್ಜೆಯ ಪ್ರಮಾಣವನ್ನು ಅನುಸರಿಸಿದ್ದು. ಇಂಥ ಸೂಕ್ಷ್ಮ ವಿಭಾಗಗಳನ್ನು ಮಾಡಿಕೊಂಡ ಕವಿಗಳು ಸಂಭೋಗಾದಿ ಶೃಂಗಾರಗಳ ವಿಶ್ಲೇಷಣೆಗೆ ಮನಸ್ಸುಮಾಡಿ ಈ ರಮ್ಯಪ್ರಪಂಚವನ್ನೇ ಹೊಲಸುಮಾಡಿಬಿಟ್ಟರು. ಸಭೆಯಲ್ಲಿ. ನಾಲ್ಕು ಜನರೆದುರು ಇಂಥ ಕಾವ್ಯಗಳನ್ನು ಓದುವುದೂ ಕಷ್ಟವಾಯಿತು. ಕವಿಗಳು ತಮ್ಮನ್ನು ಶೃಂಗಾರಕಾರಾಗೃಹ ಎಂದು ಕರೆದುಕೊಳ್ಳುವುದರಲ್ಲಿ ಹೆಮ್ಮೆಪಡುವಂತಾಯಿತು. ಈ ವಿಷಮ ವಿಷವೃತ್ತದಿಂದ ಕನ್ನಡ ಹೊರಬರಬೇಕೆಂದು ಧೈರ್ಯದಿಂದ ಪ್ರಯತ್ನಿಸಿ ಹೊಸಮಾರ್ಗವನ್ನು ಸಮೆದ ಶ್ರೀಯವರಿಗೆ ನಾವೆಷ್ಟು ಕೃತಜ್ಞರಾಗಿದ್ದರೂ ಸಾಲದು.

ಇಂಗ್ಲಿಷಿನಿಂದ ಇಂಥ ಕವನಗಳನ್ನು ಕನ್ನಡಕ್ಕೆ ತರುವಾಗ ಸ್ವಾಭಾವಿಕವಾಗಿಯೇ ಅವರು ಕನ್ನಡದ ಜೀವನದ ಜಾಯಮಾನವನ್ನೂ ಭಾಷೆಯ ಬನಿಯನ್ನೂ ಉಳಿಸಿ ಬೆಳೆಸಬೇಕಾಯಿತು. ಹೀಗೆ ಮಾಡುವಾಗ ಅವರು ಏನೇನು ಉಪಾಯಗಳನ್ನು ಉಪಯೋಗಿಸಿಕೊಂಡಿದ್ದಾರೆನ್ನುವುದನ್ನು ಸ್ಪಷ್ಟಪಡಿಸುವುದಕ್ಕಾಗಿ ಒಂದು ಕವನದ ಸಂಪೂರ್ಣ ಪರಿಚಯವನ್ನು ಇಲ್ಲಿ ಮಾಡಿಕೊಡುತ್ತೇನೆ. ಇಂಗ್ಲಿಷ್ ಕವನದ ಹೆಸರು:

Duncan Gray—by Robert Burns.

(ಈ ಕವನ ಸ್ಕಾಟ್‌ಲೆಂಡಿನ ಆಡುಮಾತಿನಲ್ಲಿದೆ)

Duncan Gray cam here to woo,
    Ha, ha, the wooing o't ;
On blythe yule night when we wer fou,
    Ha, ha, the wooing o't.
Maggie coost head fu' high,
Look'd asklent and unco skeigh,
Gart poor Duncan stand abeigh ;
    Ha, ha the wooing o't.

Duncan fleech'd, and Duncan pray'd ;
    Ha, ha, the wooing o't.
Meg was deaf as Ailsa Craig ;
    Ha, ha, the wooing o't :
Duncan Sigh'd baith out and in,
Grat his een baith bleer't an' blin',
Spak o' lowpin' ower a linn ;
    Ha, ha, the wooing o't.

Time and Chance are but a tide,
    Ha, ha, the wooing o't,
Slighted love is sair to bide,
    Ha, ha, the wooing o't :
Shall I, like a fool, quoth he,
For a haughty hizzie dee ?

She may gae to—France for me !
    Ha, ha, the wooing o’t.

How it comes let doctors tell,
    Ha, ha, the wooing o’t ;
Meg grew sick, as he grew heal,
    Ha, ha, the wooing o’t.
Something in her bosom wrings,
for relief a sigh she brings ;
And Oh ! her een, they spak sic things !
    Ha, ha, the wooing o’t.

Duncan was a lad o’ grace ;
    Ha, ha, the wooing o’t ;
Maggie’s was a piteous case,
    Ha, ha, the wooing o’t ;
Duncan couldna be her death,
Swelling pity Smoor’d his wrath ;
Now they’re crouse and canty baith :
    Ha, ha, the wooing o’t !

ಇದರ ಕನ್ನಡ ಅನುವಾದ :

ಮಾದ, ಮಾದಿ

ಬೇಟೆಕಾರ ಬಂದ ಮಾದ,
    ಹಹ್ಹ ! ಏನು ಬೇಟವ್ವೋ !
ಜೋಡಿ ಸತ್ತು ಸಣ್ಣವಾದ,
    ಹಹ್ಹ ! ಏನು ಬೇಟವ್ವೋ !
ಮಾದಿ ಕತ್ತಸೊಟೆದುದೇನು !
ಅತ್ತ ಇತ್ತ ಸಿಡಿದುದೇನು !
ಮಾದ, ಪಾಪ, ಮಿಡಿದುದೇನು !
    ಹಹ್ಹ ! ಏನು ಬೇಟವ್ವೋ !

ಕಯ್ಯ ಮುಗಿದ, ಕಾಲ ಹಿಡಿದ,
    ಹಹ್ಹ ! ಏನು ಬೇಟವ್ವೋ !
ರೊಯ್ಯನೊದೆಯೆ, ಹಲ್ಲ ಕಡಿದ,
    ಹಹ್ಹ ! ಏನು ಬೇಟವ್ವೋ !
ಬಿಚ್ಚ ಗುಸಿರ ಬಿಟ್ಟ ಮಾದ,
ಅತ್ತ, ಕಂಗೆಡುತ್ತ ಸೀದ.
ಹೊಳೆಯ ಬೀಳಲೆಂದು ಹೋದ !
    ಹಹ್ಹ ! ಏನು ಬೇಟವ್ವೋ !

ಆವ ಗಳಿಗೆಗಾವ ಮನಸು !
    ಹಪ್ಪ ! ಏನು ಬೇಟವೋ !
ಒಲ್ಲದಾಕೆಗೊಲುಮೆ ಕನಸು !
    ಹಪ್ಪ ! ಏನು ಬೇಟವೋ !
ಹುಚ್ಚ ನಾನು ! ಸಾಯಲೇಕೆ ?
ಜಂಬಗಾತಿ ಜರೆಯಲೇಕೆ ?
ಜರ್ಬು ನನಗೆ ! ಹೆಣ್ಣಗೇಕೆ ?
    ಹಪ್ಪ ! ಏನು ಬೇಟವೋ !

ವೈದ್ಯರಿದನು ತಿಳಿದು ಹೇಳಿ,
    ಹಪ್ಪ ! ಏನು ಬೇಟವೋ !
ಬಿದ್ದನವನು—ಬಿದ್ದಳಿವಳು.
    ಹಪ್ಪ ! ಏನು ಬೇಟವೋ !
ಏನೊ ಎದೆಯೊಳಿರಿಯುತಿಹುದು.
ಸುಯ್ಯು, ಸುಯ್ಯು, ತಣ್ಣಗಹುದು.
ಕಣ್ಣೊ, ಒಂದ ಸುರಿಯುತಿಹುದು !
    ಹಪ್ಪ ! ಏನು ಬೇಟವೋ !

ಚಿನ್ನದಂತ ಹುಡುಗ ಮಾದ,
    ಹಪ್ಪ ! ಏನು ಬೇಟವೋ !
ಸಾಯಲಾದ ಹುಡುಗಿ ಮಾದಿ,
    ಹಪ್ಪ ! ಏನು ಬೇಟವೋ !
ಕೊಲ್ಲಲಾರನವಳ ಮಾದ,
ಮುನಿಸು ಕರಗಿ ಮರುಗಿಹೋದ,
ಈಗ ಹಿಡಿಯುದವರ ಮೋದ !
    ಹಪ್ಪ ! ಏನು ಬೇಟವೋ !

ಜಾನಪದ ರೀತಿಯ ಪ್ರೇಮನಿರೂಪಣೆಯಲ್ಲಿ ಅನೇಕ ಬಗೆಯ ಸೊಗಸಿದೆ. ಕೋಲಾಟದ ಪದದಂತೆ ಇದನ್ನು ಹಾಡಿ ಕೋಲು ಹಾಕಬಹುದು ! ಪ್ರಾರಂಭದಲ್ಲಿನ ಗಂಡಿನ ದುಃಖ ಕ್ರಮವಾಗಿ ಹೆಣ್ಣಿನ ದುಃಖವಾಗಿ ಪರಿಣಮಿಸುವುದು. ಬಳಿಕ ಅದು ಎಲ್ಲ ಸಾಮಾನ್ಯ ಕಥೆಗಳಂತೆ ಸುಖವಲ್ಲಿ ಪರಿಣಮಿಸುವುದು—ಈ ಬಗೆಯ ಧಾಟಿಯಲ್ಲಿ ಒಂದು ನಿರಾಭರಣ ಸೌಂದರ್ಯವಿದೆ. ಹಾಸ್ಯರಸವೂ ಮಿತವಾಗಿ ಮಿಶ್ರವಾಗಿರುವುದರಿಂದ ಸೊಗಸು ಇನ್ನೂ ಚೆನ್ನುಪಡೆಯುತ್ತದೆ.

ಈ ಕವನದಮೇಲೆ ವಿಮರ್ಶಕರ ವಿಚಿಕಿತ್ಸಕದೃಷ್ಟಿ ಅಷ್ಟಾಗಿ ಹರಿದಿಲ್ಲ ! ಮೂಲದಲ್ಲಿ 40 ಸಾಲಿನ ಪದ್ಯ ಕನ್ನಡದ ಅನುವಾದದಲ್ಲಿಯೂ 40 ಸಾಲುಗಳನ್ನು ಹೊಂದಿದೆ. 'ಹಪ್ಪ ! ಏನು ಬೇಟವೋ !' ಎಂಬುದೇ 15 ಸಾಲುಗಳಾಗಿ ಪುನರಾವೃತ್ತಿಗೊಂಡಿದೆ. Golden treasury ಯಲ್ಲಿ-ಈ ಸಾಲುಗಳನ್ನು ನಾಲ್ಕು ಕಡೆ ಮಾತ್ರ ಇಟ್ಟುಕೊಂಡು ಮಿಕ್ಕ 11 ಸಾಲುಗಳನ್ನು ಬಿಡಲಾಗಿದೆ. ಆಗ ಒಟ್ಟು 29 ಸಾಲುಗಳ ಕವನವಾಗುತ್ತದೆ, ಅದು. ಆದರೆ ಶ್ರೀಯವರು ಬರ್ನ್ಸ್ ಕವಿಯ ಸಂಕಲನದಲ್ಲಿರುವಂತೆ 40 ಸಾಲುಗಳನ್ನೇ ಉಳಿಸಿಕೊಂಡು ಈ ಪುನರಾವೃತ್ತಿಯ ಸಾಲನ್ನು ರಕ್ಷಿಸಿದ್ದಾರೆ. ಅವರಿಗೆ ಈ ಪುನರಾವೃತ್ತಿಯಲ್ಲಿ ಸೊಗಸು ಕಂಡಿರಬೇಕು. ಅದು ಹಾಗಿರಲಿ.

ಮೂಲದಲ್ಲಿ ಇದ್ದ ಎರಡು ಸಾಲುಗಳನ್ನು ಇವರು ಬಿಟ್ಟಿದ್ದಾರೆ. ಹಾಗೆ ಬಿಟ್ಟಿರುವ ಸಾಲುಗಳಲ್ಲಿ "On blythe yule night when we were

fou" ಎಂಬುದು ಒಂದು. 'yule-night' ಎಂದರೆ 'ಕ್ರಿಸ್‌ಮಸ್ ಹಬ್ಬದ ರಾತ್ರಿ' ಎಂದರ್ಥ. 'when we were free fou' ಎಂದರೆ 'ನಾವು ಪೂರ್ತಿ ಕುಡಿದಿದ್ದಾಗ' ಎಂದರ್ಥ. ಕನ್ನಡದ ಅನುವಾದದಲ್ಲಿ ಈ ಮೂಲದ ಅರ್ಥವನ್ನು ಇಟ್ಟುಕೊಳ್ಳುವುದು ಸಾಧ್ಯವೇ? ಪರ್ಯಾಲೋಚಿಸಬೇಕು. ಇದನ್ನೂ 'false to Burns' ಎನ್ನುವುದಾದರೆ ಈ ಕವನ ಕನ್ನಡಕ್ಕೆ ಬರುವುದು ಸಾಧ್ಯವೇ ಇಲ್ಲ. ಬಂದರೂ ಈಗಿರುವ ಕವನದ ಸೊಗಸು ಉಳಿಯುವುದು ಕಷ್ಟ.

ಶ್ರೀಯವರು ಬಿಟ್ಟಿರುವ ಎರಡನೆಯ ಸಾಲು 'Meg was deaf as Ailsa Craig' ಎಂಬುದು. 'ಮ್ಯಾಗಿ ಎಂಬ ಹುಡುಗಿ ಐಲ್ಸಾ ಬಂಡೆಯಂತೆ ಕಿವುಡಾಗಿದ್ದಳು' ಎಂದು ಅದರ ಅರ್ಥ. ಸ್ಕಾಟ್‌ಲೆಂಡಿನಲ್ಲಿರುವ ಈ ಬಂಡೆಯ ಹೆಸರನ್ನು ಕನ್ನಡದಲ್ಲಿ ಉಳಿಸಿಕೊಳ್ಳುವುದು ಹೇಗೆ? ಈ ಎರಡು ಸಾಲುಗಳನ್ನು ಬಿಟ್ಟರೂ ಹೊಸದಾಗಿ ಎರಡು ಸಾಲುಗಳನ್ನು ಸೇರಿಸಿ ಕವನದ ಸ್ವಾರಸ್ಯ ಹೆಚ್ಚುವಂತೆ ಮಾಡಿದ್ದಾರೆ. ಅವು ಮೊದಲನೆಯ ಪದ್ಯದ ಮೂರನೆಯ ಸಾಲು ಮತ್ತು ಎರಡನೆಯ ಪದ್ಯದ ಮೂರನೆಯ ಸಾಲು. ಅವು ಹೀಗಿದೆ:

1. ಬೇಡಿ ಸತ್ತು ಸುಣ್ಣವಾದ
2. ರೊಯ್ಯನೊದೆಯೆ, ಹಲ್ಲ ಕಡಿದ.

ಕನ್ನಡದ ಭಾಷೆಯ ಸತ್ವವನ್ನು ಹೆಚ್ಚಿಸುವ ಈ ಎರಡು ಸಾಲುಗಳಿಂದ ಮೂಲಕ್ಕೆ ಯಾವ ಅಪಚಾರವೂ ಆಗಿಲ್ಲವೆಂದೇ ನನ್ನ ಭಾವನೆ. ಅಷ್ಟೇ ಅಲ್ಲ, ಕನ್ನಡದ ಜನ ಮೂಲದ ಸೊಗಸನ್ನು ಅನುಭವಿಸಲು ಅಧಿಕವಾದ ಸಹಾಯವನ್ನೂ ಒದಗಿಸುತ್ತದೆ.

ಮುದಿಯ ರಾಮಗೌಡ

ಕುರಿಗಳೆಲ್ಲಾ ರೊಪ್ಪದಲ್ಲಿ, ದನಗಳೆಲ್ಲಾ ಕೊಟ್ಟಿಯಲ್ಲಿ,
ಜನಗಳೆಲ್ಲಾ ಹಟ್ಟಿಯಲ್ಲಿ ಬಳಲಿ ಕೆಡೆದರು ತೆಪ್ಪಗೆ;
ಗಂಡ ಗೊರಕೆ ಹೊಡೆಯುತಿಹನು ನಿದ್ದೆ ಕವಿದು ಮಗ್ಗುಲಲ್ಲಿ—
ನನಗೊ ಹೊಟ್ಟೆಯ ದುಃಖವೆಲ್ಲಾ ಕಣ್ಣ ಹನಿಯಲಿ ಸುರಿವುದು.

ಚಿಕ್ಕ ಹರೆಯದ ಜಾಮನೊಲಿದು ಮದುವೆಗೆನ್ನ ಬಯಸುತಿದ್ದ.
ಮಾತನೆತ್ತಲು ರೊಕ್ಕವಿಲ್ಲದೆ ನಾಚಿ ಸುಮ್ಮನೆ ಇರುವನು.
ದುಡ್ಡು ಕಾಸನು ಕೂಡಹಾಕಲು ಹೋಗಿ ಹಡಗ ಸೇರಿಕೊಂಡ—
ದುಡ್ಡು ಕಾಸನು ನನ್ನ ಸಲುವೇ ಕೂಡಹಾಕಲು ಹೋದನು.

ಅವನು ಹೋಗಿ ನೆಟ್ಟಗೆಲ್ಲಾ ಎರಡು ವಾರ ಕಳೆಯಲಿಲ್ಲ.
ಅಪ್ಪ ಕೈಯ ಮುರಿದುಕೊಂಡ; ಕಳ್ಳರೊಯ್ದರು ದನವನು.
ಅವ್ವ ನರಳುತ ಬಿದ್ದುಕೊಂಡಳು; ಜಾಮ ಎತ್ತಲೊ ಕಡಲಲಿದ್ದನು.
ಇತ್ತ ಮುದಿಯ ರಾಮಗೌಡ ನನ್ನ ಬಯಸಿ ಬಂದನು.

ಅಪ್ಪ ಹೊರಗೆ ಗೆಯ್ಯಲಾರ, ಅವ್ವ ಒಳಗೆ ನೆಯ್ಯಲಾರಳು ;
ಹಗಲು ಇರುಳು ನಾನು ದುಡಿದು ನಮಗೆ ಹಿಟ್ಟು ಹುಟ್ಟದು.
ರಾಮಗೌಡ ಕಷ್ಟಕಾದ ; ಕೈಯ ಹಿಡಿದು ಕಣ್ಣ ನೆನಸಿ,
ಅವರ ಸಲುವಾಗೆನ್ನ, ಜೆನ್ನಿ, ಮದುವೆಯಾಗು, ಎಂದನು.

ನನ್ನ ಮನಸೋ ಒಲ್ಲೆನೆನ್ನುವುದು ; ಜಾಮ ಬರುವ ನೆಚ್ಚು ಹೋಗದು ;
ಎಲ್ಲಿ ಬರುವನು ? ಗಾಳಿ ಬಡಿದು ಹಡಗು ಪುಡಿಪುಡಿಯಾಯಿತು.
ಹಡಗು ಪುಡಿಪುಡಿಯಾಯಿತಯ್ಯೋ ! ಸಾಯದೇತಕೆ ಜಾಮ ಉಳಿದ !
ಕೊರಗಿ ನಾನೀ ಬೇಗೆಯಲ್ಲಿ ಏಕೆ ಬದುಕುತ್ತಿರುವೆನು !

ಅಪ್ಪ ಹೇಳಿದ, ಗದರಿಕೊಂಡ ; ಅವ್ವ ಬಾಯಲಿ ಆಡಬಲ್ಲಳು :
ಅವಳು ನೋಡಿದ ನೋಟವೇ ನನ್ನೆದೆಯನಿರಿಯಿತು ಮುರಿಯಿತು.
ಅವನ ಕೈಯಲಿ ಕೈಯನಿಟ್ಟರು ; ಮನಸು ಕಡಲಲಿ ನಿಂತುಹೋಯಿತು.
ಅಂತು ಮುದಿಯ ರಾಮಗೌಡ ನನಗೆ ಗಂಡನಾದನು.

ಮದುವೆಯಾಗಿ ನೆಟ್ಟಗೆಲ್ಲಾ ನಾಲ್ಕು ವಾರ ಕಳೆಯಲಿಲ್ಲ.
ಬಾಗಿಲಲ್ಲಿ ಕಲ್ಲಮೇಲೆ ಕುಳಿತು ಕೊರಗುತ–ಕಂಡೆನು !
ಗಾಳಿಯಾಗಿ ಬಂದ ಜಾಮ ಎಂದುಕೊಂಡೆನು—ಜಾಮ ನಕ್ಕು,
ತೆರವ ತಂದೆ, ಮದುವೆಯಾಗಲು ಬಂದೆ, ಜೆನ್ನಿ, ಎಂದನು.

ಬಿಕ್ಕಿ ಬಿಕ್ಕಿ ನುಡಿಸಿ ನುಡಿಸಿ, ದುಃಖವೆಲ್ಲಾ ಹೇಳಿಕೊಂಡೆವು,
ಒಂದು ಮುತ್ತ ಸೆಳೆದುಕೊಂಡೆವು–ಅಟ್ಟಿಬಿಟ್ಟೆ, ಅಗಲಿ !
ಸಾಯ ಒಲ್ಲೆನು ನಾನು ಪಾಪಿ ! ಅಯ್ಯೊ ! ಪಾಪಿಗೆ ಸಾವು ಬರುದೆ ?
ಹುಟ್ಟದೇ ಇರಬಾರದೇ ! ಈ ಬೇಗೆ ಬಾಳನು ತಾಳೆನೇ !

ಗಾಳಿಯಾಗಿ ಸುಳಿಯುತಿರುವೆ–ಮನೆಯ ಕೆಲಸ ಅಕ್ಕರಿಲ್ಲ.
ಜಾಮನನು ನೆನೆಯುವುದು ಪಾಪ ; ಎಷ್ಟೊ ತಡೆಯುವೆ ಮನಸನು.
ಒಳ್ಳೆ ಗರತಿಯಾಗಿ ಬದುಕಲು ಎದೆಯನೆಷ್ಟೊ ಗಟ್ಟಿಮಾಡುವೆ.
ರಾಮಗೌಡನ ಪ್ರೀತಿ ನಂಬಿಕೆಗೆಂತು ದ್ರೋಹವ ಬಗೆವೆನು !

—*'Auld Robin Gray'* by Lady Lindsay

ಕನ್ನಡ ನಾಡಿನ ಗ್ರಾಮೀಣ ಜೀವನದ ಚಿತ್ರ, ಅಲ್ಲಿನ ಬಡತನ, ಕಷ್ಟಕಾರ್ಪಣ್ಯ, ತಂದೆಯ ಧಾರ್ಷ್ಟ್ಯ, ತಾಯಿಯ ನಿಸ್ಸಹಾಯಕ ಕರುಣೆ, ವಾತ್ಸಲ್ಯ, ಸಿರಿವಂತ ಮುದುಕನ ಒಳ್ಳೆಯತನ ಮತ್ತು ಆಸೆ ಪ್ರೀತಿಗಳು, ಯುವಕನ ದುರವಸ್ಥೆ ಆದರೂ ಮನಸ್ಥೈರ್ಯ, ಯುವತಿಯ ಅಂತರಂಗದ ಅಪೇಕ್ಷೆ, ಬಹಿರಂಗದ ದಾರುಣ ಸತ್ಯ, ಸ್ವಾರ್ಥವನ್ನು ಬಲಿಕೊಟ್ಟು ಅರ್ಪಣೆಯಾಗಿ ಬಾಳುವ ನಿರ್ಧಾರ—ಇದೇ ತಾನೇ ಮಾನವ

ನನ್ನು ಮಾನವನನ್ನಾಗಿ ಮಾಡುವುದು. ನಮ್ಮ ಸಾಂಸಾರಿಕ ಬದುಕಿನಲ್ಲಿ ಇಂಥ ಎಷ್ಟು ಇತರ ಸತ್ಯಗಳು ನಿಷ್ಠುರವಾಗಿ ನಮ್ಮನ್ನು ಎದುರಿಸುತ್ತಿವೆ. ಅವೆಲ್ಲಕ್ಕೂ ದೃಷ್ಟಾಂತವಂತೆ ಇಲ್ಲವೆ ಈ ಕವನದ ಚಿತ್ರ. ಇದನ್ನು ಅತ್ಯುತ್ತಮ ಕಾವ್ಯವೆಂದು ಕರೆಯದಿದ್ದರೆ ಮತ್ತಾವುದನ್ನು ಕರೆಯಬೇಕು ?

'ಮುದಿಯ ರಾಮಗೌಡ'ನಂಥ ದುರಂತ ಕಥೆಯ ಕವನ ಯಾವ ಸಾಹಿತ್ಯದಲ್ಲೇ ಆಗಲಿ ಹೆಚ್ಚಾಗಿ ಇರಲಾರದು. ಆ ಕವನದ ಸರಳತೆ, ಛಂದಸ್ಸು, ಭಾಷೆ, ಆಳವಾದ ಅಂತರಂಗದ ಚಲನೆ ಒಟ್ಟಿಗೆ ದೊರಕುವುದು ಬಹು ಕಷ್ಟ. ಇದನ್ನು ರಚಿಸಿದವಳು ಒಬ್ಬ ಹೆಣ್ಣಾದುದರಿಂದ ಇಷ್ಟೊಂದು ನವಿರಾಗಿ ಭಾವ ಮೂಡಿಬಂದಿದೆ. ಕನ್ನಡದಲ್ಲಿ 'ತೆರ' ಎಂಬ ಒಂದು ಪದವನ್ನು ಬಿಟ್ಟರೆ ಬೇರೆಲ್ಲ ಚೊಕ್ಕ ಚಿನ್ನದಂಥ ಅನುವಾದ. ಈ ಕವನಸಂಕಲನದಲ್ಲಿರುವ ಅತ್ಯುತ್ತಮ ಅನುವಾದಕ್ಕೆ ಇದನ್ನು ದೃಷ್ಟಾಂತವಾಗಿಸಬಹುದು.

ಇಂಗ್ಲಿಷ್ ಗೀತಗಳ ಕವನಗಳಲ್ಲಿ ಕನ್ನಡ ಕವಿಗಳಿಗೆ ಮಾರ್ಗದರ್ಶಕಗಳಾದ ಕವನಗಳನ್ನು ಆರಿಸಿರುವುದು ನಿಜವಾದರೂ ತಮ್ಮ ಬಾಳಿಗೇ ಮಾರ್ಗದರ್ಶಕವಾದ ಕೆಲವು ತತ್ವಗಳನ್ನೂ ಶ್ರೀಯವರು ಈ ಅನುವಾದ ಸಮಯದಲ್ಲಿಯೇ ಕಂಡುಕೊಂಡರು. ಅಂಥ ಕವನಗಳೆಲ್ಲವನ್ನೂ ಅವರು ಅನುವಾದ ಮಾಡಿಲ್ಲದಿದ್ದರೂ ಅಂಥದೊಂದನ್ನು ಅನುವಾದ ಮಾಡಿರುವುದಂತೂ ನಿಜ.

'ಪೆಡಸು ದಾರಿ' ಎಂಬುದು ಅಂಥದೊಂದು ಕವನ. ಇದರ ಮೂಲ ಕ್ರಿಸ್ಟಿನ ರಾಸೆಟಿ ಅವರು ಬರೆದ 'Up-Hill' ಎಂಬ ಕವನ. ಈಕೆ Dante Gabriel Rossetti ಕವಿಯ ತಂಗಿ. ಈಕೆಯ ಕವನಗಳಲ್ಲಿ ಧಾರ್ಮಿಕ ಮತ್ತು ನೈತಿಕ ಜೀವನಕ್ಕೆ ಪ್ರಾಧಾನ್ಯ ದೊರೆತಿದೆ.* ಇಂಥ ಒಂದು ನಿರ್ಧಾರವನ್ನು ನಾನು ಈ ಕವನದಲ್ಲಿ ಕಾಣುತ್ತಿದ್ದೇನೆ.

---

* *The most substantial of her poems are allegories in which we watch a curiously imaginative mind at work, weaving out of an exclusively psychological sensuality an exuberance of description, and toning down the passionate element to innocent caresses, whilst the conscience, secretly astir, is pre-occupied with moral ends, and interprets itself by a kind of gracious symbolism. (P. 1180. A History of English Literature by Emile Legouis and Louis Caramian-1948 Ed)*

ಕವನ ಇದು : **Up-Hill** (ಪೆಡಸು ದಾರಿ)

Does the road wind up-hill all the way?
    Yes, to the very end.
Will the day's journey take the whole long day?
    From morn to night, my friend.

But is there for the night a resting place?
    A roof for when the slow dark hours begin.
May not the darkness hide it from my face?
    You cannot miss that inn.

Shall I meet other wayfarers at night?
    Those who have gone before.
Then must I know, or call when just in sight?
    They will not keep you standing at the door.

Shall I find comfort, travel-sore and weak?
    Of labour you shall find the sum.
Will there be beds for me and all who seek?
    Yes, beds for all who come.

—Christina Rossetti

ಪೆಡಸು ದಾರಿ

ದಾರಿ ಉದ್ದಕು ಬಳಸಿ ಏರುವುದೆ ?
    ಅಹುದು ಕೊನೆಯವರೆಗೆ.
ದಿನದ ಪಯಣ ದಿನವೆಲ್ಲ ಹಿಡಿಯುವುದೆ ?
    ಎಲ್ಲ—ಇರುಳವರೆಗೆ.

ಇರುಳು ತಂಗುವರೆ ಛತ್ರವೇನಿಹುದೆ ?
    ಇಹುದು. ಮಬ್ಬು ಕವಿಯೆ.
ಕವಿದ ಮಬ್ಬಿನಲಿ ಕಾಣದಿರಬಹುದೆ ?
    ಇಲ್ಲ—ಕಾಣದಿರದೆ.

ಅಲ್ಲಿ ದಾರಿಗರು ಬಂದು ಕೂಡುವರೆ ?
    ಮುಂದೆ ಸಾಗಿದವರೆ.
ತಟ್ಟಿ ಬಾಗಿಲನು ಕೂಗಿ ಸೋಲುವುದೆ ?
    ಕೂಗಿ ತೆರೆವರವರೆ.

ನಡೆದು ನೊಂದವನು ಸುಖಿಪನುಣ್ಣುವನೆ ?
    ಉಣುವೆ ದುಃಖವಳಿದೆ.
ಬಯಸಿ ಬಂದವರಿಗೆಲ್ಲ ಹಾಸಿಗೆಯೆ ?
    ಬಯಸಿ ಬಂದವರಿಗೆ.

ಇಂಥ ನಿರ್ಧಾರದ ಬಾಳನ್ನು ಬಾಳಿ, ಬಾಳಿನಲ್ಲಿ ಕಂಡ ದರ್ಶನವನ್ನು ನಮಗೆ ಬಿಟ್ಟು ನಮ್ಮ ದಾರಿಯನ್ನು ಸುಗಮವನ್ನಾಗಿರುವ ಈ ಮಹಾತ್ಮರನ್ನು ನೆನೆಯುವುದೂ ನಮಗೆ ಪುಣ್ಯಕರ.

ಅನುಬಂಧ

ಜಿ. ಎಂ. ಶ್ರೀಕಂಠಯ್ಯನವರನ್ನು ಕುರಿತು ಎತ್ತುವ ಆಕ್ಷೇಪಣೆಗಳು ಮೂರು ಮುಖ್ಯವಾದುವು ಇವೆ. ಇಂಗ್ಲಿಷ್ ಭಾಷಾ ಸಾಹಿತ್ಯಗಳ ಬೋಧಕರಾಗಿ ಅವರು ತಮ್ಮ ವಿದ್ವತ್ತಿನ ಪ್ರದರ್ಶನಕ್ಕೆ ಅವಕಾಶಮಾಡಿಕೊಳ್ಳುತ್ತಿದ್ದರು ಎಂಬುದೊಂದು. ಅವರ ಭಾಷಣಗಳಲ್ಲಿ ಬೋಧನಾವಸರಗಳಲ್ಲಿ ಅವರು ಅನೇಕ ವಿಷಯಗಳನ್ನು ಒಟ್ಟು ಸೇರಿಸುತ್ತಿದ್ದುದು ನಿಜ. ಆದರೆ ಅವುಗಳಲ್ಲಿ ಯಾವುದೊಂದೂ ಅನಾವಶ್ಯಕವಾದ ವಿಷಯವಾಗುತ್ತಿರಲಿಲ್ಲ. ಅಲ್ಪತೃಪ್ತನಾದ ವಿದ್ಯಾರ್ಥಿಗೆ ಇಷ್ಟೊಂದು ವಿಷಯಗಳು ಹೊರೆಯಾಗಿ ಕಾಣುತ್ತಿದ್ದಿರಬಹುದು. ಅಲ್ಲದೆ 'ಶ್ರೀ'ಯವರ ವ್ಯಕ್ತಿತ್ವದಲ್ಲಿದ್ದ ಒಂದು ದೃಷ್ಟಿ—ಒಂದು ಪ್ರಸಂಗಕ್ಕೆ ಸಂಬಂಧಿಸಿದ ಎಲ್ಲವನ್ನೂ ಒಂದೆಡೆ ಕ್ರೋಡೀಕರಿಸಿರಬೇಕೆಂಬುದು—ಸಾಮಾನ್ಯನ ಅಳವನ್ನು ಮೀರಿದ್ದಾಗಿತ್ತು. ಇದರಿಂದ ಹಾಗೆ ಕೆಲವರಿಗೆ ಅವರ ಭಾಷಣದ ರೀತಿ ಪ್ರದರ್ಶನಪ್ರಾಧಾನ್ಯವಾಗಿ ಕಂಡಿದ್ದರೆ ಅದು 'ಶ್ರೀ'ಯವರ ತಪ್ಪಲ್ಲ. ಒಬ್ಬ ವಿದ್ವಾಂಸನ ನಿರೂಪಣಾವಿಧಾನದ ಪ್ರಭಾವ ಅದು ಅಷ್ಟೆ! ತಮ್ಮ ವಿದ್ವತ್ತನ್ನು ಪ್ರದರ್ಶಿಸಲೆಂದೇ ಭಾಷಣವನ್ನು ಅಪ್ರಿಯವಾಗಿಸುತ್ತಿದ್ದರು ಎಂಬುದು ಸರಿಯಾದ ತೀರ್ಮಾನವಲ್ಲ. ಅವರ ವಿದ್ಯಾರ್ಥಿಗಳಾದ ನಮಗೆ ಎಷ್ಟೋ ವೇಳೆ ಒಂದು ವಿಷಯದ ವಿಸ್ತಾರ ಅರ್ಥವಾಗುತ್ತಿದ್ದುದೇ ಅಂಥ ನಿರೂಪಣೆಗಳಿಂದ. ತಿಳಿವಳಿಕೆಯಲ್ಲಿ ಆಸಕ್ತಿಯುಳ್ಳವರಿಗೆ ಅವರ ಭಾಷಣದ ವೈಖರಿ ತುಂಬ ಪ್ರಯೋಜನಕರವಾಗುತ್ತಿತ್ತು.

ಶ್ರೀಯವರನ್ನು ಆಕ್ಷೇಪಿಸುತ್ತಿದ್ದವರು ಅವರ ರಾಜಭಕ್ತಿಯನ್ನು ಅತಿ ಬೂಟಾಟಿಕೆಯೆಂದು ಕರೆಯುತ್ತಿದ್ದರು. ನಿಜವಾಗಿ ಅದು ಒಬ್ಬ ಅರ್ಹನಾದ ಮಹಾರಾಜನ ವ್ಯಕ್ತಿತ್ವದ ನಿಜವಾದ ಪ್ರಶಂಸೆಯಾಗಿತ್ತು. ಭಾರತದ ರಾಜಮಹಾರಾಜರುಗಳ ಸಂಖ್ಯೆ ಐನೂರನ್ನೂ ಮೀರಿದ್ದ ಆ ಕಾಲದಲ್ಲಿ ಮೈಸೂರರಸರ ವ್ಯಕ್ತಿತ್ವ ಯಾರಿಗಾದರೂ ವಿಶಿಷ್ಟವೆಂದು ಕಾಣುತ್ತಿತ್ತು. ಅಂಥವರನ್ನು ಗೌರವದಿಂದ ಕಂಡರೆ ಅದೇನೂ ತಪ್ಪಾಗಲಾರದು. ಈಗಿನ ರಾಜಕೀಯದಲ್ಲಿ ಅಧಿಕಾರಕ್ಕೆ ಬಂದವರನ್ನು ನಡೆಸಿಕೊಳ್ಳುವ ರೀತಿಯಲ್ಲಿ ಕಾಣುವ ಅತಿ ಕೃತ್ರಿಮ ವ್ಯವಹಾರಗಳಿಗೂ ಸ್ವಾರ್ಥಪರ ನಡವಳಿಕೆಗೂ ಹೋಲಿಸಿದರೆ ಇದೊಂದು ಗುಣವೆಂದೇ ಪರಿಗಣಿತವಾಗಬೇಕು. ಪ್ರಜಾಪ್ರಭುತ್ವದ ಮಾದರಿಯು ಸಾಗುತ್ತಿರುವ ದಾರಿಯನ್ನು ಗಮನಿಸಿದರೆ ನಮ್ಮ ಹಿಂದಿನ ಪ್ರಜಾಪ್ರತಿನಿಧಿಗಳುಳ್ಳ ರಾಜ ಸರಕಾರ ಎಷ್ಟೋ ಮೇಲೆನ್ನಿಸುತ್ತದೆ. ಆದರೂ ಶ್ರೀಯವರು ಪ್ರಜಾಪ್ರಭುತ್ವವನ್ನು ವಿರೋಧಿಸಿದವರಲ್ಲ. ವಿಶಿಷ್ಟ ರಾಜರ ವ್ಯಕ್ತಿತ್ವವನ್ನು ಗೌರವಿಸಿದವರು. ಎಲಿಜಬೆತ್ ರಾಣಿಗೆ ರಾಜಭಕ್ತಿಯನ್ನು ತೋರಿಸಿದವನೆಂದು ಶೇಕ್ಸ್‌ಪಿಯರನನ್ನು ಯಾರೂ ಹೀಯಾಳಿಸುವುದಿಲ್ಲ ತಾನೇ! ಹಾಗಿದ್ದೂ ಶ್ರೀಯವರನ್ನು ನೋಡುವ ದೃಷ್ಟಿ ವ್ಯತ್ಯಾಸವಾಗಿರುವುದು ಆಶ್ಚರ್ಯಕರ.

ಭಾರತವನ್ನು ಆಳುತ್ತಿದ್ದ ಬ್ರಿಟಿಷರನ್ನು ಕುರಿತು ಬೈಯುವರು ಎಂದೂ ಸಮಾಧಾನದಿಂದ ಮಾತನಾಡಿದವರಲ್ಲ. ಇಂಗ್ಲಿಷ್ ಕವಿಗಳು ದೇಶಭಕ್ತಿಯನ್ನು ಪ್ರದರ್ಶಿಸಿರುವ ಕವನಗಳನ್ನು ಅವರು ಅನುವಾದಿಸಿರುವುದು ನಾವೂ ಇಂಗ್ಲೆಂಡನ್ನೇ ನಂಬಿಕೊಂಡಿರಬೇಕೆಂದೇನೂ ಅಲ್ಲ. ನಮ್ಮಲ್ಲಿಯೂ ಜನ ಅಂಥ ರೀತಿಯಲ್ಲಿ ನಮ್ಮ ದೇಶದ ಭಕ್ತಿಯನ್ನು ಪ್ರದರ್ಶಿಸಲಿ ಎಂಬ ದೃಷ್ಟಿಯಿಂದ. "ಭರತಮಾತೆಯೆ! ಭರತಮಾತೆಯೆ! ಎಂದು ನೀ ತಲೆಯೆತ್ತುವೆ" ಎಂದು 1914ರಲ್ಲಿಯೇ ಹಾತೊರೆದವರು ದೇಶಭಕ್ತಿಯನ್ನು ಪ್ರದರ್ಶಿಸದ ಕವಿಯೇನೂ ಅಲ್ಲ. ಇದನ್ನು ನೂತನ ವಿಮರ್ಶಕರು ಮರೆಯಬಾರದು. 'ಸಂಭಾವನೆ'ಯನ್ನು ಅವರಿಗೆ ಅವರ ಶಿಷ್ಯರೂ ಮಿತ್ರರೂ ಅರ್ಪಿಸಿದಾಗ ಅವರು ಹೇಳಿದ ಮಾತುಗಳಲ್ಲಿ ಅವರ ದೃಷ್ಟಿ ಚೆನ್ನಾಗಿ ಚಿತ್ರಿತವಾಗಿದೆ. "ಅಂಧಶ್ರದ್ಧೆಯಿಂದ ಬಿಡುಗಡೆಯನ್ನೂ ಒಂದು ದೊಡ್ಡ ಕೆಲಸಕ್ಕಾಗಿ ಒಕ್ಕಟ್ಟನ್ನೂ ಧ್ಯೇಯ ಸಾಧನೆಯಿಂದ ಸೌಖ್ಯವನ್ನೂ ಪಡೆದು ಸ್ವತಂತ್ರ ಸಂಯುಕ್ತ ಸುಖಮಯ ಭಾರತದಲ್ಲಿ (a free united happy India) ಬಾಳೋಣ ಎಂಬುದೇ ನನ್ನ ಜೀವನದ ರಹಸ್ಯ—ನನ್ನ ಕನ್ನಡ ಕೆಲಸದ ಗುಟ್ಟು: ನನ್ನ ಮಿಡಿತ, ತುಡಿತ."

ಈ ಮಾತುಗಳನ್ನು ಆಡುವ ವ್ಯಕ್ತಿ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿದ್ದರೆಂದರೆ ಎಂಥ ವಿಪರ್ಯಾಸ! ಓದುಗರು ಈ ವಿವರಗಳನ್ನು ಗಮನಿಸಬೇಕು.

ದತ್ತಿ ಉಪನ್ಯಾಸಗಳು–೧೯೮೮

ಗ್ರೀಕ್ ನಾಟಕಗಳ ಹಿನ್ನೆಲೆಯಲ್ಲಿ ‘ಅಶ್ವತ್ಥಾಮನ್’ ಮತ್ತು ‘ಆಗ್ರಹ’

(ಬಿ.ಎಂ.ಶ್ರೀ. ಸ್ಮಾರಕೋಪನ್ಯಾಸ)

ಉಪನ್ಯಾಸಕರು : **ಪ್ರೊ॥ ಎಲ್. ಎಸ್. ಶೇಷಗಿರಿ ರಾವ್**

‘ಶ್ರೀ’ ಅವರು ‘ಅಶ್ವತ್ಥಾಮನ್’ ನಾಟಕವನ್ನು 1929ರಲ್ಲಿ ಬರೆದರು. ಮೂರು ವರ್ಷಕ್ಕೆ ಮೊದಲೇ ಅವರು ‘ಗದಾಯುದ್ಧ ನಾಟಕಂ’ ಬರೆದಿದ್ದರು. ರನ್ನನ ಮಹಾಕಾವ್ಯದಲ್ಲಿ ಅಡಗಿದ ನಾಟಕವನ್ನು ಹೊರತೆಗೆದರು. ಆದರೆ ‘ಗದಾಯುದ್ಧ ನಾಟಕಂ’ ಕರುಣಾಜನಕ (pathetic) ಅಲ್ಲದೆ ಗಂಭೀರ (tragic) ಅಲ್ಲ. ಅದರ ನಾಯಕ ದುರ್ಯೋಧನ. ಮಹಾಚಕ್ರವರ್ತಿಯಾಗಿದ್ದವನು ಈಗ ‘ಧವಳ ಗಜೇಂದ್ರಮುಂ ಧವಳ ಚಾಮರಮುಂ ಧವಳಾತಪತ್ರಮುಂ’ ಇಲ್ಲದೆ ಪರದೇಶಿಯಂತೆ ಒಬ್ಬನೇ ಯುದ್ಧಭೂಮಿಯಲ್ಲಿ ಹೆಣಗಳ ಮಧ್ಯೆ ಸಾಗುವುದು ನಮ್ಮ ಕರುಳನ್ನು ಹಿಂಡುತ್ತದೆ. ಆದರೆ ಇಡೀ ನಾಟಕದಲ್ಲಿ ಅವನು ಮಾಡಿದ ಪಾಪಗಳನ್ನು ಮರೆಯಲು ನಮಗೆ ಅವಕಾಶವೇ ಇಲ್ಲ. ನಾಟಕದ ಪ್ರಾರಂಭದಲ್ಲಿ ದ್ರೌಪದಿ ಕಾಣಿಸಿಕೊಳ್ಳುತ್ತಾಳೆ: ಅವನ ಪಾಪಗಳಿಂದ ನೊಂದ, ಸಿಡಿಯುತ್ತಿರುವ ಜೀವ ಅದು. ದುರ್ಯೋಧನನೂ ‘ವನಿತೆಯ ಕೇಶಮಂ ಸಭೆಯೊಳೆನ್ನನುಜಂ ತೆಗೆವಲ್ಲಿ ಗಂಡನಾಗನೆ!’ ಮುಂತಾದ ಮಾತುಗಳಲ್ಲಿ ತಾನು ಮಾಡಿದ ಪಾಪಕೃತ್ಯಗಳನ್ನೆ ಪಟ್ಟಿಮಾಡುತ್ತಾನೆ. ಗದಾಯುದ್ಧದ ಸಂದರ್ಭದಲ್ಲಿ ದುರ್ಯೋಧನನ ಊರುಭಂಗಕ್ಕೆ ಮೊದಲು “ಇದು ಕಳಿಂಗನಂ ನುಂಗಿದ ದರ್ಪಕ್ಕೆ” ಮೊದಲಾದ ಮೂದಲೆಮಾತುಗಳೂ ಅವನ ಪಾಪಕೃತ್ಯಗಳನ್ನು ನಮ್ಮ ಕಣ್ಣಮುಂದೆ ನಿಲ್ಲಿಸುತ್ತವೆ. ಇವೇನೂ ಸಾಮಾನ್ಯ ಅಪರಾಧಗಳಲ್ಲ. ಆದುದರಿಂದ ಈ ನಾಟಕದಲ್ಲಿ, ನಾಯಕನು ಎಂತಹ ಉನ್ನತಿಯಿಂದ ಉರುಳಿದ ಎಂಬ ಭಾವನೆ ಅವನಲ್ಲಿ ಅನುಕಂಪವನ್ನು ಮೂಡಿಸಿದರೂ, ಅವನ ಪರಿಭವ, ಪತನ ನ್ಯಾಯವಾಗಿ ಅವನ ಪಾಲಿಗೆ ಬಂದ ಶಿಕ್ಷೆ ಎಂಬ ಭಾವನೆಯೂ ಬಲವತ್ತರವಾಗಿರುತ್ತದೆ. ಕನ್ನಡದಲ್ಲಿ ನಿಜವಾಗಿ ಮೊದಲನೆಯ ಗಂಭೀರ ನಾಟಕ ‘ಅಶ್ವತ್ಥಾಮನ್’.

‘ಅಶ್ವತ್ಥಾಮನ್’ ಪ್ರಾಚೀನ ಗ್ರೀಕ್ ನಾಟಕಕಾರ ಸಫೋಕ್ಲೀಸನ ನಾಟಕ ‘ಏಜಾಕ್ಸ್’ (‘ಅಯಾಸ್’) ಎಂದು ಬೇರೆ ಹೇಳಬೇಕಾಗಿಲ್ಲ. ಈಗ ಸಿಕ್ಕಿರುವ ಸಫೋಕ್ಲೀಸನನಾಟಕಗಳಲ್ಲಿ ಇದೇ ಮೊದಲನೆಯದು. ಸಫೋಕ್ಲೀಸ್ ಗ್ರೀಸಿನ ಮಹಾ ಗಂಭೀರ

ನಾಟಕತ್ರಯರಲ್ಲಿ ಎರಡನೆಯವನು. ಮೊದಲನೆಯವನು ಈಸ್ಕಿಲಸ್ (ಕ್ರಿ. ಪೂ. 525–456) : ಇವನು ಗಂಭೀರನಾಟಕವನ್ನು ಸೃಷ್ಟಿಸಿದವನು. (ಕಡೆಯವನು ಯೂರಿಪಿಡೀಸ್, ಕ್ರಿ.ಪೂ. 480–406). ಗ್ರೀಕ್ ನಾಟಕ ಧಾರ್ಮಿಕ ಸಂಗೀತ–ನೃತ್ಯಗಳಿಂದ ಹುಟ್ಟಿಬಂದದ್ದು. ಡಯೊನೀಸಸ್ ದೇವತೆಯ ಹಬ್ಬದ ಕಾಲದಲ್ಲಿ ನಡೆಯುತ್ತಿದ್ದ ಧಾರ್ಮಿಕ ವಿಧಿಗಳಿಂದ ಎದ್ದುಬಂದ ಈ ಸಾಹಿತ್ಯಪ್ರಕಾರಕ್ಕೆ ಕಡೆಯ ವರೆಗೂ ಧರ್ಮದ ಸಂಬಂಧ ಬಿಡಲೇ ಇಲ್ಲ. ಅದೃಶ್ಯರೂ ಅಮರರೂ ಅಮಿತ ಶಕ್ತರೂ ಆದ ದೇವತೆಗಳಿಗೂ ಮನುಷ್ಯನಿಗೂ ಇರುವ ಸಂಬಂಧ, ವಿಶ್ವದಲ್ಲಿ ಮನುಷ್ಯನ ಸ್ಥಾನ–ಇದು ಈ ಮೂವರು ಗಂಭೀರನಾಟಕಕಾರರ ಕೃತಿಗಳ ವಸ್ತು. ಗ್ರೀಕ್ ಗಂಭೀರ ನಾಟಕ ನಾಯಕನ ಸಾವಿನಿಂದ ಕೊನೆಯಾಗಬೇಕಾಗಿಲ್ಲ. (ಈಸ್ಕಿಲಸನ 'ದಿ ಯುಮಿನೈಡೀಸ್', ಸಫೋಕ್ಲೀಸನ 'ಈಡಿಪಸ್ ಎಟ್ ಕಲೋನಸ್', ಯೂರಿಪಿಡೀಸನ 'ಮೀಡಿಯ' ಯಾವುದೂ ನಾಯಕನ/ನಾಯಕಿಯ ಸಾವಿನಲ್ಲಿ ಕೊನೆಗಾಣುವುದಿಲ್ಲ.) ಗ್ರೀಕ್ ಗಂಭೀರ ನಾಟಕ ಮನುಷ್ಯನ ಮತ್ತು ದೇವತೆಗಳ ಸಂಬಂಧ, ಮನುಷ್ಯನ ನೈತಿಕ ಹೊಣೆ, ಉನ್ನತಿಯಿಂದ ಅವನ ಅಧಃಪತನಕ್ಕೆ ಕಾರಣ–ಇಂತಹ ಬಾಳಿನ ಮೂಲ ಸಮಸ್ಯೆಗಳ ಗಂಭೀರ ಪೃಥಕ್ಕರಣ.

ಗ್ರೀಕ್ ನಾಟಕಗಳ ರಚನೆಯ ಸಂದರ್ಭದಿಂದ ಅವಕ್ಕೆ ಕೆಲವು ವಿಶಿಷ್ಟ ಲಕ್ಷಣಗಳು ಲಭ್ಯವಾದವು. ಇವು ಪ್ರದರ್ಶಿತವಾಗುತ್ತಿದ್ದುದು ಒಂದು ಬಯಲು ರಂಗಮಂದಿರದಲ್ಲಿ. ಗುಡ್ಡದ ಒಂದು ಭಾಗವನ್ನು ಮೆಟ್ಟಿಲುಮೆಟ್ಟಿಲಾಗಿ ಕಡಿದು ಜನ ಕುಳಿತುಕೊಳ್ಳಲು ಅವಕಾಶಮಾಡಲಾಗಿತ್ತು. (ಮುಂದೆ ಬೇರೆ ಬಗೆಯ ಪೀಠಗಳು ಬಂದವು.) ಸುಮಾರು ಹದಿನಾಲ್ಕು–ಹದಿನೈದು ಸಾವಿರ ಜನ ಕುಳಿತು ನಾಟಕವನ್ನು ವೀಕ್ಷಿಸುತ್ತಿದ್ದರು. ಪ್ರತಿ ವರ್ಷ ಆಯ್ಕೆಯಾದ ನಾಟಕಕಾರರು ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದರು. ಪ್ರತಿ ನಾಟಕಕಾರ ಮೂರು ಗಂಭೀರ ನಾಟಕಗಳನ್ನೂ ಒಂದು 'ಸ್ಯಾಟಿರ್' (Satyr) ನಾಟಕವನ್ನೂ ಬರೆಯಬೇಕಾಗಿತ್ತು. ಬೆಳಗ್ಗೆ ಪ್ರಾರಂಭವಾದ ಪ್ರದರ್ಶನ ಸೂರ್ಯ ಮುಳುಗುವುದರೊಳಗೆ ಮುಗಿಯಬೇಕಾಗಿತ್ತು. ಆದ್ದರಿಂದ ಈ ನಾಟಕಗಳು ನಮಗೆ ಪರಿಚಿತವಾಗಿರುವ ಬಹು ನಾಟಕಗಳಿಗಿಂತ ಹ್ರಸ್ವ. ಗ್ರೀಕ್ ನಾಟಕ ಸಾಮಾನ್ಯವಾಗಿ 1700–1800 ಪಂಕ್ತಿಗಳಷ್ಟಿರುತ್ತದೆ. ಇದರ ಮೂಲ ಡಯೊನೀಸಸನ ಭಕ್ತರ ಮೇಳದ ವೃಂದಗಾನದಲ್ಲಿ. ಮೇಳನಾಟಕದ ಭಾಗವಾಗಿ ಉಳಿದು ಕೊಂಡಿತು. ಒಂದು ಗುಂಪು ಹೆಚ್ಚು ಕಾಲ ಅಥವಾ ಅನೇಕ ಸ್ಥಳಗಳಲ್ಲಿ ಕಾಣಿಸಿ ಕೊಳ್ಳುವುದು ಅಸಹಜವಾದ್ದರಿಂದ ಕಾಲೈಕ್ಯ ಮತ್ತು ಸ್ಥಳೈಕ್ಯಗಳು ಅನಿವಾರ್ಯವಾದವು. (ಇವನ್ನು ಕೆಲವು ನಾಟಕಗಳು ಮುರಿಯುತ್ತವೆ.) ನಾಟಕ ಕಿರಿದಾದದ್ದರಿಂದ ಒಂದಕ್ಕಿಂತ ಹೆಚ್ಚು ಕಥಾವಸ್ತುವನ್ನು ಅಳವಡಿಸುವುದು ಸಾಧ್ಯವಾಗುತ್ತಿರಲಿಲ್ಲ. ಇವುಗಳಲ್ಲಿ ಹಾಸ್ಯಕ್ಕೆ ಅವಕಾಶವಿಲ್ಲ. ಸಾವನ್ನೂ ರಕ್ತಪಾತವನ್ನೂ ರಂಗಮಂಚದ ಮೇಲೆ ತೋರಿಸುತ್ತಿರಲಿಲ್ಲ. ಅಗತ್ಯವಾದರೆ ಸಾವು ಸಂಭವಿಸಿದಮೇಲೆ ಶವವನ್ನು

ತೋರಿಸಬಹುದಾಗಿತ್ತು. ಸಾವು ಮತ್ತು ರಕ್ತಪಾತಗಳನ್ನು ದೂತನೊಬ್ಬ ವರ್ಣಿಸು ವುದು ರೂಢಿ. ಮುಖ್ಯವಾಗಿ, ಗ್ರೀಕ್ ಗಂಭೀರನಾಟಕದಲ್ಲಿ ಎದ್ದುಕಾಣುವುದು ಕೇಂದ್ರೀಕರಣ. ಯಾವುದೋ ಒಂದು ಘಟನೆಯನ್ನು ಮುಖ್ಯವಾಗಿ ಆಯ್ದು ಕೊಂಡು ಅದರ ಮೂಲಕ ಬಾಳಿನ ಅರ್ಥದ ವಿಶ್ಲೇಷಣೆ ಮಾಡುವುದು ಇದರ ಮುಖ್ಯ ಲಕ್ಷಣ. ಪ್ರದರ್ಶನದುದ್ದಕ್ಕೂ ಮೇಳದವರು ಇರುತ್ತಿದ್ದುದರಿಂದ 'ಸ್ವಗತ'ಕ್ಕೆ ಸಾಮಾನ್ಯವಾಗಿ ಅವಕಾಶವಿರಲಿಲ್ಲ; ಎಂದರೆ ಪಾತ್ರದ ಮನಸ್ಸಿನ ವ್ಯಾಪಾರಗಳು ಮತ್ತು ತುಯ್ತಗಳು, ಹೊಯ್ದಾಟಗಳನ್ನು ತೋರಿಸಲು ಹೆಚ್ಚು ಅವಕಾಶವಿಲ್ಲ. (ಆದರೆ 'ಏಜಾಕ್ಸ್'ನಲ್ಲಿ ಸಫೋಕ್ಲೀಸ್ ಸ್ವಗತವನ್ನು ಬಳಸಿದ.)

'ಶ್ರೀ'ಯವರ ಮುಂದಿದ್ದದ್ದು ಎರಡು ಮಾದರಿಗಳು–ಗ್ರೀಕ್ ಮಾದರಿ, ಷೇಕ್ಸ್ ಪಿಯರನ ನಾಟಕದ ಮಾದರಿ. ಷೇಕ್ಸ್‌ಪಿಯರನ ನಾಟಕದ ದರ್ಶನ ಹೆಚ್ಚು ವ್ಯಾಪಕ, ಇದರಿಂದ ಕಥಾವಸ್ತು ಹೆಚ್ಚು ಜಟಿಲ. ಅವನಿಗೆ ಮನುಷ್ಯಸ್ವಭಾವದಲ್ಲಿರುವ ವಿಶಿಷ್ಟ ಆಸಕ್ತಿಯ ಕಾರಣದಿಂದ ಅವನ ನಾಟಕದಲ್ಲಿ ಪಾತ್ರವೈವಿಧ್ಯವೂ ಹೆಚ್ಚು. ಇದನ್ನು ಬಿಟ್ಟು 'ಶ್ರೀ'ಯವರು ಕೇಂದ್ರೀಕರಣ ಮುಖ್ಯವಾದ ಗ್ರೀಕ್ ಮಾದರಿ ಯನ್ನು ಆರಿಸಿದರು. ಪ್ರಾಚೀನ ಗ್ರೀಕ್ ನಾಟಕಕಾರರು ಮೂವರು ಸುಪ್ರಸಿದ್ಧರು– ಈಸ್ಕಿಲಸ್ (ಕ್ರಿ. ಪೂ. 525–456), ಸಫೋಕ್ಲೀಸ್ (ಕ್ರಿ. ಪೂ. 495–406), ಯೂರಿಪಿಡೀಸ್ (ಕ್ರಿ. ಪೂ. 480–406). ಇವರಲ್ಲಿ ಈಸ್ಕಿಲಸ್ ದೇವತೆಗಳ ನ್ಯಾಯಪಕ್ಷಪಾತದ ನಿಷ್ಠ ಪ್ರತಿಪಾದಕ. ಸಫೋಕ್ಲೀಸ್ ದೇವತೆಗಳು ನ್ಯಾಯವಾಗಿಯೇ ನಡೆದುಕೊಳ್ಳುತ್ತಾರೆ, ಆದರೆ ಅವರ ರೀತಿ ನಮಗೆ ಸಂಪೂರ್ಣವಾಗಿ ಅರ್ಥವಾಗು ವುದಿಲ್ಲ ಎಂಬ ನಿಲುವಿನವನು. ಅವನ ಆಸಕ್ತಿ ಅಸಾಧಾರಣ ವ್ಯಕ್ತಿಯೊಬ್ಬ ಅಸಾಧಾರಣ ಸವಾಲನ್ನು ಸ್ವೀಕರಿಸುವ ರೀತಿಯಲ್ಲಿ ಯೂರಿಪಿಡೀಸ್ ದೇವತೆಗಳು ನ್ಯಾಯವಾಗಿ ನಡೆದುಕೊಳ್ಳುತ್ತಾರೆಯೇ ಎಂದು ಪ್ರಶ್ನಿಸುವವನು.

'ಶ್ರೀ'ಯವರ ಮನೋಧರ್ಮಕ್ಕೆ ಸಫೋಕ್ಲೀಸನ ನಿಲುವು ಹೊಂದಿತೆಂದು ಕಾಣುತ್ತದೆ. ಆದ್ದರಿಂದ ಅವರು ಅವನ ನಾಟಕವನ್ನೆ ಮಾದರಿಯಾಗಿಟ್ಟುಕೊಂಡರು.

'ಏಜಾಕ್ಸ್' ನಾಟಕದ ಕಥಾವಸ್ತು ಸಂಗ್ರಹವಾಗಿ ಇದು: ಅಕಿಲೀಸನ ಗುರಾಣಿ ತನಗೆ ನ್ಯಾಯವಾಗಿ ಬರಬೇಕಾಗಿದ್ದುದು ಯೂಲಿಸಿಸನ (ಒಡಿಸ್ಯೂಸ್) ತಂತ್ರದಿಂದ, ಸೈನ್ಯದ ನಾಯಕರು ಅಗಮೆಮ್ನನ್ ಮತ್ತು ಅವನ ಸೋದರ ಮೆನೆಲಾಸನಿಂದ ತನಗೆ ಬಾರದೆಹೋಯಿತೆಂದು ಕ್ರುದ್ಧನಾದ ಗ್ರೀಕ್ ವೀರ ಅಜಾಕ್ಸ್ ಅವರನ್ನು ಕೊಲ್ಲಲು ಹವಣಿಸುತ್ತಾನೆ. ಅಥೀನ ದೇವತೆಯ ಹಂಚಿಕೆಯಿಂದ ಅವನು ಮತಿಗೆಟ್ಟು ಕುರಿಗಳನ್ನು ತನ್ನ ಶತ್ರುಗಳೆಂದು ಭಾವಿಸಿ ಅವನ್ನು ಕೊಲ್ಲುತ್ತಾನೆ. ಬುದ್ಧಿ ತಿಳಿ ಯಾದಾಗ ನಾಚಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಮಹಾಭಾರತದ ಸೌಪ್ತಿಕ ಪರ್ವ ದಲ್ಲಿ ಬರುವ ಅಶ್ವತ್ಥಾಮನ ಕಥೆಯಲ್ಲಿ 'ಶ್ರೀ'ಯವರು ಇದಕ್ಕೊಂದು ಸಾದೃಶ್ಯ ವನ್ನು ಕಂಡರು, ಆ ಕಥೆಯನ್ನು ಸಫೋಕ್ಲೀಸನ ಕಥೆಯ ಚೌಕಟ್ಟಿಗೆ ಹೊಂದಿಸಿದರು.

ಸಹಜವಾಗಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡರು. ಅಲ್ಲಿನ ಏಜಾಕ್ಸ್ ಇಲ್ಲಿ ಅಶ್ವತ್ಥಾಮ: (ಅಶ್ವತ್ಥಾಮ ಬನವಾಸಿಯವನು ಎಂದು 'ಶ್ರೀ' ಕಲ್ಪಿಸಿಕೊಳ್ಳುತ್ತಾರೆ.) ಏಜಾಕ್ಸ್‌ನ ತಮ್ಮ, ದಾಸೀಪುತ್ರನ ಬದಲು ಇಲ್ಲಿ ಏಕಲವ್ಯ. ಏಜಾಕ್ಸ್ ಯುದ್ಧದಲ್ಲಿ ವಶಮಾಡಿಕೊಂಡ ಟೆಕಮೆಸ ಅವನ ಪತ್ನಿ. ಆದರೆ ಇಂತಹ ಸಂಬಂಧ ತಮ್ಮ ಕಥೆಗೆ ಹೊಂದುವುದಿಲ್ಲವಾದ್ದರಿಂದ 'ಶ್ರೀ'ಯವರು ಅಶ್ವತ್ಥಾಮನ ಅಜ್ಜಿ ಎಂದು ಭಾರ್ಗವಿಯನ್ನು ತರುತ್ತಾರೆ. ಏಜಾಕ್ಸನ ಮಗ ಯೂರಿಸಾಕಿಸನ ಬದಲು ಇಲ್ಲಿ ಅಶ್ವತ್ಥಾಮನ ಮಗ ರುದ್ರಶಕ್ತಿ. (ಮಹಾಭಾರತದಲ್ಲಿ ಅಶ್ವತ್ಥಾಮ ಬ್ರಹ್ಮಚಾರಿ.) ಮೂಲನಾಟಕದಲ್ಲಿ ಮೆನಲಾಸ್, ಅಗಮೆಮ್‌ನನ್ ಇಬ್ಬರೂ ಏಜಾಕ್ಸನ ಶವದ ಸಂಸ್ಕಾರಕ್ಕೆ ಅಡ್ಡಿಪಡಿಸುತ್ತಾರೆ; ಇಲ್ಲಿ ಅಶ್ವತ್ಥಾಮನ ಹೆಣಕ್ಕೆ ಗೌರವದ ಸಂಸ್ಕಾರ ಸಲ್ಲದು ಎಂದು ಅಡ್ಡಿ ಮಾಡುವವನು ಭೀಮ. ಸಫೋಕ್ಲೀಸನ ನಾಟಕದ ಮೇಳದವರು ಸಾಲಾಮಿಸ್ ನಾವಿಕರು; 'ಶ್ರೀ' ಅವರ ನಾಟಕದ ಮೇಳದವರು ಬನವಾಸಿಯ ಬೇಡರು. ಮೂಲದ ಅಥಿನೆಯ ಬದಲು ಇಲ್ಲಿ ರುದ್ರ, ಒಡಿಸ್ಸ್ಯೂಸನ ಬದಲು ಕೃಷ್ಣ. ಈ ನಾಟಕದಲ್ಲಿ ಕೃಷ್ಣ ಪರಮಾತ್ಮನಲ್ಲ. ಅಶ್ವತ್ಥಾಮನ ಶವದ ಮುಂದೆ ನಿಂತು 'ನಾನುಂ ಇತಾಂಗೆನೆ ಒಂದು ದಿನ?' ಎನ್ನುವ ಮನುಷ್ಯ, ಆದರೆ ವಿವೇಕಿಯಾದ ಶ್ರೇಷ್ಠನಾದ ಮನುಷ್ಯ. (ಮಹಾಭಾರತದ ಅಶ್ವತ್ಥಾಮ ಚಿರಂಜೀವಿ: ಅವನು ಆತ್ಮಹತ್ಯ ಮಾಡಿಕೊಳ್ಳುವಂತೆ ನಿರೂಪಿಸಿದುದಕ್ಕಾಗಿ ಕಟುವಾದ ಬಿರುಸಾದ ಚರ್ಚೆ ನಡೆದದ್ದು ಈಗ ಚರಿತ್ರೆಯ ಭಾಗ.)

'ಶ್ರೀ'ಯವರ ನಾಟಕ ರುದ್ರ–ಕೃಷ್ಣರ ಸಂಭಾಷಣೆಯಿಂದ ಪ್ರಾರಂಭವಾಗುತ್ತದೆ. ರಾತ್ರಿ ಪಾಂಡವರ ಶಿಬಿರದಲ್ಲಿ ದನಕರುಗಳ ಘೋರಹತ್ಯೆಯಾಗಿದೆ. ಅದು ಅಶ್ವತ್ಥಾಮನ ಕೆಲಸ ಎಂದು ಊಹಿಸಿದ ಕೃಷ್ಣ ಅವನನ್ನು ಹುಡುಕಿಕೊಂಡು ಬರುತ್ತಾನೆ. ರುದ್ರನಿಂದ ಅವನಿಗೆ ನಡೆದ ಸಂಗತಿ ತಿಳಿಯುತ್ತದೆ. ಹಿಂದಿನ ರಾತ್ರಿ ಪಾಂಡವರನ್ನು ಕೊಲ್ಲಲು ಹೊರಟ ಅಶ್ವತ್ಥಾಮ ರುದ್ರನನ್ನು ಕಂಡಾಗ ಉದ್ಧಟನಾಗಿ ನಡೆಯುತ್ತಾನೆ. ರುದ್ರ ಮಾಯೆಯನ್ನು ಬೀಸುತ್ತಾನೆ. ಇದರ ಫಲವಾಗಿ ಅಶ್ವತ್ಥಾಮ ದನಕರುಗಳನ್ನು ಪಾಂಡವರು ಮತ್ತು ಅವರ ಸೈನಿಕರೆಂದು ಭ್ರಮಿಸಿ ಕೊಂದು, ಒಂದು ಕುರಿಯನ್ನು ಕೃಷ್ಣನೆಂದು ಭಾವಿಸಿ ತನ್ನ ಶಿಬಿರಕ್ಕೆ ತಂದು ಕಂಬಕ್ಕೆ ಕಟ್ಟಿ ಹಿಂಸಿಸುತ್ತಿದ್ದಾನೆ. ರುದ್ರ ಅಶ್ವತ್ಥಾಮನನ್ನು ಹೊರಕ್ಕೆ ಕರೆಯುತ್ತಾನೆ. ಆಗಲೂ ಅವನು ಭ್ರಮೆಯಲ್ಲಿ ಇದ್ದಾನೆ. ತನಗೆ ಗೆಲುವಾಯಿತೆಂದು ವಿಜೃಂಭಿಸುತ್ತಾನೆ. ಅವರು ಮೂವರೂ ಹೋದಮೇಲೆ ಮೇಳದವರು ಬರುತ್ತಾರೆ. ಅವರಿಗೆ ಅಶ್ವತ್ಥಾಮನಿಗೆ ಕೆಡುಕಾಗಿದೆ ಎಂಬ ಆತಂಕ. ಭಾರ್ಗವಿ ಅವರಿಗೆ ರಾತ್ರಿ ನಡೆದ ಭಯಂಕರ ಘಟನೆಯನ್ನು ವರ್ಣಿಸುತ್ತಾಳೆ. ಅವಳೂ ಮೇಳದವರೂ ಇದನ್ನು ನೆನೆದು ನಡುಗುತ್ತಿರುವಂತೆಯೇ ಅಶ್ವತ್ಥಾಮನಿಗೆ ಪ್ರಜ್ಞೆ ಮರಳುತ್ತದೆ. 'ಎಂತಹ ಹೀನ, ಅಪಮಾನಕರ ಕೃತ್ಯ ಮಾಡಿದೆ. ನನ್ನನ್ನು ಕೊಲ್ಲಿ' ಎಂದು ಬೇಡಿಕೊಳ್ಳುತ್ತಾನೆ.

ಮೇಳದವರು ಅವನನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಾರೆ. ಅವನ ಗೋಳಿಗೆ ಮಿತಿ ಇಲ್ಲ. ಅಂತಹ ತಂದೆಯ ಮಗ ಹೀಗಾದೆನೇ ಎಂದು ದುಃಖಿಸುತ್ತಾನೆ. ಸಾವಿಗಾಗಿ ಹಂಬಲಿಸುತ್ತಾನೆ. ಕಡೆಗೆ, ತಾನು ಬುದ್ಧಿ ಕಲಿತೆ, ಬದಲಾದ ಕಾಲಕ್ಕೆ ಹೊಂದಿಕೊಂಡು ನಡೆಯುತ್ತೇನೆ ಎಂದು ಮೇಳದವರನ್ನು ನಂಬಿಸಿ ಬೇರೆಡೆಗೆ ಹೋಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಈ ಹೊತ್ತಿಗೆ ಏಕಲವ್ಯ ಕಳಿಸಿದ ದೂತನು ಬಂದು ಮೇಳದವರಿಗೆ ತಾನು ಬರುವವರೆಗೆ ಅಶ್ವತ್ಥಾಮನನ್ನು ನಿಲ್ಲಿಸಿಕೊಳ್ಳಿ ಎಂದು ಹೇಳಿದನೆಂದು, ಕೃಷ್ಣನು ಏಕಲವ್ಯನಿಗೆ 'ಅಶ್ವತ್ಥಾಮನು ಈ ಒಂದು ಹಗಲು ಶಿಬಿರದಲ್ಲೇ ಇರಲಿ' ಎಂದು ಎಚ್ಚರಿಕೆ ಹೇಳಿದನೆಂದು ತಿಳಿಸುತ್ತಾನೆ. ಎಲ್ಲರೂ ಆತಂಕದಿಂದ ಅಶ್ವತ್ಥಾಮನನ್ನು ಹುಡುಕಿಕೊಂಡು ಹೊರಡುತ್ತಾರೆ. ಅವನ ಶವವನ್ನು ಕಂಡು ದುಃಖಿಸುತ್ತಾರೆ. ಆಹೊತ್ತಿಗೆ ಏಕಲವ್ಯ ಬರುತ್ತಾನೆ. ಅವನೂ ಗೆಳೆಯನ ಶವದ ಬಳಿ ದುಃಖಿಸುತ್ತಿರುವಾಗ ಭೀಮ ಬರುತ್ತಾನೆ. ಅಶ್ವತ್ಥಾಮನಿಗೆ ಅಂತ್ಯಸಂಸ್ಕಾರ ಮಾಡಲಾಗದೆಂದು ಅಡ್ಡಿಪಡಿಸುತ್ತಾನೆ. ಅವನಿಗೂ ಏಕಲವ್ಯನಿಗೂ ಘರ್ಷಣೆಯಾಗುತ್ತದೆ. ಅಲ್ಲಿಗೆ ಬಂದ ಕೃಷ್ಣ ಭೀಮನಿಗೆ ಬುದ್ಧಿವಾದ ಹೇಳುತ್ತಾನೆ. ತನ್ನ ಕೋಪವು ಆರದಿದ್ದರೂ ಕೃಷ್ಣನ ಮಾತಿಗೆ ಗೌರವ ಕೊಟ್ಟು ಭೀಮ ಹೋಗುತ್ತಾನೆ. ತಾನೂ ಅಂತ್ಯಸಂಸ್ಕಾರದಲ್ಲಿ ಭಾಗಿಯಾಗುವೆನೆಂದ ಕೃಷ್ಣನಿಗೆ ಏಕಲವ್ಯ, ಅದು ಅಶ್ವತ್ಥಾಮನ ಆತ್ಮಕ್ಕೆ ಅಸಮಾಧಾನ ತಂದೀತೆಂದು ನಯವಾಗಿ ಸೂಚಿಸುತ್ತಾನೆ. ಮೇಳದವರು,

ಇಂದೇನೊ, ಮುಂದೇನೊ, ಮುನ್ನೆ ಆಳ್ ಕಾಣನ್.
ಬಂದುದನೆ ಕೊಂಡುಂಡು ತಾಳ್ದವನೆ ಜಾಣನ್.
ರುದ್ರನ್ ಒಲ್ದೊಡೆ ಉಳಿವು,
ಒಲ್ಲದೊಡೆ ಒಡನಳಿವು ;
ತಳ್ಗಿ ನಡೆದೊಡೆ ರುದ್ರನ್ ಒಲ್ಲದೆಯೆ ಮಾಣನ್,
ಅಳವರಿತು ನಡೆಯೆ ಶಿವನ್ ಒಲ್ಲದೆಯೆ ಮಾಣನ್

ಎಂದು ಹಾಡುತ್ತಿರುವಂತೆ ನಾಟಕ ಮುಗಿಯುತ್ತದೆ.

ಸಫೋಕ್ಲೀಸನ ಮೂಲ ನಾಟಕವನ್ನೂ (ನಮ್ಮ ಮಟ್ಟಿಗೆ ಇಂಗ್ಲಿಷ್ ಅನುವಾದ) 'ಶ್ರೀ'ಯವರ ನಾಟಕವನ್ನೂ ಪಕ್ಕಪಕ್ಕದಲ್ಲಿಟ್ಟು ನೋಡಿದಾಗ 'ಶ್ರೀ'ಯವರು ಗ್ರೀಕ್ ನಾಟಕವನ್ನು ಎಷ್ಟು ನಿಷ್ಠೆಯಿಂದ ಅನುಸರಿಸಿದ್ದಾರೆ ಎಂದು ಬೆರಗಾಗುತ್ತೇವೆ. ಪಂಕ್ತಿ ಪಂಕ್ತಿ ಇಲ್ಲಿ ಅನುವಾದವಾಗಿದೆ. ಕೃಷ್ಣ–ರುದ್ರ–ಅಶ್ವತ್ಥಾಮರ ಸಂಭಾಷಣೆ (ಪಂಕ್ತಿಗಳು 60–110), ಮೇಳದವರ ಹಾಡುಗಳು ಎಲ್ಲ ಕಡೆಯೂ ಕನ್ನಡ ನಾಟಕ ಸೊಗಸಾದ, ಸೂಕ್ಷ್ಮ ಸಂವೇದನೆ ತೋರುವ ಅನುವಾದ ಎನ್ನಿಸುವಂತೆಯೇ ಇದೆ.

ನಿದರ್ಶನವಾಗಿ ಇಲ್ಲಿ ದೀರ್ಘವಾದ ಭಾಗಗಳನ್ನು ಉದ್ಧರಿಸುವುದು ಸಾಧ್ಯವಿಲ್ಲ. ಒಂದೆರಡು ಪಂಕ್ತಿಗಳನ್ನು ಅಲ್ಲಿ, ಇಲ್ಲಿ ಮಾದರಿಗಾಗಿ ಉದಹರಿಸಬಹುದು :

O darkness, now my light,
O gloom, to me most bright.

ಓ ಮರ್ಬ್, ಎನಗೆ ಬೆಳಕೇ,
ಕಳ್ತಲೆಯೆ, ಬಿಸಿಲ ಪೊಳಪೇ.

I flutter in transport, I thrill with delight,
  Pan, what ho! Pan, what ho!

ಹೋ ಆನಂದಂ! ಪೇರಾನಂದಂ!
ನೆಗೆವಾ ಕುಣಿವಾ ಮಿಗುವಾನಂದಂ!

Do you bid me let them bury the dead?
Yes, for I too must lie on that same bed.

ಸತ್ತನೊಳ್ ಇದೇನ್ ಭಕ್ತಿ ?
ನಿನ್ನ ಬಗೆಯುನೆ ಅರಿಯನ್ ಇನ್ನುಂ, ಕೃಷ್ಣ !

ಓ ಮಿತ್ರ, ನಾನುಮ್ ಇಂತಾಗೆನೆ ಒಂದು ದಿನ ?

ತಾವು ಮಾದರಿಯನ್ನಾಗಿ ಆರಿಸಿದ ನಾಟಕವನ್ನು ಇಷ್ಟುಮಟ್ಟಿಗೆ ಅನುಸರಿಸಿಯೂ 'ಶ್ರೀ'ಯವರು ಕನ್ನಡದ ಒಂದು ಸ್ವತಂತ್ರ ಕೃತಿ ಎಂದೇ ಭಾಸವಾಗುವ ನಾಟಕವನ್ನು ಕೊಟ್ಟರೆನ್ನುವುದು ಅಚ್ಚರಿಯನ್ನುಂಟುಮಾಡುವ ಸಂಗತಿ.

'ಶ್ರೀ'ಯವರು ಮಾಡಿಕೊಂಡ ಕೆಲವು ಬದಲಾವಣೆಗಳನ್ನು ಸೂಚಿಸಿದೆ. ಅವನ್ನಲ್ಲದೆ ಅರ್ಥವತ್ತಾದ ಇನ್ನೂ ಕೆಲವು ಮಾರ್ಪಾಡುಗಳನ್ನೂ ಮಾಡಿದ್ದಾರೆ. ಇವುಗಳಲ್ಲಿ ಕೆಲವು ಅಶ್ವತ್ಥಾಮನ ವ್ಯಕ್ತಿತ್ವವನ್ನು ಇನ್ನೂ ಸ್ಫುಟಗೊಳಿಸುವ ಮಾರ್ಪಾಡುಗಳು. ಅಶ್ವತ್ಥಾಮನ್ ತನ್ನ ವಿಷಯವಾಗಿ ಹೇಳಿಕೊಳ್ಳುವ

ಬರ್ದುಕಿನೊಳಮ್ ಆವ ಸುಖಮನ್ ಕಂಡೆನ್ ! ಅರ್ಗಿ ನಾನ್ ಪ್ರಾಣಮನ್ ತೆರುವೆನ್
ಆತ್ಮಕಲ್ಯಾಣಮುಮನ್ ಬಿತ್ತರಿಸಿ, ನಾನ್ ಆರ ಕುರಿತುಮನೆ ಕುರಿತೆನ್
ಆ ಸ್ವಾಮಿಗಾನಲ್ತು ಮೊದಲೊಲ್ಮೆ, ಕರ್ಣನ್. ಸೇನಾಧಿಪತ್ಯಮೋ ಕರ್ಣನ್,
ಶೃಂಗಾರಮೋ ಕರ್ಣನ್ ; ಎಂಜಲ್, ಎಂಜಲ್ ನನಗೆ ಸಿಡುಕಂಗೆ

ಎಂಬ ಮಾತುಗಳಿಗೆ, ಏಕಲವ್ಯನು ಸತ್ತ ಗೆಳೆಯನನ್ನು ಸ್ಮರಿಸಿ ಆಡುವ

ಕಟ್ಟೊಲ್ಮೆ. ಕಲಿತನಂ.
ಅಡಿದೆಗೆಯದಾಳ್ತನಂ. ಸ್ವಾಮಿಯೊಳ್ ನೆರೆಭಕ್ತಿ,
................ನಿನ್ನ ಸಿಡುಕುಮದುವುಮ್ ಚೆಲ್ವೆನಗೆ

ಎಂಬ ಮಾತುಗಳಿಗೆ ಸಮವಾದ ಮಾತುಗಳು 'ಏಜಾಕ್ಸ್'ನಲ್ಲಿಲ್ಲ. ಮೂಲನಾಟಕದಲ್ಲಿ ಏಜಾಕ್ಸನಿಗಿರುವ ಅಪಾಯವನ್ನೂ ಅವನ ಸ್ವಭಾವವನ್ನೂ ಕುರಿತು ಮಾತನಾಡಿ ಎಚ್ಚರಿಕೆಯ ಸಂದೇಶವನ್ನು ಕಳಿಸುವವನು ಕಾಲಜ್ಞಾನಿ ಕಾಲ್ಕಾಸ್. ಸತ್ತವನ ಕಡೆಯ ಸಂಸ್ಕಾರಕ್ಕೆ ಅಡ್ಡಿ ನಿವಾರಿಸುವವನು ಯೂಲಿಸಿಸ್. 'ಶ್ರೀ'ಯವರ ನಾಟಕದಲ್ಲಿ ಎರಡು ಕೆಲಸಗಳನ್ನು ಮಾಡುವವನು ಕೃಷ್ಣ. ಇದರಿಂದ ಅವನ ಘನತೆ ಹೆಚ್ಚುತ್ತದೆ.

ಇಡೀ ನಾಟಕದ ಪರಿಣಾಮವೇನು ? ಮನುಷ್ಯ ಮತ್ತು ದೈವದ ಬಾಂಧವ್ಯವನ್ನು ಕುರಿತು ಯಾವ ಚಿತ್ರ ಮೂಡುತ್ತದೆ ? ಸಾಮಾನ್ಯವಾಗಿ ವಿಮರ್ಶಕರು ಇವರ ವಿನ್ಯಾಸವನ್ನು ಸರಳಗೊಳಿಸಿದ್ದಾರೆ. (ಸಫೋಕ್ಲೀಸನ ನಾಟಕದ ಅರ್ಥವಿನ್ಯಾಸವಾದರೂ ಸರಳವಲ್ಲ.) ಭಾರ್ಗವಿ ಇಲ್ಲಿ ಅಶ್ವತ್ಥಾಮನನ್ನು 'ದೈವಹತ ಅಶ್ವತ್ಥಾಮ' ಎನ್ನುತ್ತಾಳೆ. ಬಹುಮಂದಿ ವಿಮರ್ಶಕರು ಇದನ್ನೆ ವಿಸ್ತಾರಗೊಳಿಸಿದ್ದಾರೆ. ಮೂಲದಲ್ಲಿ ಟೆಕ್‌ಮೆಸ 'unhappy Ajax' ಎನ್ನುವ ಮಾತನಾಡುತ್ತಾಳೆ, ದೇವತೆಗಳ ಕೈ ಅವನನ್ನು ಉರುಳಿಸಿತು ಎನ್ನುತ್ತಾಳೆ. ಇಲ್ಲಿಗೆ ನಾಟಕದೊಳಗಿನ ವ್ಯಾಖ್ಯಾನ ಮುಗಿಯುವುದಿಲ್ಲ. ಏಜಾಕ್ಸನು ಅಗಮೆಮ್ನನ್, ಮೆನಲಾಸ್, ಯೂಲಿಸಿಸ್, ಅಥೀನ ಎಲ್ಲರೂ ತನ್ನನ್ನು ನಾಶಮಾಡಿದರು ಎನ್ನುತ್ತಾನೆ. ಅಥೀನ, ಏಜಾಕ್ಸನ ಗರ್ವವನ್ನು ಒತ್ತಿಹೇಳುತ್ತಾನೆ. ಟ್ಯೂಸರ್, ಏಜಾಕ್ಸನಿಗೆ ಶತ್ರು ಕೊಟ್ಟ ಕತ್ತಿ ಮಾರಕವಾಯಿತು. ಈ ಕತ್ತಿಯನ್ನು ಉಗ್ರಕನ್ಯೆಯರೆ ಮಾಡಿದ್ದರು ಎನ್ನುತ್ತಾನೆ. ಹೀಗೆ ಏಜಾಕ್ಸನ ಪತನಕ್ಕೆ ಹಲವು ಕಾರಣಗಳನ್ನು ಸೂಚಿಸಿದೆ. ಮತ್ತೊಂದು ವಿವರಣೆ ನಮಗೆ ಮಾತುಗಳಲ್ಲಿ ಬರುವುದಿಲ್ಲ, ಕಣ್ಣಿನ ಮೂಲಕ ಮನಸ್ಸಿಗೆ ಬರುತ್ತದೆ. ನಾಟಕದ ಪೂರ್ವಾರ್ಧದಲ್ಲಿ ಯೂಲಿಸಿಸನ ಪಾತ್ರ ಗೌಣ. ಉತ್ತರಾರ್ಧದಲ್ಲಿ ಅವನು ಸ್ಪಷ್ಟವಾಗಿ ಬೆಳೆಯುತ್ತಾನೆ, ಮುಖ್ಯ ಪಾತ್ರನಾಗುತ್ತಾನೆ. ಏಜಾಕ್ಸ್ ಏನಾಗಲಿಲ್ಲ, ಮನುಷ್ಯ ಏನಾಗಬೇಕು—ಹೇಗೆ ನಡೆದುಕೊಳ್ಳಬೇಕು ಎಂಬ ಪ್ರಶ್ನೆಗಳಿಗೆ ಉತ್ತರವಾಗಿ ನಿಲ್ಲುತ್ತಾನೆ.

ಗ್ರೀಕ್ ನಾಟಕವನ್ನೆ ಅನುಸರಿಸಿರುವ 'ಅಶ್ವತ್ಥಾಮನ್' ನಾಟಕದಲ್ಲೂ ಈ ಬಗೆಯ ಸಂಕೀರ್ಣತೆ ಇದೆ. ದೈವ ಅವನಿಗೆ ವಿರೋಧಿಯಾಯಿತು ಎನ್ನುವ ಮಾತೇನೊ ಮತ್ತೆಮತ್ತೆ ಬರುತ್ತದೆ. ಭಾರ್ಗವಿಯಲ್ಲದೆ ಅಶ್ವತ್ಥಾಮನೂ ಈ ಅಭಿಪ್ರಾಯವನ್ನು ವ್ಯಕ್ತಮಾಡುತ್ತಾನೆ :

ದೈವಂ ತಪ್ಪಾಗಿ ನಡೆಸುವೊಡೆ
ಕಲಿ ಏಡಪ್ಪವನ್, ಪೇಡಿ ಬರ್ದುಕುವನ್, ನಗುವನ್.

ಆದರೆ ಇವನ್ನೇ ಒತ್ತಿ ಹೇಳುವುದು ಮನುಷ್ಯನ ನೈತಿಕ ಹೊಣೆಯನ್ನ ಕಡೆಗಣಿಸಿದಂತೆ. ಮನುಷ್ಯನಲ್ಲಿ ದೈವದ ಮುಂದೆ ವಿನಯದ ಅಗತ್ಯವನ್ನು ನಾಟಕದಲ್ಲಿ ಮತ್ತೆಮತ್ತೆ ಹೇಳಲಾಗಿದೆ. ಅವನನ್ನು ನಾವು ಕಾಣುವ ಮೊದಲೇ ಅವನ ಬಗೆಗೆ ಕೇಳುವ ಮಾತು : 'ಕ್ರೋಧಾತ್ಮ ಪರವಶನ್'. (ಇದರೊಂದಿಗೇ ಅವನಲ್ಲಿ ಸಹಾನುಭೂತಿಯನ್ನುಂಟುಮಾಡುವ ಮಾತೂ ಬರುತ್ತದೆ ಎನ್ನುವುದನ್ನು ಗಮನಿಸಬೇಕು : "ತನ್ನ-ನಾಳ್ದನ ಕೊಲೆಯ ಮಾನಭಂಗಕೆ ಮುಳಿದು।ಪಾಂಡವಧ್ವಂಸಮನ್ ಮಾಡಿ ಮೆಚ್ಚಿಪೆನೆಂದು।ಸಾರಿದನ್, ಕೈಮುಟ್ಟಿ. ಪ್ರಿಯತಮ ಸ್ವಾಮಿಯೊಳ್." ವಿಜಾಕ್ಷನ ಉದ್ದೇಶ ಇಷ್ಟೊ ಘನವಾದುದಲ್ಲ.) ಹಿಂದಿನ ರಾತ್ರಿ ಅವನು ರುದ್ರನ ಮಾತನ್ನೂ ಕಡೆಗಣಿಸಿ, "ಎಲೆ ರುದ್ರ, ದೂರದೊಳ್ ನೋಡುತಿರು. ವೀರ್ಯಂ।ಮಾನುಷಮ್ ಅದೆಂತಿರ್ಕುಮೆಂಬುದನ್" ಎಂಬುದನ್ನು ಕೇಳುತ್ತೇವೆ. ರುದ್ರನು ಅಶ್ವತ್ಥಾಮನಿಗೆ, ಕೃಷ್ಣನನ್ನು ಹಿಂಸಿಸಬೇಡ ಎಂದಾಗ 'ಮತ್ತೇನ ಕೇಳ್, ರುದ್ರ, ಕೊಟ್ಟಪೆನ್. ಇದೊಂದಿಲ್ಲಂ' ಎಂದುದನ್ನು ಕೇಳುತ್ತೇವೆ. "ಅರಿರ್ದರ್ ಈತನಿನ್ ಜ್ಞಾನಿಯುಂ ಶೂರನುಂ" ಎಂದು ಹೊಗಳುವ ರುದ್ರನೇ, "ಇಂತಪ್ಪ ನೋಟಂಗಳನ್ ನೋಡಿ, ದೈವದೊಳ್ ಸೊರ್ಕುನುಡಿ ನುಡಿಯದಿರ್" ಎನ್ನುತ್ತಾನೆ. ಅಶ್ವತ್ಥಾಮ ಆತ್ಮಹತ್ಯ ಮಾಡಿಕೊಂಡು ನಮ್ಮ ಅನುಕಂಪ ಅವನತ್ತ ಹರಿಯುವ ಹಿಂದಿನ ನಿಮಿಷದಲ್ಲಿ, ದೂತನ ಬಾಯಿಯಿಂದ ಅವನು ತನ್ನ ಬಿಲ್ಲಿನ ವಿದ್ಯಾಭ್ಯಾಸ ಮುಗಿದಾಗ ತಂದೆಗೆ ಹೇಳಿದ ಅಹಂಕಾರದ ಮಾತು ("ದೇವತೆಯ ಬಲಮ್ ಇರ್ದೊಡಯ್ಯ।ಪೇಡಿಯುಂ ಗೆಲ್ದಪನ್. ಅವರ್ಗಳ ನೆರಂಬಾರದಾ ಗೆಲ್ಲವೆಣ್ಣ ಮುಂದಲೆಯನ್ ಈಳ್ವೆನ್") ಮತ್ತು, ಎಷ್ಟೋ ವರ್ಷಗಳು ಕಳೆದಮೇಲೆ, ಮಹಾಭಾರತದ ಯುದ್ಧದ ಕಾಲದಲ್ಲಿ ರುದ್ರನು ರುದ್ರಭೂಮಿಯಲ್ಲಿ ಅವನಿಗೆ ಹುರುಪುಗೊಳಿಸುತ್ತ ಬಂದಾಗ, 'ಸಿಡುಕಿನಿಂದ ಅಪಚಾರದುದನಾ ಆಡಿದ ಮಾತು ("ಎಲೆ ರುದ್ರ, ಅದೊ ಅಪರ ಬೆಂಬಲ ಪೋಗು ; ಅಶ್ವತ್ಥಾಮನ್ ಇರ್ದ ಮೊನೆ ಮುರಿಯದು") ಇವನ್ನು ಕೇಳುತ್ತೇವೆ, ಎಂದೂ ಇವನು ದೇವತೆಗಳ ಕೃಪೆಯನ್ನು ಬೇಡದವನು ಎಂಬುದು ಸ್ಪಷ್ಟವಾಗುತ್ತದೆ. (ದೂತನ ಮೂಲಕ ನಾವು ಕೇಳುವ) ಕೃಷ್ಣನ ಮಾತುಗಳು ನಾಟಕದ ಒಂದು ನಿಲುವನ್ನು ಸೂಚಿಸುತ್ತವೆ : ಮನುಷ್ಯನ ಭಾಗ್ಯವನ್ನು ನಿರ್ಧರಿಸುವಲ್ಲಿ ಅವನ ಹೊಣೆಯ ಪ್ರಶ್ನೆಗೆ ಉತ್ತರ ನೀಡುತ್ತವೆ :

ಮಿಗಿಲ್ ಮನುಷ್ಯನ್

ತಾನ್ ಮನುಷ್ಯನೆ ಎಂಬುದನ್ ಮರೆತು, ಕಡುಕೊರ್ಬಿ. ಬಿಕಿತರ್ಕಿಲ್ಲನ್.
ಆಗಳೇ ದೇವತೆಗಳ್ ಅವನ ಬಾಳ್ಗೆ ಪರೊಪ್ಪಿ ಕೆಳಗುರುಳೆ ಪೊಯ್ವರ್.

ಆದರೆ ಇದು ಈ ನಾಟಕದ ಕಾಣ್ಕೆ ಎಂದು ಭಾವಿಸಿದರೆ ಅದನ್ನು ಸರಳಗೊಳಿಸಿದಂತೆಯೇ ಆಗುತ್ತದೆ. ಗ್ರೀಕ್ ಸಾಹಿತ್ಯದಲ್ಲಿ ದೇವತೆಗಳೂ ಮನುಷ್ಯರಂತೆ

ತಮ್ಮತಮ್ಮಲ್ಲಿ ಭಿನ್ನಾಭಿಪ್ರಾಯ ಉಳ್ಳವರು. ತಮ್ಮ ಅಭೀಷ್ಟ-ಫಲಗಳನ್ನು ನಡೆಸಿಕೊಳ್ಳಲು ಮನುಷ್ಯರ ಜೀವನದಲ್ಲಿ ಪ್ರವೇಶಿಸುವವರು. 'ಶ್ರೀ'ಯವರು ಸಫೋಕ್ಲೀಸನ ನಾಟಕವನ್ನು ಆಧಾರವಾಗಿ ಆರಿಸಿಕೊಂಡಾಗಲೇ ಈ ಅಂಶವೂ ಅದರ ಭಾಗವಾಗಿ ಬಂದಿತು. ಸಫೋಕ್ಲೀಸನ ನಾಟಕದಲ್ಲಿ ದೇವತೆಗಳ ರೀತಿ ಮನುಷ್ಯನಿಗೆ ಸಂಪೂರ್ಣವಾಗಿ ತಿಳಿಯಲಾರದು ಎನ್ನುವ ಧ್ವನಿ ಇದೆ. ಈ ನಿಗೂಢತೆಯ ಸೂಚನೆ 'ಅಶ್ವತ್ಥಾಮನ್' ನಾಟಕದಲ್ಲಿ ಇನ್ನೂ ಆಳವಾಗುತ್ತದೆ. ಅಶ್ವತ್ಥಾಮ ಉದ್ದಕ್ಕೂ ರುದ್ರನನ್ನು ತಿರಸ್ಕಾರದಿಂದ ಕಾಣುತ್ತಾನೆಂದೇನೂ ಇಲ್ಲ. ತಾನು ವಿಜಯಿ ಎಂಬ ಮತ್ತಿನಲ್ಲಿದ್ದಾಗಲೂ ಅವನನ್ನು 'ಎನ್ನ ದೇವತೆ', 'ಕೃಪಾಕರಾ!' ಎಂದು ಕರೆಯುತ್ತಾನೆ, "ಒಂದನ್ ಎರೆವೆನ್, ರುದ್ರ, ಇಂದಿನಪೊಲ್ ಪಗಳುಂ ಕಯ್ವಿಡದೆ ಕಾಪಾಡು!" ಎಂದು ಬೇಡುತ್ತಾನೆ. ಅಲ್ಲದೆ, ಅವನು ಘೋರ ಕೃತ್ಯಕ್ಕೆಳಸಿ ಹೊರಟ ಆ ಕ್ರೂರರಾತ್ರಿಯಲ್ಲಿ ರುದ್ರನ ಭೇಟಿಯಾಗುತ್ತದೆ. ಆಗಲೇ ಅಶ್ವತ್ಥಾಮ ರುದ್ರನ ಅಪಕೃಪೆಗೆ ಗುರಿಯಾಗುವುದು. ಇದಕ್ಕೆ ಕಾರಣವೇನು? ರುದ್ರ ಅಶ್ವತ್ಥಾಮನನ್ನು 'ಪ್ರಿಯ ವೀರ, ದಾರಿಯೇನ್? ವರಮಾವುದೀವೆನ್?' ಎಂದು ಕೇಳಿದ. ಅಶ್ವತ್ಥಾಮ, 'ಪಾಂಡವರ ಲೋಕಕೆನ್ನಿಮ್ ಪ್ರಳಯಮ್' ಎಂದ. ರಾತ್ರಿಯಲ್ಲಿ ಪಾಂಡವರ ಪಾಳೆಯಕ್ಕೆ ನುಗ್ಗಿ ಅವರನ್ನು ಕೊಲ್ಲಲು ಹೊರಟವನಿಗೆ ರುದ್ರನು 'ಅದು ತಪ್ಪು, ಪಾಪ' ಎಂದು ಹೇಳುತ್ತಾನೆ. ಆ ಮಾತನ್ನು ಧಿಕ್ಕರಿಸಿದರೆ ಅಸಮಾಧಾನ ತಾಳುತ್ತಾನೆ ಎಂದು ನಾವು ನಿರೀಕ್ಷಿಸಬಹುದು. ಆದರೆ ಇದು ಧರ್ಮವಲ್ಲ, ವೀರೋಚಿತವಲ್ಲ ಎಂಬ ಮಾತೇ ರುದ್ರನಿಂದ ಬರುವುದಿಲ್ಲ. ಅಶ್ವತ್ಥಾಮ ನಿದ್ರಿಸುತ್ತಿರುವ ಪಾಂಡವರನ್ನು ಕೊಲ್ಲಲು ಹೊರಟವನು. 'ಪಾಂಡವರ ಲೋಕಕೆನ್ನಿಮ್ ಪ್ರಳಯ' ಎಂದರೆ. ರುದ್ರ 'ಕಿಲರ್ ಉಳಿದು' ಎಂದ. ರುದ್ರನಿಗೆ ಕೋಪ ಬಂದದ್ದು ಅಶ್ವತ್ಥಾಮ ತನ್ನ ಮಾತನ್ನು ಒಪ್ಪಲಿಲ್ಲ, ವಿನಯದಿಂದ ನಡೆಯಲಿಲ್ಲ ಎಂದು. ಅವನು ಹಾಗೆ ನಡೆದಿದ್ದರೆ. ಅರ್ಧರಾತ್ರಿಯಲ್ಲಿ ಮಲಗಿದ್ದವರನ್ನು ಕೊಂದ ಎಂದೇನೂ ರುದ್ರನಿಗೆ ಕೋಪ ಬರುತ್ತಿರಲಿಲ್ಲ. ಇಂತಹ ದೈವವನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಅಶ್ವತ್ಥಾಮನ ನೈತಿಕ ಹೊಣೆ ಉಂಟು. ಆದರೆ ಅದರೊಂದಿಗೇ ಅವನ ಬೆನ್ನ ಹಿಂದೆ ಇರುವ ಪ್ರಚಂಡ ಶಕ್ತಿಯನ್ನು ಅರ್ಥಮಾಡಿಕೊಳ್ಳುವುದು ಎಷ್ಟು ಕಷ್ಟ ಎಂಬ ಸೂಚನೆಯೂ ಉಂಟು.

ಅಲ್ಲದೆ 'ಶ್ರೀ' ಅವರು ಮೂಲದಲ್ಲಿಲ್ಲದ ಒಂದು ಮಾತನ್ನು ಸೇರಿಸಿ ಈ ವಿಚಾರಧಾರೆಗೇ ಹೊಸ ತಿರುವು ಕೊಡುತ್ತಾರೆ. ನಾಟಕದುದ್ದಕ್ಕೂ ಅಶ್ವತ್ಥಾಮನು ತನ್ನ ಉದ್ಧಟತನದಿಂದ ರುದ್ರನ ಕೋಪವನ್ನೆ ಗಳಿಸಿಕೊಂಡು ಅಪಮೃತ್ಯುವಿ ಈಡಾಗಿ ಕೆಟ್ಟ ಅಂತ್ಯವನ್ನೆ ಕಂಡ ಎಂಬ ಭಾವನೆ ಬೆಳೆಯುತ್ತದೆ. ಕಡೆಯ ಭಾಗದಲ್ಲಿ ಭೀಮ ಕೃಷ್ಣನಿಗೆ ಅಶ್ವತ್ಥಾಮನನ್ನು ಗೌರವಿಸುವುದೇಕೆ ಎನ್ನುತ್ತ ಹೇಳುತ್ತಾನೆ:

ಎಮ್ಮೆಲ್ಲರಾ ದೈವಂ ಆ ರುದ್ರನ್ ಅವನೆ ಕಯ್ಬಿಟ್ಟನ್.

ಕೃಷ್ಣನ ಉತ್ತರ ತೀರ ಅನಿರೀಕ್ಷಿತ. ('ಏಜಾಕ್ಸ್'ನಲ್ಲಿ ಇದಕ್ಕೆ ಸಮನಾದ ಮಾತಿಲ್ಲ.)

ಬಿಟ್ಟನೋ ತೊಟ್ಟನೋ, ನಾಮೆಂತು ಕಂಡಪೆವು
ಆ ರುದ್ರ ಹೃದಯಮನ್ ? ಪರಿಶುದ್ಧನನ್ ಮಾಡಿ
ಆತ್ಮಮನ್ ಸೆಳೆದನೆನ್ಬೆನ್

ಈ ಮಾತು ದೈವದ ನಿಗೂಢತೆಯನ್ನು ಗಾಢಗೊಳಿಸುತ್ತದೆ, ಅಶ್ವತ್ಥಾಮನ ಯಾತನೆಗೆ ಹೊಸದೊಂದು ಅರ್ಥವನ್ನು ಮಿಂಚಿಸುತ್ತದೆ.

ಇದರೊಂದಿಗೆ ಗುರುತಿಸಬೇಕಾದ ಮತ್ತೊಂದು ಅಂಶವಿದೆ. ಈ ನಾಟಕದಲ್ಲಿಯೂ ಸಫೋಕ್ಲೀಸನ ನಾಟಕವಲ್ಲಿರುವಂತೆ ಒಬ್ಬ ಅಸಾಧಾರಣ ಪುರುಷ–ಅವನಿಗೆ ವಿರೋಧವಾದ ಶಕ್ತಿಗಳು ಈ ಘರ್ಷಣೆಯ ರೂಪದಲ್ಲಿ ಕ್ರಿಯೆ ಸಾಗುತ್ತದೆ. ಇವರಲ್ಲಿ ಅಂತರ್ಗತವಾಗಿ ಒಂದು ವಿನ್ಯಾಸ ಬಿಚ್ಚಿಕೊಳ್ಳುತ್ತದೆ. ಇದು ಸಫೋಕ್ಲೀಸನ ನಾಟಕದಲ್ಲಿ ಸ್ವಲ್ಪಮಟ್ಟಿಗೆ ಕಾಣುತ್ತದೆ. ಇದರ ಬೆಳವಣಿಗೆ 'ಶ್ರೀ' ಅವರ ಸೃಷ್ಟಿ. ನಾಟಕದ ಪ್ರಾರಂಭದಲ್ಲಿಯೆ ಎರಡು ಪಕ್ಷಗಳ ಹಗೆತನದತ್ತ ನಮ್ಮ ಗಮನ ಹೋಗುತ್ತದೆ. ರುದ್ರ ಹೇಳುವಂತೆ, ದುರ್ಯೋಧನ ಸತ್ತುದರಿಂದ ಅಶ್ವತ್ಥಾಮ ಉರಿವ ಜ್ವಾಲಾಮುಖಿಯಾಗಿದ್ದಾನೆ. ಶತ್ರುಪಾಳ್ಯಕ್ಕೆ ನುಗ್ಗಿದಾಗ ಅವನಲ್ಲಿ ಪ್ರಜ್ವಲಿಸುತ್ತಿದ್ದ ಹಗೆತನ, ರೋಷ ಸ್ಪಷ್ಟವಾಗಿ ಪ್ರಕಟವಾಗುತ್ತವೆ. ರುದ್ರನು ಅವನನ್ನು ಕರೆದಾಗ, 'ಎನ್ನ ದೇವತೆ ಗೆಲವು ! ಗೆಲವು ಗೆಲವೋ ರುದ್ರ !' ಎನ್ನುತ್ತಲೇ ಬರುತ್ತಾನೆ. ಮನುಷ್ಯನ ಪರಾಕ್ರಮ, ಜಯ, ಅಪಜಯಗಳ ಮಾತಿನೊಂದಿಗೇ ಮನುಷ್ಯನ ನಿಸ್ಸಹಾಯಕತೆಯನ್ನು ಸಾರುವ ಮಾತುಗಳನ್ನೂ ಪ್ರಾರಂಭದಲ್ಲೆ ಕೇಳಿದ್ದೇವೆ :

ಕೃಷ್ಣ : ಇಂದವನ್, ನಾಳೆ ನಾನ್. ಏನ್ ಪಾಡೊ ಆಳ ಬಾಳ್ !
ಬೀಸುವ ಬಯಲ್‌ಗಾಳಿ, ಪರಿದಡಂಗುವ ನೆಳಲ್ !

ರುದ್ರ : ಒಂದು ಪಗಲ್ ಎತ್ತುವುದು, ಒಂದು ಪಗಲ್ ಉರುಳಿಪುದು
ಮಾನುಷಮನ್ ಎಲ್ಲಮನ್.

ಭಾರ್ಗವಿ : ಓ ಎನ್ನ ಕಂದ, ಅಶ್ವತ್ಥಾಮ ! ವಿಧಿಯಿಂದೆಯುಂ ನರರ್ಗೆ ಕ್ರೂರಂ ಬೇರಿಲ್ಲ.

ಪೌರುಷದ ಪರಮಾವತಾರ ಅಶ್ವತ್ಥಾಮ ಆತ್ಮಹತ್ಯ ಮಾಡಿಕೊಳ್ಳುವುದನ್ನು ಕಾಣುತ್ತೇವೆ. "ಪಲ್ ಮಸೆದು, ಕಲ್ ಮಸೆದು, ಬಾಳ್ ಮಸೆದು. ಪ್ರೊಂಚಿ। ಬಗೆ ಮಸಗಿ, ಬಾಯ್ ಮಸಗಿ, ಕಯ್ ಮಸಗಿ, ಮುಂಚಿ" ಹೋರಾಡುವವರ ಹಗೆತನ, ಛಲಗಳನ್ನು ಮೇಳ ವರ್ಣಿಸಿ ದುಃಖಿಸುವುದನ್ನು ಕೇಳುತ್ತೇವೆ. ಕಾಣುತ್ತೇವೆ. ಒಬ್ಬ ಅಪ್ರತಿಮ ವೀರನ ಹೆಣವನ್ನು ಕಾಣುತ್ತಿರುವಾಗಲೆ ಮತ್ತೊಬ್ಬ ಅಪ್ರತಿಮ ವೀರ, ಹನ್ನೊಂದು ಅಕ್ಷೋಹಿಣೀ ಸೈನ್ಯವನ್ನು ಮಣಿಸಿದ ಪರಾಕ್ರಮಿ ಭೀಮ ಬರುತ್ತಾನೆ.

ಮನುಷ್ಯನ ಶೌರ್ಯಕ್ಕೆ, ಜಯದ ಹಂಬಲಕ್ಕೆ ಇವರಿಬ್ಬರಿಗಿಂತ ಸಂಕೇತಗಳು ಬೇಕೆ? ತನಗೆ ಅಪಮಾನ ಮಾಡಬೇಡ ಎಂದು ಕೃಷ್ಣನು ಬುದ್ಧಿವಾದ ಹೇಳಿದಾಗ ಭೀಮ ಕೇಳುತ್ತಾನೆ :

ನೀನು ಇಂದು ಭೀಮನನ್
ಹೇಡಿಯನ್ ಮಾಡುವಯ್. ಇಂತಾಗೆ, ಜಯಂ ಎಲ್ಲಿ ನಮಗೆ?

ಕತ್ತಲಲ್ಲಿ ದೀಪ ಹೊತ್ತಿಸಿದಂತೆ ಬರುತ್ತದೆ ಕೃಷ್ಣನ ಉತ್ತರ :

ಕೆಳೆಯಂಗೆ ಸೋಲ್ವುದೆ ಜಯಂ ; ಕ್ಷಮೆಯೆ ತಾನ್ ಜಯಂ ;
ಕ್ರೋಧಮನ್ ತುಳಿದಿಟ್ಟು, ಬಲ್ವಿಡಿದು ಧರ್ಮಮನ್,
ಬಗೆಯೊಡನೆ ಪೋರಾಡುವುದೆ ಜಯಂ.

[ಸಫೋಕ್ಲೀಸನ ನಾಟಕದಲ್ಲಿ ಈ ಹೊಸ ದೃಷ್ಟಿ ಪ್ರಾಪ್ತವಾಗುವುದಿಲ್ಲ. ಅಲ್ಲಿ ಬರುವ ಮಾತುಗಳು ಇಷ್ಟೇ (ಸಂಭಾಷಣೆ ನಡೆಯುವುದು ಅಗಮೆಮ್ನನ್ ಮತ್ತು ಯೂಲಿಸಿಸರ ನಡುವೆ) :

ಅ : It is difficult
For monarchs to avoid all sacrilege.

ಯೂ : But easy to defer to friend's good counsel.

ಅ : Your 'man of merit' should obey by right
Those in command.

ಯೂ : Peace! you command then truly
When you surrender to your friend.]

ಭೌತಿಕ ಜಗತ್ತಿನಲ್ಲಿ ಮನುಷ್ಯನ ಭಾಗ್ಯ ದೈವಾಧೀನ. ಆದರೆ ದೈವದ ಹಿಡಿತಕ್ಕೆ ಸಿಕ್ಕದ ಮನುಷ್ಯ ತಾನೇ ಸಾಧಿಸಬಹುದಾದ ಭಾಗ್ಯ ಒಂದಿದೆ. ಅದು ಕೃಷ್ಣನು ವರ್ಣಿಸುವ ಜಯ. ಈ ಮಾತುಗಳನ್ನು ಕೃಷ್ಣನು ಭೀಮನಿಗೆ ಹೇಳಿದರೂ, ಸತ್ತು ಬಿದ್ದಿರುವ ಅಶ್ವತ್ಥಾಮನಿಗೂ ಅನ್ವಯಿಸುತ್ತದೆ. 'ದೈವಹತ'ನೆಂದುಕೊಂಡವನ ಹೊಣೆಯನ್ನೂ ಸೂಚಿಸುವ ಮಾನದಂಡವೊಂದು ನಿರ್ಮಿತವಾಗುತ್ತದೆ.

'ಅಜಾಕ್ಸ್'ನಲ್ಲಿ ಅಂತರ್ಗತವಾದ ಜೀವನದರ್ಶನವನ್ನು ಹೀಗೆ 'ಶ್ರೀ'ಯವರು ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ. ಮೂಲದಲ್ಲಿನಂತೆ ಇಲ್ಲಿಯೂ ಮನುಷ್ಯನ ಬಾಳಿಗೆ ದೈವದ ಅಧೀನವಲ್ಲದೆ ವಿಶ್ವದ ನಿಯತಿಯ ಹಿನ್ನೆಲೆ ನಿರ್ಮಿತವಾಗುತ್ತದೆ.

ಏಜಾಕ್ಸನಂತೆ ಅಶ್ವತ್ಥಾಮನೂ ತನ್ನ ಉನ್ಮಾದವಿಳಿದನಂತರ ಜಗತ್ತಿನ ವ್ಯಾಪಾರದ ಒಂದು ಕ್ರಮವನ್ನು ಗುರುತಿಸುತ್ತಾನೆ.

ಕೊರೆವಲ್ಲ ಕುಳಿರ ಹೇಮಂತನ್

ಪೊಳ್ತು ಬರೆ. ಮುಪ್ಪಾಗಿ. ಪಳಿಚಿಗುರ ಚೈತ್ರಂಗೆ ಬಳಿವಿಟ್ಟು ಪೋಕುಂ.
ಕಾರ್ಮುಸುಕು ರಾತ್ರಿ ಬೆಳ್ಗುದುರೆಗಳ ಸೂರ್ಯಂಗೆ ಬಸ್ಸಿತ್ತು ಸರಿಗುಂ.
ಬಿರುಗಾಳಿ ಬಡಿದಾರ್ದು ಕಡೆಗೆ ಕಡಲನ್ ತಣಿಪಿ ಪತ್ತಲೊಱಗುಂ.
ವಿಶ್ವಮನೆ ಸೆರೆವಿಡಿದು ಕೆಡಪುವಾ ನಿದ್ರೆಯುಂ ಪಿಡಿದೆಂದುಮರ್ ಇರದೆ
ಸಡಿಲವಿಟ್ಟೆಯ್ದುಗುಂ. ನಾಮ್ ಅರ್ ವಿವೇಕಮನೆ ಕಲ್ತಿಮೆನೆ. ಮರ್ತ್ಯರ್ ?

[ಈ ಪಂಕ್ತಿಗಳು ಸಾಮಾನ್ಯವಾಗಿ ವಿಮರ್ಶಕರು 'ಡಿಸೆಪ್ಶನ್ ಸ್ಪೀಚ್' ಎಂದು ನಿರ್ದೇಶಿಸುವ ಮಾತುಗಳಲ್ಲಿ ಬರುತ್ತವೆ. (ಏಜಾಕ್ಸನಂತೆ) ಅಶ್ವತ್ಥಾಮನೂ ತನ್ನ ಗೆಳೆಯರಿಗೆ, ತಾನು ವಿವೇಕ ಕಲಿತೆ. ಇನ್ನು ವಿಜೇತ ಶತ್ರುಗಳಿಗೆ ಮಣಿದು ಬದುಕುತ್ತೇನೆ ಎಂಬ ನಂಬಿಕೆ ಹುಟ್ಟಿಸಿ, ತೆರಳಿ. ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.] ಇಲ್ಲಿ ಮುಖ್ಯವಾದ ಅಂಶಗಳು ಎರಡು. ಏಜಾಕ್ಸ್ ಜಗದ ವ್ಯಾಪಾರದಲ್ಲಿ ಒಂದು ವ್ಯವಸ್ಥೆಯನ್ನು ಗುರುತಿಸುತ್ತಾನೆ. ತಾನು ಆ ವ್ಯವಸ್ಥೆಗೆ ಹೊಂದಿಕೊಳ್ಳಲಾರೆ ಎಂದೂ ತಿಳಿದಿದೆ. ಆದರೆ ಮನಸ್ಸು ತಿಳಿಯಾಗಿ, ಒಂದು ನಿಯತಿಯನ್ನು ಗುರುತಿಸಲು ಸಮರ್ಥನಾಗುತ್ತಾನೆ. ಎರಡನೆಯದಾಗಿ, ಈ ಭಾಗದ ಪ್ರತಿಮಾವಳಿ ಶಾಂತಿಯತ್ತ, ಬೆಳಕಿನತ್ತ, ಎಚ್ಚರದತ್ತ ಪಯಣವನ್ನು ಸೂಚಿಸುತ್ತದೆ.

ಹೀಗೆ ಮೇಲುನೋಟಕ್ಕೆ ಗ್ರೀಕ್ ನಾಟಕ ಒಂದನ್ನು ಬಹುಮಟ್ಟಿಗೆ ಅನುಸರಿಸಿ, ಕೆಲವು ಅನಿವಾರ್ಯ ಮಾರ್ಪಾಡುಗಳೊಡನೆ ರೂಪ ತಾಳಿದ ಒಂದು ಸರಳ ನಾಟಕ ಎಂದು ತೋರುವ 'ಅಶ್ವತ್ಥಾಮನ್' ರೂಪಾಂತರದಿಂದ ಬಹುದೂರ ಹೋಗಿದೆ. ಗ್ರೀಕ್ ಮೂಲದ ಹಲವು ಲಕ್ಷಣಗಳನ್ನೂ ಜೀವನದರ್ಶನವನ್ನೂ ಉಳಿಸಿಕೊಂಡೂ ತನ್ನದೇ ಆದ ಸಂಕೀರ್ಣತೆಯನ್ನು ಪಡೆದುಕೊಂಡಿದೆ. ಸಫೋಕ್ಲೀಸನ ನಾಟಕದ ಕ್ರಿಯೆಯನ್ನು ಸಹ ಇಲ್ಲಿ ಯಥಾವತ್ತಾಗಿ ಅಳವಡಿಸಿಲ್ಲ. ಒಂದು ಉದಾಹರಣೆ– ಅಲ್ಲಿ ಮೆನಲಾಸ್, ಆಗಮೆಮ್ನನ್ ಇಬ್ಬರು ಒಬ್ಬರನಂತರ ಒಬ್ಬರು ಶವಸಂಸ್ಕಾರಕ್ಕೆ ಅಡ್ಡಿ ಮಾಡುತ್ತಾರೆ. 'ಶ್ರೀ'ಯವರ ನಾಟಕ ಮೂಲದಿಂದ ಪ್ರೇರಿತವಾದರೂ ಸ್ವತಂತ್ರವಾದ ದರ್ಶನಕ್ಕೆ ಹೊಂದಿಕೊಳ್ಳುವ ಕ್ರಿಯೆಯನ್ನೂ ಪಡೆದುಕೊಳ್ಳುತ್ತದೆ. ಆದ್ದರಿಂದಲೇ ಇದು ಒಂದು ದೃಷ್ಟಿಯಿಂದ ರೂಪಾಂತರವಾದರೂ ಮತ್ತೊಂದು ದೃಷ್ಟಿಯಿಂದ ಸ್ವತಂತ್ರ ಸೃಷ್ಟಿ. ಪ್ರತಿಭೆಯ ಸೃಷ್ಟಿ.

ಅಶ್ವತ್ಥಾಮನ ಭೀಕರ ಕೃತ್ಯವೇ ಪಿ.ಸೀ. (ಡಾ॥ ಪಿ. ಸೀತಾರಾಮಯ್ಯ) ಅವರ 'ಆಗ್ರಹ' ನಾಟಕದ ವಸ್ತು. ಈ ನಾಟಕ ಮಹಾಭಾರತದ ಕಥೆಯನ್ನೇ ಅನುಸರಿಸುತ್ತದೆ. ಸಾವಿನ ಉಡಿಯಲ್ಲಿರುವ ದುರ್ಯೋಧನನು, ಅಶ್ವತ್ಥಾಮನು ರಾತ್ರಿ

ಶತ್ರುಪಾಳೆಯಕ್ಕೆ ನುಗ್ಗಿ ಪಾಂಡವರನ್ನು ನಾಶಮಾಡುವನೆಂದು ನಂಬಿ ಅವನಿಗೆ ಸೇನಾಧಿಪತಿಯ ಪಟ್ಟ ಕಟ್ಟುತ್ತಾನೆ. ಕೃಪ ಮತ್ತು ಕೃತವರ್ಮ ಬೇಡವೆಂದರೂ ಅಶ್ವತ್ಥಾಮ ರಾತ್ರಿ ಶತ್ರುಶಿಬಿರಕ್ಕೆ ನುಗ್ಗುತ್ತಾನೆ. ಪಾಂಡವರನ್ನು ಕೃಷ್ಣ ಅಲ್ಲಿಂದ ಕಳಿಸಿಬಿಟ್ಟಿದ್ದಾನೆ. ಅವರು ಉಳಿದುಕೊಳ್ಳುತ್ತಾರೆ. ಉಪಪಾಂಡವರು, ಧೃಷ್ಟದ್ಯುಮ್ನ ಮೊದಲಾದವರ ಕಗ್ಗೊಲೆಯಾಗುತ್ತದೆ. ದ್ರೌಪದಿಯ ಸಮಾಧಾನಕ್ಕೆಂದು ಪಾಂಡವರು ಮತ್ತು ಕೃಷ್ಣ ಅಶ್ವತ್ಥಾಮನ ಬೆನ್ನಟ್ಟುತ್ತಾರೆ. ಅಶ್ವತ್ಥಾಮ ಬಿಟ್ಟ ಘೋರ ಅಸ್ತ್ರಕ್ಕೆ ಪ್ರತಿಯಾಗಿ ಅರ್ಜುನ ಬಿಟ್ಟ ಅಸ್ತ್ರ ಎರಡೂ ಧಗಧಗಿಸಿ ಲೋಕವನ್ನೆ ಸುಡುವಂತಾಗುತ್ತದೆ. ವ್ಯಾಸ ನಾರದರ ಮಾತನ್ನೂ ಅಶ್ವತ್ಥಾಮ ಧಿಕ್ಕರಿಸುತ್ತಾನೆ. ಕಡೆಗೆ ಕೃಷ್ಣನಿಂದ ಉಳಿ ನಡೆಯುತ್ತದೆ. ಅಶ್ವತ್ಥಾಮನ ಶಿರೋರತ್ನವನ್ನು ಪಾಂಡವರು ಕಿತ್ತುಕೊಳ್ಳುತ್ತಾರೆ, ಅವನು ಕೃಷ್ಣನ ಶಾಪಕ್ಕೆ ಒಳಗಾಗಿ ಮೂರು ಸಾವಿರ ವರ್ಷ ಜನರಿಂದ ದೂರವಾಗಿ ಅಲೆಯಬೇಕಾಗುತ್ತದೆ. ಶಾಪ ಬಂದನಂತರ ಅವನಿಗೆ ಬುದ್ಧಿ ತಿಳಿಯಾಗುತ್ತದೆ, 'ಇಷ್ಟೈವ ಫಲಂ' ಎನ್ನುತ್ತ ತತ್ತರಿಸುತ್ತ ಹೋಗುತ್ತಾನೆ.

ವಿ.ಸೀ. ಅವರು ತಮ್ಮ 'ಮೊದಲ ಮಾತಿ'ನಲ್ಲಿ, ಇಂದು ಜಗತ್ತನ್ನು ನಾಶ ಮಾಡಬಲ್ಲ ಘೋರ ಅಸ್ತ್ರಗಳನ್ನು ಪ್ರಸ್ತಾಪಿಸಿ, "ಕೃಷ್ಣನ ಕೋಪವನ್ನು ಹೊತ್ತಿಸಿ ಮೂರು ಸಾವಿರ ವರ್ಷಗಳ ಕಾಲ ಅನುಭವಿಸಬೇಕಾದ ಶಾಪವನ್ನು ಹೊತ್ತ ಅಶ್ವತ್ಥಾಮನ ಗತಿಯನ್ನು ಕಂಡು ನಾನಂತೂ ಭಯದಿಂದ ನಡುಗಿದ್ದೇನೆ. ಹಾಗೆಯೇ ಅದನ್ನು ನೋಡುನೋಡುತ್ತ ಯಾವ ದೇವರ ಭಯದಿಂದಲಾದರೂ ಮಾನವನ ಮನೋದೌರ್ಬಲ್ಯಗಳು ಅವನನ್ನು ಮುಳುಗಿಸದಂತೆ ಅವನ ಬದುಕು ನೇರವಾಗಿ ಮುಂಗಳಕ್ಕೆ ತಿರುಗಲಿ ಎಂದು ಬಯಸಿದ್ದೇನೆ. ಆದರೆ ಯಾರು ಏಷ್ಟು ಬಯಸಿದರೇನು ? ಸಾತ್ವಿಕಕ್ಕೆ ತಿರುಗಬೇಕಾದ ಪ್ರವೃತ್ತಿಗಳೆಲ್ಲ ರಾಗದ್ವೇಷಗಳ ದಾಳಿಯಲ್ಲಿ, ತಾಮಸಕ್ಕೆ ಸೆಳೆಯುವುವು ; ಬುದ್ಧಿಯ ಹದ ಕೆಡುವುದು ; ದುರ್ಬಲ ಮನುಷ್ಯನ ಆತ್ಮನಾಶ ಆಗುತ್ತಲೇ ಇರುವುದು. ಅಂತಹ ದೃಶ್ಯವೊಂದು ಈ ನಾಟಕದಲ್ಲಿ ಕಣ್ಣಿಗೆ ಕಾಣಿಸಬಹುದೆಂದು ನನ್ನ ನಂಬಿಕೆ" ಎಂದಿದ್ದಾರೆ.

ಇಲ್ಲಿ ಈ ನಾಟಕವನ್ನು ಗ್ರೀಕ್ ನಾಟಕಗಳ ಹಿನ್ನೆಲೆಯಲ್ಲಷ್ಟೆ ನೋಡುತ್ತೇನೆ. ಗ್ರೀಕ್ ಗಂಭೀರ ನಾಟಕದ ಚೌಕಟ್ಟಂತೂ ಈ ನಾಟಕಕ್ಕೆ ಇಲ್ಲ. ಗ್ರೀಕ್ ನಾಟಕದಲ್ಲಿ ಈ ರೀತಿ 'ದೃಶ್ಯ'ಗಳಿರುವುದೂ ಇಲ್ಲ. ಇಲ್ಲಿ ಮೇಳದವರಿಲ್ಲ. ಕಾಲೈಕ್ಯ, ಸ್ಥಳೈಕ್ಯಗಳಿವೆ ಎನ್ನಬಹುದು. ಆದರೆ ಮೇಳದವರ ದೀರ್ಘ 'ಭಾಷಣ'ಗಳಿಲ್ಲದೆ, ಕ್ರಿಯೆ ಗ್ರೀಕ್ ನಾಟಕದಲ್ಲಿನಂತೆ ಸ್ಪಷ್ಟವಾದ ಹಂತಗಳಲ್ಲಿ ಮುಂದುವರೆಯುವುದು, ಅಲ್ಲಿನಂತೆ ಮೇಳದವರ ಚಿಂತನೆಯು ಕ್ರಿಯೆಯೊಂದಿಗೆ ಬೆರೆಯುವುದು. ಕೃತಿಯಲ್ಲಿ ವಸ್ತುವನ್ನು ವಿಶ್ಲೇಷಿಸುವ ರೀತಿಯಿಂದ ನೋಡಿದಾಗ ಗ್ರೀಕ್ ನಾಟಕದ ಸಾದೃಶ್ಯ ಸ್ವಲ್ಪ ಮಟ್ಟಿಗೆ ಕಾಣುತ್ತದೆ. 'ಹ್ಯೂಬ್ರಸ್' (ಚೇತನದ ಉದ್ಧಟತನ), 'ನೆಮಿಸಿಸ್' (ಶಿಕ್ಷೆ) ಗ್ರೀಕ್ ನಾಟಕಗಳಲ್ಲಿ ಮತ್ತೆಮತ್ತೆ ಪ್ರತ್ಯಕ್ಷವಾಗುತ್ತವೆ. (ಈ ಮಾತು

ಯೂರಿಪಿಡೀಸನ ನಾಟಕಗಳಿಗೆ ಅನ್ವಯಿಸುವುದಿಲ್ಲ.) ಮನುಷ್ಯನ ಪೌರುಷ ಅಥವಾ ಅಧಿಕಾರ ಅಥವಾ ಯಶಸ್ಸಿನಿಂದ ಕಣ್ಣಿಗೆ ಪೊರೆ ಬೆಳೆಯುತ್ತದೆ. ಉದ್ಧಟತನದಿಂದ ವರ್ತಿಸಿ ಪಾಪ ಮಾಡುತ್ತಾನೆ, ತನ್ನ ತಲೆಯ ಮೇಲೆ ವಿನಾಶವನ್ನು ತಂದುಕೊಳ್ಳುತ್ತಾನೆ–ಈ ದೃಷ್ಟಿಯಿಂದ. ಅಶ್ವತ್ಥಾಮನ 'ಹ್ಯೂಬ್ರಿಸಿ'ಗೆ ಶಿಕ್ಷೆಯಾಗುತ್ತದೆ ಎನ್ನಬಹುದು. ಆದರೆ ಗ್ರೀಕ್ ಗಂಭೀರ ನಾಟಕ ಇಷ್ಟಕ್ಕೆ ಪರ್ಯವಸಾನವಾಗುವುದಿಲ್ಲ. ದೇವತೆಗಳು – ಮನುಷ್ಯನ ಸಂಬಂಧವನ್ನು ಶೋಧಿಸುತ್ತದೆ. ವಿಶಿಷ್ಟ ರೀತಿಯಲ್ಲಿ ನಿರೂಪಿಸುತ್ತದೆ. ಈ ಚಿಂತನೆಯ ಭಾಗ 'ಆಗ್ರಹ'ದಲ್ಲಿ ತಕ್ಕಷ್ಟಿಲ್ಲ ಎನ್ನಬೇಕು. ಇಲ್ಲಿ ಕೃಷ್ಣ ಕಣ್ಣಿಗೆ ಕಾಣುವ ದೈವ. ಅವನ ಪಾತ್ರದ ಕಲ್ಪನೆ ಸ್ಪಷ್ಟವಿಲ್ಲ ಎನ್ನಿಸುತ್ತದೆ. ಅವನನ್ನು ಯುಧಿಷ್ಠಿರ, ಅರ್ಜುನ, ಭೀಮ. ವ್ಯಾಸ ಎಲ್ಲ ಹೊಗಳುತ್ತಾರೆ. ಪಾಂಡವರ ರಕ್ಷಕ ಅವನು ; ಉತ್ತರೆಯ ಗರ್ಭದಲ್ಲಿರುವ ಶಿಶುವನ್ನು ಕಾಪಾಡುವವನು. ಭೀಮ-ದುರ್ಯೋಧನರ ಗದಾಯುದ್ಧವಾದಾಗ, ಭೀಮ ದುರ್ಯೋಧನನನ್ನು ಒದ್ದಾಗ ಅವನು ಎದುರಿಗಿದ್ದ, ತೊಡೆ ಮುರಿಯುವ ಪ್ರತಿಜ್ಞೆಯನ್ನು ಭೀಮನಿಗೆ ಅರ್ಜುನನ ಮೂಲಕ ನೆನಪಿಗೆ ತಂದುಕೊಟ್ಟ ಎಂಬುದಕ್ಕೆ ನಾಟಕದಲ್ಲಿ ಸಾಕ್ಷ್ಯವಿದೆ. ಆದರೆ ಅವನೇ ಭೀಮ–ಯುಧಿಷ್ಠಿರನನ್ನು ನಡೆದುದಕ್ಕೆ ಆಕ್ಷೇಪಿಸುತ್ತಾನೆ. 'ಮೊದಲೇ ಆ ಸ್ಥಿತಿಯಲ್ಲಿ ನಾವು ಅವನನ್ನು ಯುದ್ಧಕ್ಕೆ ಕರೆಯಬಾರದಾಗಿತ್ತು', 'ನೀನು ದುರ್ಯೋಧನನ ಮಕುಟಭಂಗ ಮಾಡಿದ್ದು ಅಕ್ಷಮ್ಯ ಭೀಮ', 'ಹೀಗಾಗುವುದೆಂದು ಎಲ್ಲರಿಗೂ ಮೊದಲೇ ತಿಳಿದಿದ್ದಿತಲ್ಲ. ತಿಳಿದೂ ತಿಳಿದೂ ಯುದ್ಧ ಹೂಡಿದಿರಿ' ಹೀಗೆ ಆಕ್ಷೇಪಿಸುವುದು ಅರ್ಥವಾಗುವುದಿಲ್ಲ. 'ಶ್ರೀ'ಯವರ 'ಅಶ್ವತ್ಥಾಮನ್' ನಾಟಕದಲ್ಲಿ ನಾಯಕ ತಾನು ಮಾಡಿದ್ದು ಹೀನಕಾರ್ಯವೆಂದು ಗುರುತಿಸಿದ ಮೇಲೆ ಎಷ್ಟು ಕಾಲ ನಮ್ಮ ಮುಂದಿರುತ್ತಾನೆ! ಗ್ರೀಕ್ ನಾಟಕಮಂದಿರದ ಮಿತಿಗಳಲ್ಲೂ. ಸ್ಥಳೈಕ್ಯವನ್ನು ಮುರಿದ ಸಫೋಕ್ಲೀಸನು ಅಜಾಕ್ಸನ ಮನಸ್ಸಿನ ವ್ಯಾಪಾರವನ್ನು ತೆರೆದು ತೋರಿಸುತ್ತಾನೆ. ನಾಯಕನ ಸ್ವಭಾವದ ಬೇರೆ ಬೇರೆ ಮುಖಗಳ ಪರಿಚಯ ನಮಗಾಗುತ್ತದೆ. 'ಶ್ರೀ'ಯವರು ಸಫೋಕ್ಲೀಸನನ್ನು ಅನುಸರಿಸಿದ್ದಾರೆ. 'ಆಗ್ರಹ'ದಲ್ಲಿ ಅಶ್ವತ್ಥಾಮನ ಮನಸ್ಸು ತಿಳಿಯಾದನಂತರ ಒಂದೇ ಕ್ಷಣ ಅವನು ನಮ್ಮ ಮುಂದಿರುವುದು. ಅದಕ್ಕೆ ಮುನ್ನವೂ ಅವನು ಕ್ರಿಯೋನ್ಮುಖನಾಗಿ ಕೆಲವು ಮಾತುಗಳನ್ನಾಡುತ್ತಾನಲ್ಲದೆ ಅವನ ಮನಸ್ಸನ್ನು ಹೊಗುವ ಸಾವಧಾನ ನಾಟಕಕ್ಕಿಲ್ಲ. ಅವನ ಸ್ವಭಾವ–ಕಾರ್ಯಗಳ ಮೇಲೆ ಬೇರೆ ಬೇರೆ ಅಭಿಪ್ರಾಯಗಳು. ವ್ಯಾಖ್ಯಾನಗಳು ಇಲ್ಲ. ಇದರಿಂದ ಗ್ರೀಕ್ ಗಂಭೀರ ನಾಟಕದ ಕೇಂದ್ರ ಕಲ್ಪನೆ (ಉದ್ಧಟತನದಿಂದ ದೈವದ ಅವಕೃಪೆ. ಶಿಕ್ಷೆ) ಇಲ್ಲಿದ್ದರೂ ಮನುಷ್ಯ – ದೈವಗಳ ಸಂಬಂಧದ ವಿಶ್ಲೇಷಣೆ. ಕ್ರಿಯೆಯನ್ನು ಕುರಿತ ಚಿಂತನೆ ಎರಡೂ 'ಆಗ್ರಹ'ದಲ್ಲಿ ಲಭ್ಯವಾಗುವುದಿಲ್ಲ.

ದತ್ತಿ ಉಪನ್ಯಾಸಗಳು–೧೯೮೪

ಮೈಲಾರ ದೇವರು

(ಬಿ.ಎಂ.ಶ್ರೀ. ಸ್ಮಾರಕೋಪನ್ಯಾಸ)

ಉಪನ್ಯಾಸಕರು : ಡಾ॥ ಸೂರ್ಯನಾಥ್ ಕಾಮತ್

ಮೈಲಾರ, ಮೈಲಾರಮಾರ್ತಾಂಡ, ಮಾರ್ತಾಂಡ ಭೈರವ, ಖಂಡೇರಾಯ, ಖಂಡೋಬ, ಮಾಲತೇಶ, ಮುಂತಾದ ಹೆಸರಿನಿಂದ ಕರ್ನಾಟಕ ಮಹಾರಾಷ್ಟ್ರಗಳೆರಡರಲ್ಲೂ ಜನಪ್ರಿಯನಾದ, ಅಸ್ಪೃಶ್ಯರಿಂದ ಹಿಡಿದು ಬ್ರಾಹ್ಮಣರವರೆಗೆ ಅನೇಕರಿಗೆ ಮನೆದೇವರಾಗಿಯೂ ಇರುವ ಮೈಲಾರಲಿಂಗ ಕುತೂಹಲ ಕೆರಳಿಸುವ ದೇವತೆ. ಮುಸಲ್ಮಾನರೂ ಮಲ್ಲೂಖಾನ್, ಅಜಮತ್‌ಖಾನ್ ಎಂದು ಈ ದೇವರನ್ನು ಕರೆಯುತ್ತಾರೆ. ಈ ದೇವರ ಬಗ್ಗೆ ಈಗಾಗಲೇ ಮಹಾರಾಷ್ಟ್ರ ಹಾಗೂ ಕರ್ನಾಟಕದ ಅನೇಕ ವಿದ್ವಾಂಸರೂ ಸಾಕಷ್ಟು ಅಧ್ಯಯನ, ಚರ್ಚೆ ಮಾಡಿದ್ದಾರೆ. ಮಹಾರಾಷ್ಟ್ರದ ವಿದ್ವಾಂಸರಲ್ಲಿ ಆರ್.ಸಿ. ಢೇರೆ, ಪ್ರೊ॥ ಜಿ. ಹೆಚ್. ಖರೆ ಇವರು ಉಲ್ಲೇಖನೀಯರು. ಕರ್ನಾಟಕದಲ್ಲಿ ಡಾ॥ ಶಂ. ಬಾ. ಜೋಶಿ. ಡಾ॥ ಪಿ. ಬಿ. ದೇಸಾಯಿ. ಪ್ರೊ॥ ಶ್ರೀನಿವಾಸ ರಿತ್ತಿ. ಡಾ॥ ಚಿದಾನಂದಮೂರ್ತಿ. ಶ್ರೀ ಜಿ. ಎಸ್. ಕುಲಕರ್ಣಿ, ಮುಂತಾದವರನ್ನು ಉಲ್ಲೇಖಿಸಬಹುದು. ಈ ದೇವರ ಆರಾಧನೆ ಕರ್ನಾಟಕದಲ್ಲಿ ಆರಂಭವಾಗಿ ಮಹಾರಾಷ್ಟ್ರದಲ್ಲಿ ಹರಡಿತೆಂಬುದನ್ನು ಪ್ರೊ॥ ಖರೆ ಮುಂತಾದ ಮರಾಠಿ ವಿದ್ವಾಂಸರು ಒಪ್ಪುತ್ತಾರೆ.

"ಸ್ಕಾಂದ ಪುರಾಣ" ದೊಳಗಿನ ಉಲ್ಲೇಖವೆಂದು "ಶ್ರೀ ತತ್ವನಿಧಿಯಲ್ಲಿ" ಮೈಲಾರದೇವರ ಧ್ಯಾನಶ್ಲೋಕ ಹೀಗೆ ಇದೆ :

ಮೈಲಾರಂ ಮಾಲಚೀನಾಥಂ ಸರ್ವಜಂತುಹಿತೇ ರತಮ್
ಭಜಾಮಿ ಭಜತಾಂ ಕಲ್ಪಪಾದಪಂ ಪರಯಾ ಮುದಾ ॥
ಶುಭ್ರಾಂಗಂ ಭೂಷಣೈರ್ಯುಕ್ತಂ ಹರಿದ್ರಾಚೂರ್ಣ ಸಂಯುತಂ
ಪೀತಾಂಬರಧರಾಂಗಂ ಭಜತಾಂ ಕಾಮದಂ ಸದಾ ॥
ತ್ರಿಶೂಲಂ ಡಮರುಗಂ ಖಡ್ಗಂ ವರದಂ ಚ ಕರಾಂಬುಜೈಃ
ಬಿಭ್ರಾಣಂ ಪ್ರಾಣಿರಕ್ಷಾರ್ಥ ಸರ್ವಕಾಲ ಮತಂದ್ರಿತಮ್ ॥
ದೇವಾನಾಂ ರಕ್ಷಣಾರ್ಥಾಯ ದಾನವಾನಾಂ ವಧಾಯ ಚ
ಮೈಲಾರಂ ರೂಪಮಾಸ್ಥಾಯ ಶಂಕರಃ ಶಂಕರೋಭವತ್ ॥
ಗಜಸಿಂಹ ವರಾಹಾಶ್ವ ವ್ಯಾಘ್ರರೂಪ ಧರಾನ್ ಖಿಲಾನ್
ದುಷ್ಟಾಂಛತ್ರು ಸ್ವಿನಿಘ್ನಂತಂ ತುರಗೇಣ ಚ ಚಾರಪ ॥
ಶುಕ್ತೈಃ ಪ್ರಭೂತನಿನಾದೈಃ ಕಂಠಬದ್ಧ ಕಪರ್ದಕೈಃ
ಭಾನುವಾರೇ ಮನುಷ್ಯಾಣಾಂ ಉತ್ಸವೇ ಸಾರ್ವಕಾಲಿಕೇ ॥
ತಂ ವಂದೇ ವರದಂ ದೇವಂ ಪಾಲಿಜಸ್ಥಂ ಮಹೇಶ್ವರಂ
ಸ್ಮರಣಾಧ್ಯಸ್ಯ ದೇವಸ್ಯ ಮೈಲಾರಸ್ವಾಮಿತೌಜಸಃ
ಹರಿದ್ರಾಯಾ ಕೃತಂ ರಮ್ಯಂ ಭಂಡಾರಂ ಭಜತಾಂ ನೃಣಾಂ ॥

ಇದರಿಂದ ಈ ದೇವರು ಶಿವನ ಅವತಾರ. ತುರಗವಾಹನ. ಮಾಳಚಿಯ ಪತಿ, ಶುಭ್ರಾಂಗ, ತ್ರಿಶೂಲ, ಢಮರು, ಖಡ್ಗ ಹಾಗೂ ವರದ ಮುದ್ರೆಯ ನಾಲ್ಕು ಕೈಗಳುಳ್ಳವನು ಎಂದೆಲ್ಲ ಅರ್ಥವಾಗುತ್ತದೆ. ಭಾನುವಾರ ಇವನ ಆರಾಧನೆಯ ವಿಶೇಷ ವಾರ; ಹಳದಿಯ ಚೂರ್ಣದ ಭಂಡಾರವನ್ನು ಭಕ್ತರಿಗೆ ಪ್ರಸಾದವಾಗಿ ನೀಡುತ್ತಾನೆ, ಎಂದೂ ಅರ್ಥವಾಗುತ್ತದೆ. ಆದರೆ ವಿಶೇಷವಾಗಿ ಎಲ್ಲೆಡೆ ಇರುವ ಮೈಲಾರ ದೇವರ ಮೂರ್ತಿಗಳಲ್ಲಿ ವರದ ಹಸ್ತದ ಬದಲಿಗೆ ಪಾನಪಾತ್ರೆ ಕೈಯಲ್ಲಿ ಇರುತ್ತದೆ.

ಈ ದೇವರು ಭೈರವರೂಪೀ ಶಿವ ಮತ್ತು ಸೂರ್ಯ ಇವರ ಏಕೀಕೃತರೂಪ. ಕೈಯಲ್ಲಿ ಖಡ್ಗ ಹಿಡಿದಿರುವುದರಿಂದ ಖಂಡೇರಾಯ, ಖಂಡೋಬಾ ಎಂದು ಹೆಸರು ಬಂದಿದೆ. ಶಿವನು ಭೈರವರೂಪ ಧರಿಸಿ, ಏಳುಕೋಟಿ ಗಣಗಳ ಜೊತೆ ಮಣಿ ಮತ್ತು ಮಲ್ಲ ಎಂಬ ರಾಕ್ಷಸರನ್ನು ಕೊಂದು, ತಪಸ್ಸುಮಾಡುತ್ತಿದ್ದ ಏಳು ಋಷಿಗಳನ್ನು ರಕ್ಷಿಸಿದ್ದರಿಂದ, ಮಲ್ಲನ ಅರಿಯಾದ ಈತ ಮಲ್ಲಾರಿ ಎನಿಸಿದ, ಎಂದು "ಮಲ್ಲಾರಿ ಮಹಾತ್ಮೆ" ಎಂಬ ಕೃತಿಯಲ್ಲಿ ಹೇಳಿದೆ. ಇದು "ಬ್ರಹ್ಮಾಂಡ ಪುರಾಣಾ"ಂತರ್ಗತವಾದುದೆಂದು ಹೇಳಿದ್ದರೂ, ವಾಸ್ತವವಾಗಿ ಅಲ್ಲಿ ಆ ಕತೆ ಇರದೆ, ಹದಿನೇಳನೆಯ ಶತಮಾನದಲ್ಲಿ ಕಮಲಾಕರ ಭಟ್ಟನೆಂಬಾತನು ರಚಿಸಿದ "ನಿರ್ಣಯ ಸಿಂಧು" ಎಂಬ ಕೃತಿಯಲ್ಲಿ ಇದರ ಉಲ್ಲೇಖ ಬಂದಿದೆ.

ಈ ಮೈಲಾರದೇವರಿಗೆ ಮಾಳಸಾ ಅಥವಾ ಮಾಳಚಿ ಸತಿ. ಇವಳು ಮಾಳದವ್ವೆ ಅಥವಾ ಪರ್ವತೇಶ್ವರಿ ಇರಬಹುದು. ಮಾಳಚಿ, ಮಾಲತಿ, ತುಪ್ಪದ ಮಾಳವ್ವ, ಗಂಗೆ ಮಾಳವ್ವ ಎಂದೂ ಅವಳನ್ನು ಕರೆದಿದ್ದಾರೆ. ಇದರಿಂದ "ಮಾಲತೇಶ" ಎಂಬ ಹೆಸರೂ ಮೈಲಾರನಿಗೆ ಬಂದಿದೆ. ಪಂಪನ 'ವಿಕ್ರಮಾರ್ಜುನ ವಿಜಯ'ದಲ್ಲಿ ಮಾಳಚಿ ಕಾಣಿಸುತ್ತಾಳೆ. 11 – 12ನೆಯ ಶತಮಾನದ ದೇವೀಹೊಸೂರು (ಹಾವೇರಿ ತಾಲ್ಲೂಕು) ದೇವಿಯ ದೇವಾಲಯದ ಎರಡು ಶಾಸನಗಳಲ್ಲಿ ಮಾಳಜಿ, ಮಾಳಜ ದೇವತೆ ಎಂದು ಇವಳನ್ನು ಕರೆದಿವೆ. ಶಾಕ್ತ ಮಹಾಲಕ್ಷ್ಮಿಯೇ ಮಾಳಚಿ ಆಗಿರಬಹುದೆಂದು ಒಂದು ಅಭಿಪ್ರಾಯವಿದೆ. ಈಕೆಯೂ ಢಮರು, ತ್ರಿಶೂಲ, ಖಡ್ಗ ಹಾಗೂ ಪಾನಪಾತ್ರಧಾರಿಣಿಯಾದ ಚತುರ್ಭುಜೆ. ಮಹಾರಾಷ್ಟ್ರದ ಪುಣೆ ಬಳಿಯ ನೇವಾಸಾದಲ್ಲಿನ ತಿಮ್ಮಾಶೇಟ್ ಎಂಬ ವೈಶ್ಯನ ಮಗಳು ಈಕೆ. ಎಂಬ ನಂಬಿಕೆಯ ಒಂದು ಕತೆಯೂ ಇದೆ. ಇದಲ್ಲದೆ, ಮಹಾರಾಷ್ಟ್ರದಲ್ಲಿ ಬಾಣಾಯಿ ಅಥವಾ ಬಾಳಾಯಿ, ಕರ್ನಾಟಕದಲ್ಲಿ ಕುರುಬತ್ತೆವ್ವ, ಎಂದು ಕರೆಯಲಾಗುವ ಕುರುಬರ ಹೆಣ್ಣೊಬ್ಬಳು ಮೈಲಾರ ದೇವರ ಉಪಪತ್ನಿ, ಎಂಬ ಒಂದು ನಂಬಿಕೆ ಇದೆ. ಎಷ್ಟೋ ಕಡೆ ಮೈಲಾರ ದೇವರ ಗರ್ಭಗೃಹದಲ್ಲಿ ಅಥವಾ ಪರಿಸರದಲ್ಲಿ ಪ್ರತ್ಯೇಕ ಗರ್ಭಗೃಹದಲ್ಲಿ ಮಾಳಚಿ ಇದ್ದರೆ, ಈ ಉಪಪತ್ನಿಯ ದೇವಾಲಯ ದೂರದಲ್ಲಿ ಇದ್ದು ಅವಳಲ್ಲಿಗೆ ಮೈಲಾರ ದೇವರು ಹೋಗುವನೆಂಬುದನ್ನು ಆಚರಿಸುವ ಉತ್ಸವವೂ ಇದೆ. ಈಕೆಯ ಸೋದರ ಹೆಗ್ಗಯ್ಯ, ಮಹಾರಾಷ್ಟ್ರದಲ್ಲಿ ಹೆಗ್ಗಡೆ ಪ್ರಧಾನ ಎಂದು

ಪರಿಚಿತನಾದ, ಮೈಲಾರದೇವರ ಪರಿವಾರ ದೇವರ ಮಂದಿರವೂ ಹೆಚ್ಚಾಗಿ ಮೈಲಾರ ಮಂದಿರಗಳ ಪರಿಸರದಲ್ಲಿ ಇವೆ.

ಈ ಮೈಲಾರ ಕುರುಬರಿಗೆ ಪ್ರಿಯನಾದ ದೇವರು. ಕರ್ನಾಟಕದಲ್ಲಿ ಎಲ್ಲೆಡೆ ಇರುವ ಮೈಲಾರದೇವರ ದೇವಾಲಯಗಳ ಆಡಳಿತ ನೋಡಿಕೊಳ್ಳುವವರು ಹರಪನಹಳ್ಳಿ ತಾಲ್ಲೂಕು ಹಿರೇಮೈಲಾರದ ಕಾಡಯ್ಯಸ್ವಾಮಿ ಒಡೆಯರೆಂಬುವರು. ಇವರ 'ಒಡೆಯರ್' ಎಂಬ ಹೆಸರು ಕಂಡಾಗ ಕುರುಬರೆಂದು ತೋರಿಸಿಕೊಳ್ಳುತ್ತಾರೆ. ಕರ್ನಾಟಕದಲ್ಲಿ ಮೈಲಾರದೇವರ ಭಕ್ತರಾಗಿ, ಅವರ ಸೇವೆಗೆ ಮೀಸಲಾಗುವ ಬಹುಪಾಲು ಗೊಗ್ಗಯ್ಯ ಅಥವಾ ಗೊರವಯ್ಯ ಎಂಬ ಭಕ್ತರು ಹೆಚ್ಚಾಗಿ ಕುರುಬರೇ. ಕುರುಬರಾದ ಇಂದೋರಿನ ಹೋಳ್ಕರ್ ರಾಜಮನೆತನದವರೂ ಈ ದೇವರ ಪರಮ ಭಕ್ತರು. ದಕ್ಷಿಣ ಕರ್ನಾಟಕದ ನಾಗಮಂಗಲ ತಾಲ್ಲೂಕಿನ ಎರಡು ಮೈಲಾರ ಕ್ಷೇತ್ರಗಳಾದ ಬೆಳ್ಳೂರು, ಮೈಲಾರ ಪಟ್ಟಣಗಳು ಕುರುಬರ ಜನಸಂಖ್ಯೆ ಹೆಚ್ಚಾಗಿರುವ ತಾಲ್ಲೂಕಿನಲ್ಲಿ ಇರುವುದನ್ನು ಗಮನಿಸಬಹುದು. ಕುರುಬರಿಂದ ಹಿಡಿದು ಬ್ರಾಹ್ಮಣರವರೆಗೆ ಎಲ್ಲರಿಗೂ ಈ ದೇವರು ಕುಲದೇವರು.

ಗೊಗ್ಗಯ್ಯ, ಗೊರವಯ್ಯ, ವಗ್ಗಯ್ಯ, ಮರಾಠಿಯಲ್ಲಿ ವಾಗ್ಯಾ ಎಂಬಾತ ಈ ದೇವರ ಮಹಾತ್ಮೆ ಸಾರುತ್ತ ತಿರುಗುವ ಭಕ್ತ. ಕಂಬಳಿಯ ಕಪನಿ, ಕವಡೆಯ ಮಾಲೆ, ಢಮರು, ತ್ರಿಶೂಲ, ಕಂಚಿನ ಅಥವಾ ಮರದ ದೋಣಿಯಂತಹ ಭಿಕ್ಷಾಪಾತ್ರೆ, ತಲೆಗೆ ಕರಡಿ ಚರ್ಮದ ಟೋಪಿ ಹಾಗೂ ಕೊರಳಲ್ಲಿ ಹುಲಿ ಚರ್ಮದ (ಅರಿಸಿನ) ಭಂಡಾರದ ಚೀಲ—ಇದು ಅವನ ವೇಷ. ಈತ ಬೇಡುತ್ತಾ ಭಕ್ತರ ಕಾಣಿಕೆ ಸ್ವೀಕರಿಸಿ ಬಾಳುತ್ತಾನೆ. ಜಾತ್ರೆಯ ಕಾಲಕ್ಕೆ ನಾಯಿಯಂತೆ ನಡೆಯುತ್ತ, ಬೊಗಳುತ್ತ, ಪವಾಡಾದಿಗಳನ್ನು ಮಾಡುತ್ತಾನೆ. ತ್ರಿಶೂಲದಿಂದ ಚುಚ್ಚಿಕೊಳ್ಳುವುದು, ಲಂಗರು ಅಥವಾ ಸರಪಳಿ ಹರಿಯುವುದು, ಕೆಂಡಸೇವೆ, ಇತ್ಯಾದಿ ಪವಾಡಗಳು ಇವರಿಂದ ಆಗುತ್ತವೆ. 'ಗೊರವನ ಡುಂಡುಚಿ'ಯ ಉಲ್ಲೇಖವನ್ನು ಬಸವಣ್ಣನವರು ಮಾಡಿದ್ದಾರೆ. ಗುಡ್ಡದ ಗುಡ್ಡಾಪುರದಲ್ಲಿ ದಸರೆಯ ದಿನ ಗೊರವನೊಬ್ಬ ಕಾಲ ಮೀನಖಂಡದಲ್ಲಿ ಮರದ ಗೂಟ ಹೊಡೆದು ಅತ್ತ ತೂರಿಸಿಕೊಂಡು, ಹೀಗೆ ಆದ ತೂತಿನಿಂದ ಹಗ್ಗ, ಜಾಲಿಮುಳ್ಳು ಹಾಯಿಸಿಕೊಳ್ಳುತ್ತಾನೆ.

ಭೈರವನಿಗೆ ನಾಯಿಗಳು ಪರಿವಾರ. ಭೈರವ ಮತ್ತು ಮೈಲಾರ ಮೂರ್ತಿಗಳಲ್ಲಿ ವ್ಯತ್ಯಾಸವೆಂದರೆ, ಭೈರವ ತ್ರಿಶೂಲ, ಢಮರು, ಖಡ್ಗದ ಜೊತೆ ಶಿರದಿಂದ ಒಡೆದ ರುಂಡವನ್ನು ಹಿಡಿದಿರುತ್ತಾನೆ. ಈ ರುಂಡದಿಂದ ಇಳಿಯುವ ರಕ್ತಕ್ಕೆ ನಾಯಿ ಒಂದು ಬಾಯಿಯಿಕ್ಕುತ್ತಿರುತ್ತದೆ. ಭೈರವನ ಜೊತೆ ಏಳು ನಾಯಿಗಳು ಇರುತ್ತವೆಂದು ಹೇಳಿಕೆಯುಂಟು. ಭೈರವಭಕ್ತರಾದ ವಗ್ಗಯ್ಯಗಳು ಹೀಗಾಗಿ ನಾಯಿಗಳನ್ನು ಅನುಕರಿಸುತ್ತಾರೆ. 'ಮೈಲಾರನ ಪೂಜಿಸಿ ನಾಯಾಗಿ ಬಗಳುವುದು ಕಂಡೆ' ಎಂದು ಬಸವಣ್ಣನವರೂ, 'ಮೈಲಾರನನಾರಾಧಿಸಿ ನಾಯಾಗಿ ಬಗಳುತ್ತಿಪ್ಪರಯ್ಯ'

ಎಂದು ಚೆನ್ನಬಸವಣ್ಣನವರೂ ಹೇಳಿದ್ದನ್ನು ಇಲ್ಲಿ ನೆನೆಯಬಹುದು. ಮರಾಠಿಯಲ್ಲಿ ವಾಗ್ಯಾ (ವಗ್ಗಯ್ಯ)ನನ್ನು ಉಲ್ಲೇಖಿಸುವ ಹಲವಾರು ಮಾತುಗಳಿವೆ: ಗಾದೆಗಳೂ ಇವೆ. ಮಹಾರಾಷ್ಟ್ರದಲ್ಲಿ ಮೈಲಾರನ ಸೇವೆಗೆ ಮೀಸಲಾದ 'ಮುರಳಿ' ಎಂಬ ದೇವದಾಸಿಯರೂ ಇದ್ದರು. ವಗ್ಗಯ್ಯ ವಿವಾಹಿತನಾದರೆ, ಮುರಳಿ ವೇಶ್ಯಾವೃತ್ತಿ ನಡೆಸುತ್ತಾಳೆ. ಇವರಿಗೆ ಕರ್ನಾಟಕದಲ್ಲಿ 'ಗೊರವಮ್ಮ' ಎಂದು ಹೇಳುತ್ತಾರೆ. ಕರ್ನಾಟಕದಲ್ಲಿ ವೇಶ್ಯಾವೃತ್ತಿ ನಡೆಸುವ ಗೊರವಮ್ಮ ಈಗ ಇಲ್ಲ. ಮಹಾರಾಷ್ಟ್ರದಲ್ಲಿಯೂ ಅವರ ಸಂಖ್ಯೆ ತೀರ ಕಡಿಮೆಯಾಗಿದೆ. ಆದರೆ ಹಿಂದೆ ಜೇಜೂರಿಯಂಥ ಕ್ಷೇತ್ರದಲ್ಲಿ ಈ 'ಮುರಳಿ'ಯರ ಹಿಂಡೇ ಇತ್ತೆಂದು ತಿಳಿಯುತ್ತದೆ. 'ಮರುಳಿ' ಎಂಬ ಕನ್ನಡ ಶಬ್ದ 'ಮುರಳಿ' ಆಗಿದೆ, ಎಂದು ಡಾ|| ಪಿ.ಬಿ. ದೇಸಾಯಿ ಹೇಳಿದ್ದಾರೆ. ಈಗ ಕುಲವಂತ ಸ್ತ್ರೀಯರೂ 'ಗೊರವಮ್ಮ'ನ ವೇಷ ತೊಟ್ಟು ತೀರ್ಥಯಾತ್ರೆಯ ಕಾಲಕ್ಕೆ ಮಾತ್ರ 2–3 ದಿನ ಇದ್ದು ಹರಕೆ ತೀರಿಸುವುದುಂಟು.

ಈ ಮೈಲಾರನ ಪೂಜೆ ಕಾಳಾಮುಖರಿಂದ ಹುಟ್ಟಿರಬೇಕು. ಹಿಂದೆ ಶುದ್ಧ ಶೈವರಾಗಿದ್ದ ಬಬ್ಬೂರು ಕಮ್ಮೆ ಬ್ರಾಹ್ಮಣರು ಇವನ ಭಕ್ತರಾಗಿರುವುದಕ್ಕೆ ಇದರಿಂದ ಸಮರ್ಥನೆ ದೊರಕುತ್ತದೆ. ಕಾಳಾಮುಖ ಪಂಥವನ್ನು 'ಎಕ್ಕೋಟಿ ಸಮಯ' 'ಎಕ್ಕೋಟಿ ಮಠ' ಎಂದು 11–12ನೆಯ ಶತಮಾನದ ಶಾಸನಗಳಲ್ಲಿ ಕರೆದಿದೆ. ಮೈಲಾರನ ಭಕ್ತರು 'ಏಳ್ಕೋಟಿ ಏಳ್ಕೋಟಿಗ್ಲೋ' ಎಂತಲೂ 'ಎಳ್ಕೋಟಿ ಚಾಂಗು ಭಲಾ' ಎಂತಲೂ ಘೋಷಣೆ ಕೂಗುತ್ತಾರೆ. ಮಲ್ಲಾಸುರನನ್ನು ಕೊಲ್ಲುವಾಗ ಭೈರವ ಏಳು ಕೋಟಿ ಗಣಗಳೊಂದಿಗೆ ಹೋದ, ಎಂದು ಏಳು ಕೋಟಿಯ ಒಡೆಯ, ಎಂದು ಅವನನ್ನು ಸ್ಮರಿಸುವರು. 'ಸಪ್ತಕೋಟೀಶ್ವರ' ಎಂದು ಶಿವನನ್ನು ಕರೆಯುವ ಪ್ರಸಿದ್ಧ ದೇವಾಲಯ ಗೋವೆಯ ನಾರ್ವೆಯಲ್ಲಿ ಇದೆ, ಗೋವೆಯ ಕದಂಬರು 'ಸಪ್ತಕೋಟೀಶ್ವರನ ಲಬ್ಧ ವರಪ್ರಸಾದ'ರೆಂಬ ಬಿರುದುಳ್ಳವರು. ಕಾಳಾಮುಖರ ಅರ್ಚಕರನ್ನೂ ಗೊರವ ಎನ್ನುವರು. ಅನೇಕ ಶಾಸನಗಳಲ್ಲಿ ಇದು ಕಾಣಬರುತ್ತದೆ. ಅಲ್ಲದೆ, ಈಗಿನ ಖ್ಯಾತ ಮೈಲಾರ ಕ್ಷೇತ್ರವಾದ ಬಳ್ಳಾರಿ ಜಿಲ್ಲೆಯ ಮಣ್ಣು ಮೈಲಾರ (ಹಡಗಲಿ ತಾಲ್ಲೂಕು) ಹಾಗೂ ಸೋಗಿ (ಹಡಗಲಿ) ತಾಲ್ಲೂಕುಗಳಲ್ಲಿರುವ ಕಲಿನಾಥ ಅಥವಾ ಕಲಿದೇವರ ದೇವಾಲಯಕ್ಕೂ ಮೈಲಾರ ದೇವಾಲಯಕ್ಕೂ ಇರುವ ನಿಕಟ ಸಂಬಂಧ ಶಾಸನಗಳಲ್ಲಿ ಉಲ್ಲೇಖವಾಗಿದೆ. ಈ ದೇವಾಲಯಗಳು ಕಾಳಾಮುಖರವು.

ಈ ದೇವರ ಆರಾಧನೆಯನ್ನು ಮನೆವೆರ್ಗಡೆ ಜಟ್ಟಿಪ ಎಂಬಾತ ರೂಢಿಗೆ ತಂದ, ಎಂದು ಬ್ರಹ್ಮಶಿವನ 'ಸಮಯ ಪರೀಕ್ಷೆ'ಯಲ್ಲಿ ಹೇಳಿದೆ. ಈ ಜಟ್ಟಿಪ 11ನೆಯ ಶತಮಾನದಲ್ಲಿ ಇದ್ದ ಒಬ್ಬ ಚಾಳುಕ್ಯ ಅಧಿಕಾರಿ ಇರಬಹುದೆಂದು ಭಾವಿಸಲಾಗಿದೆ. ಅದಲ್ಲದೆ. ಮೈಲಾರನೆಂದರೆ, ಒಬ್ಬ ಜೈನವೀರ, ಆತ ಹೋರಾಡಿ ಸತ್ತು ಆತನ ಪೂಜೆ ಆರಂಭವಾಯಿತು, ಎಂದು ಬ್ರಹ್ಮಶಿವ ಹೇಳುತ್ತಾನೆ. ಆದರೆ, ಶಂಕರಾಚಾರ್ಯರ ಕಾಲದಲ್ಲೇ ಮೈಲಾರನ ಆರಾಧನೆ ರೂಢಿಯಲ್ಲಿ ಇತ್ತು, ಎಂಬುದು ಆನಂದಗಿರಿಯ

'ಶಂಕರ ವಿಜಯ' (13ನೆಯ ಶತಕ)ದಲ್ಲಿ ಉಲ್ಲೇಖಿತವಾಗಿದೆ. ಉಜ್ಜೈನಿ ಬಳಿಯ ಮಲ್ಲಪತ್ತನ ಎಂಬಲ್ಲಿ ಮೈಲಾರನ ಆರಾಧಕರಾದ ಬ್ರಾಹ್ಮಣರು ಶಂಕರರ ಕಾಲದಲ್ಲಿ ಇದ್ದರೆಂದು ಅಲ್ಲಿ ಹೇಳಿದೆ. 'ಶಂಕರದಾಸಿಮಯ್ಯನ ರಗಳೆ' ಬರೆದ ಹರಿಹರನೂ 'ಶಂಕರ ದಾಸಿಮಯ್ಯನ ಪುರಾಣ' ಎಂಬ ಇನ್ನೊಂದು ಕೃತಿಯೂ ಶಂಕರ ದಾಸಿಮಯ್ಯನು ತನ್ನ ಪ್ರಭಾವದಿಂದ ಮೈಲಾರನು ತನಗೆ ಕೊಡೆಹಿಡಿಯುವಂತೆ ಮಾಡಿದ, ಎಂದು ಹೇಳಿವೆ. ಇದರ ವಿಶೇಷಾರ್ಥವೇನೂ ತಿಳಿಯದು. ಕಲ್ಯಾಣ ಚಾಳುಕ್ಯರ ಕಾಲದಲ್ಲಿ 'ಮೈಳಲದೇವಿ' ಎಂಬ ಹೆಸರು ರಾಣಿಯರಿಗಿತ್ತು: ಗೋವೆ ಕದಂಬರಲ್ಲೂ ಇತ್ತು.

ಕರ್ನಾಟಕದ ಮಂಡ್ಯ ಜಿಲ್ಲೆಯ ಬೆಳ್ಳೂರು, ಮೈಲಾರಪಟ್ಟಣ, ಶಿವಮೊಗ್ಗ ಜಿಲ್ಲೆಯ ಕುಬಟೂರು, ಕವಲೆದುರ್ಗ, ಚಿತ್ರದುರ್ಗ ಜಿಲ್ಲಾ ಹೊಸದುರ್ಗ ತಾಲ್ಲೂಕಿನ ಮೈಲಾರ ಲಿಂಗ, ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಬಳಿಯ ಹಳೆ ಮೈಲಾರ, ಹೊಸ ಮೈಲಾರ, ಧಾರವಾಡ ಜಿಲ್ಲೆಯ ದೇವರಗುಡ್ಡ (ಗುಡ್ಡದ ಗುಡ್ಡಾಪುರ) ಮತ್ತು ಧಾರವಾಡ ಬಳಿಯ ಮೈಲಾರಲಿಂಗನ ಗುಡ್ಡ, ಬಳ್ಳಾರಿ ಜಿಲ್ಲೆಯ ಮಣ್ಣ ಮೈಲಾರ (ಹಡಗಲಿ ತಾಲ್ಲೂಕು) ಹಾಗೂ ಹರಪನಹಳ್ಳಿ ಬಳಿಯ ಹಿರೇ ಮೈಲಾರ, ರಾಯಚೂರು ಜಿಲ್ಲೆಯ ಆನೆಗೊಂದಿ, ಕಲ್ಬುರ್ಗಿ ಜಿಲ್ಲೆಯ ಯಾದಗಿರಿ, ಬಿದರೆ ಜಿಲ್ಲೆಯ ಖಾನಾಪುರದ ಬಳಿಯ ಮೈಲಾರಪುರ, ಬೆಳಗಾವಿ ಜಿಲ್ಲೆಯ ಮಂಗಸೂಳಿ ಮತ್ತು ಕಾರಿಮನಿ, ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ಬಳಿಯ ಜಾಡ್ನಳ್ಳಿ—ಇವೆಲ್ಲ ಕರ್ನಾಟಕದ ಉಲ್ಲೇಖನೀಯ ಮೈಲಾರ ಕ್ಷೇತ್ರಗಳು. ಕೊನೆಯ ಸ್ಥಳದಲ್ಲಿ ಈ ಆರಾಧನೆ, ಇತ್ತೀಚೆಗೆ, 10-20 ವರ್ಷಗಳಲ್ಲಿ ಆರಂಭವಾಗಿದೆ. ಮಹಾರಾಷ್ಟ್ರದಲ್ಲಿ ಪುಣೆ ಬಳಿಯ ಜೇಜೂರಿ ಅತ್ಯಂತ ಪ್ರಸಿದ್ಧ ಕ್ಷೇತ್ರ. ಇದಲ್ಲದೆ ಔರಂಗಾಬಾದ್ ಜಿಲ್ಲೆಯ ಸತಾರಾ, ಅಹ್ಮದ್ ನಗರ ಜಿಲ್ಲೆಯ ಪಾಲಿ, ಉಸ್ಮಾನಾಬಾದ್ ಜಿಲ್ಲೆಯ ಅಣದೂರು, ನಳದುರ್ಗ ಮಾಲೆಗಾಂವ್ ಹೀಗೆ ಅನೇಕ ಗಣ್ಯಕ್ಷೇತ್ರಗಳಿವೆ. ಬ್ರಾಹ್ಮಣ ರಾದ ಪೇಶ್ವೆಯರೂ ಕುರುಬರಾಗಿದ್ದ ಇಂದೂರಿನ ಹೋಳ್ಕರರೂ ಇಂಥ ಕ್ಷೇತ್ರಗಳಿಗೆ ಅಪಾರ ದಾನ ನೀಡಿದ್ದಾರೆ. ಆಂಧ್ರದಲ್ಲೂ ಹಿಂದೆ ಇದ್ದ ಹಲವಾರು ಮೈಲಾರ ಕ್ಷೇತ್ರ ಗಳನ್ನು ಪ್ರೊ॥ ಖರೆಯವರು ಪಟ್ಟಿಮಾಡಿದ್ದಾರೆ. ಮೈಲಾರಭಕ್ತರು ಬಹು ಸಂಖ್ಯೆ ಯಲ್ಲಿರುವ ಊರುಗಳ ಹೊರಗೂ ಮೈಲಾರ ದೇವಾಲಯದ ಪರಿಸರದಲ್ಲೂ ಹೊರೆಗಲ್ಲಿನಂತೆ ರಚಿಸಿದ ಉತ್ತರದ ಒಂದು ಕಲ್ಲಿನಲ್ಲಿ ಬೆಂಚಿನಂಥ ರಚನೆ ಇದ್ದು, ಪೀಠರೂಪದಲ್ಲಿರುವ ಅಡ್ಡಲಾದ ಶಿಲೆಯ ಮಧ್ಯೆ ಕಲ್ಲಿನ ತ್ರಿಶೂಲಶಿರ ಕೆತ್ತಿರುತ್ತಾರೆ. ಇದನ್ನು "ಶಿಬಾರ" ಎನ್ನುವರು.

ಇಲ್ಲಿನ ಕೆಲ ಕ್ಷೇತ್ರಗಳಿಗೆ ಯಾತ್ರೆಗೆ ಹೋಗುವ ಕೆಲವು ಮುಸಲ್ಮಾನರು ಈ ಮೈಲಾರ ದೇವರನ್ನು 'ಮಲ್ಲು ಖಾನ್' ಎನ್ನುವರು. ಯೂಸುಫ್ ಆದಿಲ್ ಷಾ ನ ಒಬ್ಬ ಹಿಂದೂ ಸತಿಯ ಮಗನ ಹೆಸರು ಕೂಡ ಮಲ್ಲೂ ಖಾನ್. ಇದಲ್ಲದೆ,

ಜೇಜೂರಿಯ ಖಂಡೋಬನಿಗೆ 'ಅಜಮತ್‌ಖಾನ್' ಎಂಬ ಹೆಸರನ್ನು ಔರಂಗಜೇಬ ಕೊಟ್ಟನಂತೆ. ಈ ಬಗ್ಗೆ ಒಂದು ಕತೆಯೂ ಪ್ರಚಲಿತವಾಗಿದೆ. 'ಅಸಾಧಾರಣ ಪುರುಷ' ಎಂದು ಇದರ ಅರ್ಥ.

ಕೊಂಕಣ, ಗೋವೆಯಲ್ಲಿ ಇರುವ ರವಳನಾಥ ಎಂಬ ದೇವರೂ 'ಲವಲೀ' ಎಂಬ ಬಿಳಿಯ ಗಡ್ಡೆಯ ಬಳ್ಳಿಯಿಂದಾಗಿ ಆ ಹೆಸರು ಪಡೆದ ಭೈರವ ಅಥವಾ ಮೈಲಾರನೇ ಎಂದು ಪ್ರೊ|| ಖರೆ ತೋರಿಸಿಕೊಟ್ಟಿದ್ದಾರೆ. ಆ ದೇವರ ಮೂರ್ತಿ ಲಕ್ಷಣವೂ ಇದನ್ನು ಒಪ್ಪುತ್ತದೆ.

ಈ ದೇವರು ಕರ್ನಾಟಕ ಮೂಲದವನೇ. ಕಾಳಾಮುಖ ಪಂಥ ಪ್ರಬಲವಾಗಿದ್ದ ಧಾರವಾಡ–ಬಳ್ಳಾರಿ ಪ್ರದೇಶದಿಂದ ಈತ 'ಉದಿಸಿ'ರಬೇಕು. ಗ್ರಾಮದೇವತೆಗಳು–ಮಾರಿ, ಅಣ್ಣಮ್ಮ, ಪಾತಾಳಮ್ಮ, ಇತ್ಯಾದಿ–ಶಕ್ತಿಯ ಜೊತೆ ಏಕೀಕೃತರಾದಂತೆ, ಯಾವನೋ ಈ ಪ್ರದೇಶದ ಸ್ಥಾನೀಯ ವೀರನು ಭೈರವ–ಸಪ್ತಕೋಟೀಶ್ವರ–ನ ಜೊತೆ ಏಕೀಕೃತವಾಗಿರಬೇಕು. "ಐತಿಹಾಸಿಕವಾಗಿ ಮೊದಲು ಚಿಕ್ಕ ಗ್ರಾಮದೇವತೆಯಾಗಿದ್ದ ಮೈಲಾರ ಶಾಕ್ತಮತ ಪ್ರಭಾವದಿಂದ ಈಶ್ವರನ ಅವತಾರವೆನಿಸಿದನು" ಎಂದು ಡಾ|| ರಿತ್ತಿ ಅಭಿಪ್ರಾಯಪಡುತ್ತಾರೆ. ಮಣ್ಣ ಮೈಲಾರ (ಬಳ್ಳಾರಿ ಜಿಲ್ಲೆ), ದೇವರಗುಡ್ಡ, ಮೈಲಾರಲಿಂಗ (ಧಾರವಾಡ ಜಿಲ್ಲೆ), ಮೈಲಾರಪುರ, ನಳದುರ್ಗ, ಪಾಲೀ, ಜೇಜೂರಿ, ಸಾತಾರೆ, ನಿಮಗಾಂವ ಹೀಗೆ ಐತಿಹಾಸಿಕವಾಗಿ ಈತನ ಆರಾಧನೆ ವ್ಯಾಪಿಸುತ್ತ ಹೋಯಿತು, ಎಂದು ಪ್ರೊ|| ಖರೆ ಹೇಳುತ್ತಾರೆ.

ಗೊಗ್ಗಯ್ಯ (ಗೊರವ) ಗಳು 'ಮಲ್ಲಾಸುರ ವಧೆ' ಕತೆಯ ಜಾನಪದ ಹಾಡುಗಳನ್ನು ಹಾಡುತ್ತಾರೆ: ಮೈಲಾರಲಿಂಗನ ಮಹಿಮೆ ವರ್ಣಿಸುತ್ತಾರೆ. ವಿಚಿತ್ರ ನೃತ್ಯ ಮಾಡುತ್ತಾರೆ. ಮರಾಠಿಯಲ್ಲೂ ಇಂಥ ಜಾನಪದ ಸಾಹಿತ್ಯ ವಿಪುಲವಾಗಿದೆ. ಮಾಳಚಿ–ಬಾಣವ್ವೆಯರ ವಾದ ವಿವಾದ, ಜಗಳವೂ ಈ ಮರಾಠಿ ಹಾಡುಗಳಲ್ಲಿ ಇದೆ.

ಈ ಆರಾಧನೆಯ ಮೂಲ, ವ್ಯಾಪ್ತಿ, ಪ್ರಭಾವಗಳ ಬಗ್ಗೆ ಇನ್ನಷ್ಟು ಅಧ್ಯಯನಕ್ಕೆ ಅವಕಾಶವಿದೆ.

ಆಧಾರ ಗ್ರಂಥಗಳು :

1) ಗಣೇಶ ಹರಿ ಖರೆ, ಮಹಾರಾಷ್ಟ್ರಚೀಂ ಚಾರ್ ದೈವತೇಂ (ಮರಾಠಿ), ಪುಣೆ, 1958.
2) ಭಾರತೀಯ ಸಂಸ್ಕೃತಿ ಕೋಶ (ಮರಾಠಿ), ಸಂ : ಪಂಡಿತ ಮಹಾದೇವಶಾಸ್ತ್ರಿ ಜೋಶಿ, ಪುಣೆ.
3) ಶ್ರೀನಿವಾಸ ರಿತ್ತಿ, ಮೈಲಾರದೇವರು, ಧಾರವಾಡ, 1972.
4) ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, 1966.
5) ಕರ್ನಾಟಕ ಗ್ಯಾಸೆಟಿಯರ್ (ಇಂಗ್ಲೀಷ್), ಬೆಂಗಳೂರು 1982–83.
6) ಹಲವು ಶಾಸನ ಮಾಲಿಕೆಗಳು.
7) ಲೇಖಕ ಸ್ವತಃ ನಡೆಸಿದ ಸಮೀಕ್ಷೆ.

ಪ್ರತಿಷ್ಠಾನದ ಪ್ರಕಟನೆಗಳು

1.	ಮಣಿಹ (ಫ. ಗು. ಹಳಕಟ್ಟಿ ಸಂಸ್ಮರಣ ಸಂಪುಟ)	50–00
2.	ಬೇಂದ್ರೆ ಸ್ಮೃತಿ (ಸಾಹಿತ್ಯ ಭಂಡಾರದಲ್ಲೂ ದೊರೆಯುತ್ತದೆ)	5–00
3.	ಸರ್ವಜ್ಞ ವಚನಗಳು	15–00
4.	ಸೂತ ಭಾರತ	15–00
5.	ಶ್ರೀ ಕೃಷ್ಣದೇವರಾಯ ದಿನಚರಿ	10–00
6.	ಹಸ್ತಪ್ರತಿ ಶಾಸ್ತ್ರ	15–00

ದತ್ತಿ ಉಪನ್ಯಾಸ ಮಾಲೆ

7.	ಮೂರು ದತ್ತಿ ಉಪನ್ಯಾಸಗಳು	10–00
8.	ವೈವಸ್ವತ ಮನು	5–00
9.	ಮೂರು ದತ್ತಿ ಉಪನ್ಯಾಸಗಳು—೧೯೮೮	10–00

ತಿಮ್ಮಪ್ಪದಾಸ ಪ್ರಕಾಶನ ಮಾಲೆ

10.	ಕೀರ್ತನ ಕುಸುಮಾಂಜಲಿ	10–00
11.	ಧ್ರುವ ಚರಿತ್ರೆ	15–00

ಶ್ರೀ ಜನ್ಮಶತಾಬ್ದಿ ಕೃತಿಮಾಲೆ

12.	ಶ್ರೀ ವಾಣಿ (ಸೂಕ್ತಿಸಂಗ್ರಹ)	1–00
13.	ಆಚಾರ್ಯ ಬಿ.ಎಂ.ಶ್ರೀ. (ಜೀವನ ಚಿತ್ರ)	2–00
14.	ಕನ್ನಡ ಕಣ್ವ ಬಿ.ಎಂ.ಶ್ರೀ. (ಮಕ್ಕಳಿಗೆ)	1–50
15.	ಶ್ರೀಯವರ ಆಯ್ದ ಕವನಗಳು	2–00
16.	ಶ್ರೀನಿಧಿ (ಸಂಸ್ಮರಣ ಸಂಪುಟ)	60–00
17.	**B M S The Man & His Mission**	25–00
18.	ಶ್ರೀಗಂಧ (ಸಂಸ್ಮರಣ ಸಂಚಿಕೆ)	10–00
19.	ಇಂಗ್ಲಿಷ್ ಗೀತಗಳು (ಆಂಗ್ಲ ಮೂಲಕವನಗಳೊಂದಿಗೆ)	20–00
20.	ಲೋಚನ ('ಶ್ರೀ' ವಿಶೇಷಾಂಕ)	10–00

ಶ್ರೀ ಲಕ್ಷ್ಮೀ ಪ್ರಿಂಟರ್ಸ್, ಸುಬ್ರಮಣ್ಯ ಆಯಿಲ್ ಮಿಲ್ ಹಿಂಭಾಗ (ಕತ್ತರಗುಪ್ಪೆ ಹತ್ತಿರ),
ಬನಶಂಕರಿ 3ನೇ ಘಟ್ಟ, ಬೆಂಗಳೂರು–560 085